ಡಿಸೆಂಬರ್ 15, 2024

40ನೇ ವರ್ಷದಲ್ಲಿ

www.facebook.com/firstcrimenewspaper/

ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

1963

ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ

ಬೆಲೆ : ₹20/-

## 1 ಕೋಟಿ ರೂ.ಗಳ ಇನ್ಸುರೆನ್ಸ್ ಹಣ ಪಡೆಯಲು ಅಣ್ಣನನ್ನೇ

# ಸ್ನೇಹಿತರ ಜೊತೆ ಸೇರಿ ಕೊಲೆಗೈದ ನೀಚ ತಮ್ಮ!





## ಆಸ್ತಿಗಾಗಿ ಪತಿಯನ್ನೇ ಕೊಲೆ ಮಾಡಿಸಿದ ಕಿರಾತಕಿ!

## ಕಾಂಗ್ರೆಸ್ ನೇತೃತ್ವದ ಇಂಡಿಯಾ ಒಕ್ಕೂಟದಲ್ಲಿ ಬಿರುಕು!

## ಲವ್ ಮಾಡಿದವಳನ್ನೇ ಕೊಂದೇ ಬಿಟ್ಟ!





## ಅಸಭ್ಯವಾಗಿ ಚಿತ್ರಗಳನ್ನು ಬಿಡಿಸಿ ಮನೆ ಮುಂದೆ ಇಡುತ್ತಿದ್ದ ಸೈಕೋ!

# ಜಯಂತ್ ರೈ ಹತ್ಯೆಗೆ 30 ವರ್ಷ

## ಮುತ್ತಪ್ಪ ರೈ ಮೇಲಿನ ಸೇಡಿಗೆ ವಿರೋಧಿಗಳ ಗುಂಡಿಗೆ ಬಲಿಯಾದ ನತದೃಷ್ಟ

**''ಹಮ್ ಬದ್ ಲಾ ಲೇಂಗೆ ಅಮರ್'' ಅಂತ ಮುಂಬೈ ಶಾರ್ಪ್ ಶೂಟರ್‌ಗಳಾದ ಫ್ರಾನ್ಸಿಸ್ ಕುಟಿನ್ಹಾ-ರಮೇಶ್ ಪೂಜಾರಿ, ಪ್ರಾಣ ಮಿತ್ರ ಅಮರ್ ಆಳ್ವ ಶವದೆದುರು ಅದ್ಯಾವ ಘಳಿಗೆಯಲ್ಲಿ ಶಪಥ ಮಾಡಿದರೋ, ಅಶ್ವಿನಿ ದೇವತೆಗಳೂ ತಥಾಸ್ತು ಅಂದಿರಬೇಕು! ಅದುವರೆಗೂ ಮುತ್ತಪ್ಪ ರೈ ಸುತ್ತ ಸುತ್ತುತ್ತಿದ್ದ ಶನಿ ನಂತರ ನೇರವಾಗಿ ಪ್ರವೇಶ ಪಡೆದದ್ದು ಮಾತ್ರ ಜಯಂತ್ ರೈ ಜಾತದೊಳಕ್ಕೆ. ಅದೊಂದು ದಿನ ಬೆಂಗಳೂರಿನ ನ್ಯಾಯಾಲಯ ಆವರಣದಲ್ಲಿ ಮುತ್ತಪ್ಪ ರೈ ಹತ್ಯೆಗೆ ನಡೆದ ಯತ್ನ ವಿಫಲಗೊಂಡಿತ್ತಲ್ಲ? ಸುದ್ದಿ ಕೇಳಿದ ರಮೇಶ್ - ಫ್ರಾನ್ಸಿಸ್ ಆಕ್ರೋಶದಿಂದ ಕುದಿಯುತ್ತಿದ್ದರು. ''ಸಾಲಾ ಕಮೀನಾ, ಬಚ್ ಗಯಾ, ಅಭಿ ಜಯಂತ್ ರೈ ಕೋ ಬಿ ಪಕಡ್ನಾ ಮುಷ್ಕಿಲ್ ಹೋಗಾ'' ಅಂತ ರಮೇಶ್ ಸಣ್ಣಗೆ ಅರಚುತ್ತಿದ್ದ. 'ಪಕಡಗ್ನೆ ಕೇ ಲಿಯೇ ಮುಷ್ಕಿಲ್ ಹೋಗಾ, ಮಗರ್ ಮಾರ್ನಾ ಅಸಾನ್ ಹೈ'' ಅಂತ ತಣ್ಣಗಿನ ದನಿಯಲ್ಲಿ ಪ್ರತಿಕ್ರಿಯಿಸಿದ್ದು ಮಾತ್ರ ಫ್ರಾನ್ಸಿಸ್ ಕುಟಿನ್ಹಾ. ಇದಾದ ಕೆಲವೇ ಸಮಯಗಳ ನಂತರ ಅಜ್ಞಾತ ಸ್ಥಳ ಒಂದರಲ್ಲಿ ಕುಳಿತ ಅವರಿಬ್ಬರೂ ಅದೇನೋ ಮಾತನಾಡಿಕೊಂಡರು. ಇಬ್ಬರೂ ಯಾವುದೋ ಬಲವಾದ ನಿರ್ಧಾರಕ್ಕೆ ಬಂದಂತಿತ್ತು. ಕೆಲವೇ ನಿಮಿಷಗಳಲ್ಲಿ ಅವರಿಬ್ಬರನ್ನು ಹೊತ್ತ ಬಿಳಿ ಬಣ್ಣದ ಪುಟ್ಟ ಮಾರುತಿ ಒಮ್ನಿ ವ್ಯಾನ್ ಬಿ.ಸಿ. ರೋಡು ಸೇತುವೆ ದಾಟಿ ಪುತ್ತೂರಿನ ಮರೀಲ್‌ನತ್ತ ಹೋಗುವುದು ಕಾಣಿಸಿತು. ಜಯಂತ್ ರೈ ಎಂಬ ಭೂಗತ ಲೋಕದ ದೊಡ್ಡ ಆಲದ ಮರವೊಂದನ್ನು ಹೊಡೆದುರುಳಿಸಲು ನಡೆದ ಆರಂಭದ ಪ್ರಯತ್ನವಿದು. ನಂತರ ನಡೆದ ಘಟನೆಗಳೆಲ್ಲ ಈಗ ಇತಿಹಾಸ.**

ಮಂಗಳೂರು

✍ ಮೋಹನ್ ಬೋಳಂಗಡಿ

ಪುತ್ತೂರಿನ ಪ್ರತಿಷ್ಠಿತ ಬಂಟರ ಮನೆಯ ಸಮಸ್ತ ಸುಖಗಳ ನಡುವೆಯೇ ಬೆಳೆದ ಉಕ್ಕಿನ ದೇಹದ ಎದೆಗಾರನ ಹೆಸರು ಜಯಂತ್ ರೈ. ಬದುಕಿದ್ದಾಗಲೇ ದಂತಕತೆಯಾಗಿ ಹೋದವರು. ಜೀವನದ ಅತಿದೊಡ್ಡ ಭಾಗ್ಯವನ್ನೆಲ್ಲ ಪುತ್ತೂರು, ಮಂಗಳೂರು, ಬೆಂಗಳೂರಿನ ಭೂಗತಲೋಕದ ಕಾಳಗದಲ್ಲೇ ಕಳೆದ ನಿರ್ಭಾಗ್ಯ ಶ್ರೀಮಂತ.

ಎಲ್ಲವೂ ಸರಿಯಾಗಿ ಹೋಗಿದ್ದರೆ ಪುತ್ತೂರಿನ ಶಾಸಕನಾಗಬಹುದಾಗಿದ್ದ ಜಯಂತ್ ರೈ ಎಂಬ ಬಿಸಿ ರಕ್ತದ ಯುವಕ, ಪಾತಕ ಲೋಕದ ಬ್ಲಾಕ್‌ಲೈನ್ ದಾಟಿ ಬಂದು ನಿಂತದ್ದೇ ಒಂದು ದೌರ್ಭಾಗ್ಯದ ಕಥೆ.

ಹೀಗೆ ಪುತ್ತೂರು ಪರಿಸರದ ಪೆರ್ಲಂಪಾಡಿಯ ದುಗ್ಗಲಡ್ಕ ಗ್ರಾಮದ ಪಕೀರಪ್ಪ ರೈ ಎಂಬ ಪ್ರಗತಿಪರ ಕೃಷಿಕರೊಬ್ಬರ ಕೊನೆಯ ಪುತ್ರ, ಡಾನ್ ಜಯಂತ್ ರೈ ಆಗಿ, ಬೆಂಗಳೂರು, ಮಂಗಳೂರು, ಪುತ್ತೂರು ಭೂಗತ ಲೋಕದ 'ಮೀಟರ್' ಇರುವ ಕೆಲವೇ ಫೈಟರ್‌ಗಳಲ್ಲಿ ಒಬ್ಬನಾಗಿ ಬೆಳೆದು ಬಂದ ಕಥೆ ಇದೆಯಲ್ಲ? ಅದು ನಿಜಕ್ಕೂ ರೋಚಕ. ರೋಮಾಂಚಕ.

ಪುತ್ತೂರು ಪೊಲೀಸ್ ಠಾಣೆಯ ಹಳೆಯ ಕಡತಗಳಲ್ಲಿ, ಬೋಳುವಾರು, ಕಲ್ಲೇಗದ ಕತ್ತಲ ಗಲ್ಲಿಗಳಲ್ಲಿ, ಮುತ್ತಪ್ಪ ರೈನ ಹಳೆಯ ಪರಾಕ್ರಮಗಳಲ್ಲಿ ಜಯಂತ್ ರೈ ಹೆಸರು ಮೊದಲ ಸಾಲಿನಲ್ಲಿದೆ.

ಬೆಂಗಳೂರು, ಮಂಗಳೂರು ಮತ್ತು ಪುತ್ತೂರಿನ ಭೂಗತ ಲೋಕ ಕಂಡ ಭಯಾನಕ ಘಟನೆಗಳಲ್ಲಿ, ರಕ್ತ ಹೆಪ್ಪುಗಟ್ಟುವ ಕ್ರೌರ್ಯಗಳಲ್ಲಿ, 1980ರ ದಶಕ ಕಂಡ ಅಂಡರ್‌ವರ್ಲ್ಡ್ ಚಟುವಟಿಕೆಗಳ ಪರಮಾವಧಿಗಳಲ್ಲಿ ಹಠಾತ್ತನೆ ಕಾಣಿಸಿಕೊಂಡು ಅಷ್ಟೇ ಬೇಗ ಮರೆಯಾದ ಹೆಸರು ಜಯಂತ್ ರೈಯದ್ದು.

ಓಲೆಮುಂಡ ಮೋಹನ್ ರೈ ಪುತ್ತೂರಿನಲ್ಲಿ ಆ ಕಾಲದ ದೊಡ್ಡ ಮನುಷ್ಯ ಎಂದು ಗುರುತಿಸಿಕೊಂಡವರು. ಈಗ ಕಾಂಗ್ರೆಸ್ ಮುಖಂಡರಾಗಿರುವ ಕಾವು ಹೇಮನಾಥ ಶೆಟ್ಟಿ ಇದ್ದಾರಲ್ಲ? ಅವರ ಪತ್ನಿಯ ತಂದೆ ರಾಮಪ್ಪ ರೈಯೊಂದಿಗೆ ಅದ್ಯಾಕೋ ಮೋಹನ್ ರೈಗಳಿಗೆ ಮನಸ್ತಾಪವಿತ್ತು. ಇದು ವಿಕೋಪಕ್ಕೇರಿದಾಗ ರಾಮಣ್ಣ ರೈ ಮೇಲೆ ಹಲ್ಲೆ ಮಾಡುವ ಜವಾಬ್ದಾರಿ ಹೊರಿಸಿದ್ದು ಇದೇ ಜಯಂತ್ ರೈಗೆ. ಇದು ಅವರ ವಿರುದ್ಧದ ಮೊದಲ ಪೊಲೀಸ್ ಕೇಸೂ ಹೌದು. ನಂತರದ ದಿನಗಳಲ್ಲಿ ಹುಡುಗತನ, ತಾಕತ್ತು, ಹುಂಬತನವೇ ಜಯಂತ್ ರೈಯನ್ನು ಪಾತಕಲೋಕದ ಮೊದಲ ಮೆಟ್ಟಿಲು ಹತ್ತಿಸಿದವು.

ಜಯಂತ್ ಸ್ಪುರದ್ರೂಪಿ. ಎಲ್ಲಕ್ಕಿಂತ ಹೆಚ್ಚಾಗಿ ಧೈರ್ಯಶಾಲಿ. ಪುತ್ತೂರಿನ ಮಯೂರ ಥಿಯೇಟರ್ ಬಳಿ ಬಿಜೆಪಿಯವರೊಂದಿಗೆ ನಡೆದ ಕದನದಲ್ಲಿ ಬೊಳುವಾರಿನ ಚಂದ್ರ ಎಂಬಾತನ ಕೈಯನ್ನೇ ಅನಾಮತ್ತಾಗಿ ಕತ್ತರಿಸಿ ಹಾಕಿದ್ದ ಬಲಶಾಲಿ!

ಅಧಿಕಾರ, ದೈತ್ಯ ಶಕ್ತಿ, ಯಾವ ಕ್ಷಣದಲ್ಲಾದರೂ ನೂರಾರು ಶಕ್ತಿ ಫೈಟರ್‌ಗಳನ್ನು ಕಲೆ ಹಾಕಬಲ್ಲ ತಾಕತ್ತು, ಏನನ್ನು ಬೇಕಾದರೂ, ಯಾರನ್ನು ಬೇಕಾದರೂ ಎದುರಿಸಬಲ್ಲ ಪೈಶಾಚಿಕ ಧೈರ್ಯ, ಈ ಜನ್ಮದಲ್ಲಿ ಯಾವ ಕಾರಣಕ್ಕೂ ತನ್ನ ವಿರೋಧಿಗಳಿಂದ ಸಾಯುವುದಿಲ್ಲ ಎಂಬ ಒರಟು ನಂಬಿಕೆ, ರಾಜಕಾರಣಿಗಳಿಂದ ಹಿಡಿದು ಪೊಲೀಸ್ ಅಧಿಕಾರಿಗಳ ತನಕ ಮಿತ್ರತ್ವ- ಇವೆಲ್ಲದರ ಸಂಕಲ್ಪವಾಗಿದ್ದರು.

ಜಯಂತ್ ರೈ ಒಟ್ಟು ಗ್ಯಾಂಗಿನ ಸುದ್ದಿಯೇ ಬೇರೆ. ಅದೊಂದು ಚಿಕ್ಕ ಸೈನ್ಯ. ಅದರಲ್ಲಿ ಪಕ್ಕಾ ಫೈಟರ್‌ಗಳಿದ್ದರು. ಅಪ್ಪಟ ಕ್ರಿಮಿನಲ್‌ಗಳಿದ್ದರು. ಶತ್ರುವಿನ ಮಾಹಿತಿ ಸಂಗ್ರಹಿಸುವ ಬೇಹುಗಾರರಿದ್ದರು. ಇದ್ಯಾವುದಕ್ಕೂ ಸಂಬಂಧವಿಲ್ಲದ ಹುಂಬರಿದ್ದರು. ಕಾಲೇಜು ವಿದ್ಯಾರ್ಥಿಗಳಿದ್ದರು, ಉದ್ಯಮಿಗಳಿದ್ದರು, ರಾಜಕಾರಣಿಗಳಿದ್ದರು, ಪತ್ರಕರ್ತರಿದ್ದರು, ಪೊಲೀಸರೂ ಇದ್ದರು. ಪುತ್ತೂರಿನ ಯಾವ ಏರಿಯಾದಲ್ಲಿ, ಯಾವ ಗಲ್ಲಿಯಲ್ಲಿ ಹುಡುಕಿದರೂ ಅವರಿಗೆ ಒಂದಿಬ್ಬರು ಗೆಳೆಯರು ಸಿಕ್ಕೇ ಸಿಗುತ್ತಿದ್ದರು. ಜಯಂತ್ ರೈಗಿದ್ದ ತಾಕತ್ತೇ ಅದು.

ತನ್ನ ಹತ್ಯೆಗೆ ಯತ್ನ ನಡೆಯುತ್ತಿದೆ ಎಂಬ ಬಗ್ಗೆ ಜಯಂತ್‌ಗೆ ಆಗಾಗ ಮಾಹಿತಿಗಳು ಬರುತ್ತಿತ್ತು. ಹತ್ಯೆ ನಡೆಯುವ ಕೇವಲ 12 ಗಂಟೆಗಳ ಮೊದಲು ತ್ರಿವೇಣಿ ಬಾರ್‌ನ ವಿಟ್ಟಲ್ ಶೆಟ್ಟಿ, ಪುತ್ತೂರಿನ ಪೂಜಾ ಫೈನಾನ್ಸ್ ಮಾಲೀಕರಾದ ನಿತ್ಯಾನಂದ ಶೆಟ್ಟಿಯವರನ್ನು ಸಂಪರ್ಕಿಸಿ, 'ಪಡೀಲ್ ಬಳಿ ರಮೇಶ್ ಪೂಜಾರಿ ಮತ್ತು ಫ್ರಾನ್ಸಿಸ್ ಬಂದು ಹೋದ ಬಗ್ಗೆ ಮಾಹಿತಿಗಳಿವೆ. ಜಯಂತ್‌ಗೆ ಜಾಗ್ರತೆಯಾಗಿರಲು ಹೇಳಿ' ಎಂದಿದ್ದರು. ಕೆಮ್ಮಾಯಿಯಲ್ಲಿ ಜಯಂತ್ ರೈ ಚುನಾವಣಾ ಪ್ರಚಾರದಲ್ಲಿದ್ದಾಗಲೇ ನಿತ್ಯಾನಂದ ಶೆಟ್ಟಿ 'ವಿಷಯ ಹೀಗೀಗಿದೆ' ಅಂದಿದ್ದರು. ಜಯಂತ್ ಈ 'ಮರಣ ಸಂದೇಶ'ವನ್ನು ಗಂಭೀರವಾಗಿ ತೆಗೆದುಕೊಂಡಿರಲಿಲ್ಲ. ನಕ್ಕು ಸುಮ್ಮನಾಗಿದ್ದರು ಅಷ್ಟೇ.

ಅದೇ ರಾತ್ರಿ ಅಭ್ಯರ್ಥಿ ವಿನಯ್‌ಕುಮಾರ್ ಸೊರಕೆ, ಸ್ವಾಗತ ಹೋಟೆಲ್‌ನ ಸೂರಜ್, ನಿತ್ಯಾನಂದ ಶೆಟ್ಟಿ ಮತ್ತಿತರರೊಂದಿಗೆ ಮಂಜಲ್ಪಡ್ಡು ಎಂಬಲ್ಲಿನ ಉಸ್ಮಾನ್ ಹಾಜಿ ಎಂಬುವರ ಮನೆಯಲ್ಲಿ ಔತಣಕೂಟ ನಡೆದಿತ್ತು. ರಾತ್ರಿ ಫೈನಾನ್ಸ್ ಮಾಲೀಕರನ್ನು ಮನೆಗೆ ಬಿಡುವ ಕೊನೆಗಳಿಗೆಯಲ್ಲಿ ಪ್ರೀತಿಯಿಂದ ಕೈ ಹಿಡಿದುಕೊಂಡು 'ನಾಳೆ ಸಿಗೋಣ. ತುಂಬಾ ಮಾತನಾಡುವುದಿದೆ' ಅಂದಿದ್ದರು. ಆದರೆ ಮರುದಿನ ಮಾತನಾಡಲು ಜಯಂತ್ ಇರುವುದೇ ಇಲ್ಲ ಎಂಬುದು ಯಾರಿಗೂ ತಿಳಿದಿರಲಿಲ್ಲ!



ವಿರೋಧಿ ಪಡೆ ತನ್ನ ಹತ್ಯೆಗೆ ಪ್ರಯತ್ನ ನಡೆಸುತ್ತಲೇ ಇದೆ ಎಂಬುದು ಜಯಂತ್‌ಗೆ ಗೊತ್ತಿತ್ತು. ಆದರೆ ತನ್ನದೇ ಊರಿನ, ತನ್ನ ಜೊತೆಗೆ ಇರುವ, ಹುಡುಗನೊಬ್ಬ ತನಗೆ ಮರಣದಂಡನೆ ವಿಧಿಸುವ ಕಟುಕನಾಗುತ್ತಾನೆ ಎಂಬುದು ಮಾತ್ರ ಗೊತ್ತಿರಲಿಲ್ಲ.

ಇವೆಲ್ಲದರ ನಡುವೆ ಬೆಂಗಳೂರಿನ ಭೂಗತಲೋಕದ ಸಿಂಹಾಸನದಲ್ಲಿ ಕುಳಿತೇ ಪುತ್ತೂರಿನಲ್ಲೂ ತನ್ನ ಸಾಮ್ರಾಜ್ಯ ಸ್ಥಾಪಿಸಿ ಅದನ್ನು ವಿಸ್ತರಿಸಿಕೊಳ್ಳುವ ಯತ್ನದಲ್ಲಿದ್ದ ಮುತ್ತಪ್ಪ ರೈಗೆ ಅದೇಕೋ ಜಯಂತ್ ರೈ ಮೇಲೆ ಅನುಮಾನ, ಅಸಹನೆ ಮೂಡಲಾರಂಭಿಸಿತ್ತು. ಜಯಂತ್ ತನ್ನನ್ನು ಮೀರಿ ಬೆಳೆಯುತ್ತಿದ್ದಾನಾ? ತನ್ನ ಗಡೆಯವರೆಲ್ಲ ಆತನಿಗೆ ಮಾತ್ರ ನಿಷ್ಠರಾಗಿಬಿಡುತ್ತಾರಾ? ಎಂಬ ಅನುಮಾನದ ಹುಳ ರೈ ತಲೆ ಹೊಕ್ಕಿತ್ತು. ಪುತ್ತೂರಿನಲ್ಲಿ ಮುತ್ತಪ್ಪ ರೈ ಪರ ಗ್ಯಾಂಗ್ ವಾರ್ ನಡೆಸಿ, ಬೆಂಗಳೂರಿನ ಡಾನ್ ಜಯರಾಜ್ ಕೊಲೆಯಲ್ಲೂ ಪ್ರಮುಖ ಪಾತ್ರ ವಹಿಸಿದ ತನಗೆ ರೈಯಿಂದ ಯಾವುದೇ ರೀತಿಯ ಹಣಕಾಸು ನೆರವು ದೊರೆಯುತ್ತಿಲ್ಲ. ಬದಲಾಗಿ ತನ್ನನ್ನೇ ಅನುಮಾನಿಸಲಾರಂಭಿಸಿದ್ದಾರೆ ಎಂಬ ಅಸಹನೆ ಜಯಂತ್ ರೈಗಿತ್ತು. ಕಾದ ಎಣ್ಣೆಗೆ ಒಗ್ಗರಣೆ ಹಾಕಿದಂತೆ ಸರ್ವ ಕಾಲೇಜು ವಿದ್ಯಾರ್ಥಿ ಸಂಘದ ಅಧ್ಯಕ್ಷನಾಗಿದ್ದ ಸುರೇಸ್ ರೈ ಎಂಬಾತ ಇವರಿಬ್ಬರ ಸಂಬಂಧವನ್ನು ಮತ್ತಷ್ಟು ಹಾಳುಗೆಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಅನ್ನುವವರೂ ಇದ್ದಾರೆ.

ವಿನಯ್‌ಕುಮಾರ್ ಸೊರಕೆ, ಯುವ ಕಾಂಗ್ರೆಸ್ ಅಧ್ಯಕ್ಷ ಕಳ್ಳಿಗೆ ತಾರಾನಾಥ ಶೆಟ್ಟಿಯವರೊಂದಿಗೆ ಅದೊಂದು ದಿನ ಮಡಿಕೇರಿಯ ತನ್ನ ಮನೆಗೆ ಬಂದಿದ್ದ ಜಯಂತ್ ರೈಯನ್ನು ಗೇಟಿನ ಬಳಿಯ ತಡೆದು ನಿಲ್ಲಿಸಿ ಬನ್ನಂಜೆ ರಾಜ ಎಂಬಾತನಿಂದ ಸಂಪೂರ್ಣವಾಗಿ ಚೆಕ್ ಮಾಡಿ ಮನೆಯೊಳಗೆ ಬಿಟ್ಟುಕೊಂಡದ್ದು ಇವರಿಬ್ಬರ ನಡುವೆ ಕಂಟಕವನ್ನು ಮತ್ತಷ್ಟು ಹೆಚ್ಚಿಸಿತ್ತು. ಅನುಮಾನವೆಂಬುದು ಅಬನಂಬಿಕೆಯ ರೂಪ ತಳದಾಗಿತ್ತು.

ಈ ಎಲ್ಲ ಘಟನೆಗಳಿಂದ ಜಯಂತ್ ತೀವ್ರವಾಗಿ ನೊಂದಿದ್ದರು. ಈ ನಡುವೆ ತನ್ನದೇ ಜಾತಿಯ, ಪ್ರತಿಷ್ಠಿತ ಬೆಳ್ಳಿಪ್ಪಾಡಿ ಮನೆತನದ ಯುವತಿಯೊಂದಿಗೆ ಪ್ರೀತಿ ಮೂಡಿತ್ತು. ಭೂಗತಲೋಕದಿಂದ ಹೊರಬಂದು ಸಹಜ ಜೀವನ ನಡೆಸುವ ಆಸೆ ಅವರಲ್ಲಿತ್ತು. ಪ್ರೀತಿಸಿದ ಹುಡುಗಿಯೇ ಇವರಲ್ಲಿ ನೆಮ್ಮದಿಯಾಗಿ ಬದುಕುವ ಅಭಿಲಾಷೆ ಮೂಡಿಸಿದ್ದಳು.

ವರ್ಷಗಟ್ಟಲೆ ಪ್ರೀತಿಸಿದ ಹುಡುಗಿಯೊಂದಿಗೆ ಹಸೆಮಣೆ ಏರುವ ಕನಸು ಕಂಡಿದ್ದ ಜಯಂತ್. ಆಕೆಯ ವಿಷಯದಲ್ಲಿ ತುಂಬಾ ಜಾಸ್ತಿನೇ ಸೆಂಟಿಮೆಂಟಲ್ ಕೂಡ ಆಗಿದ್ದರು. ಮದುವೆಯ ನಂತರ ಕೂಡ ಗಲ್ಫ್ ರಾಷ್ಟ್ರ ಒಂದರಲ್ಲಿ ಸೆಟಲ್ ಆಗುವ ಯೋಜನೆ ಕೂಡ ಅವರಲ್ಲಿತ್ತು.

ಇದ ವೇಳೆ ರಾಜ್ಯ ವಿಧಾನಸಭೆಗೆ ಚುನಾವಣೆಗಳು ಘೋಷಣೆಗೊಳ್ಳುತ್ತಿದ್ದಂತೆಯೇ ರಮೇಶ್ ಮತ್ತು ಫ್ರಾನ್ಸಿಸ್ ಹತ್ಯೆಗೆ ಅಂತಿಮ ಮುಹೂರ್ತ ನಿಗದಿಪಡಿಸಿದರು.

ಯಾವ ಘಳಿಗೆಯಲ್ಲಿ ಜಯಂತ್ ರೈಯನ್ನು ಹತ್ಯೆ ಮಾಡುವ ಮಾತನಾಡಿದ್ದರೋ? ಮಾತನಾಡಿದ ಮೇಲೆ ಆ ಕೆಲಸವನ್ನು ಮಾಡದೇ ಇರುವ ಜಾಯಮಾನವೇ ಅಲ್ಲ ಅವರಿಬ್ಬರದು. ಒಬ್ಬ ಮನುಷ್ಯನ ಮೈಯೊಳಕ್ಕೆ ಗುಂಡು ನಾಟುತ್ತದೆ ಅನ್ನುವುದಾದರೆ ಆತ ಯಾವನಾದರೂ, ಎಷ್ಟೇ ದೊಡ್ಡವನಾದರೂ ಕೊಲ್ಲಬಹುದು ಅನ್ನುವ ನಂಬಿಕೆ ಫ್ರಾನ್ಸಿಸ್ ಕುಟಿನ್ಹಾಗೆ ಅವತ್ತಿಗೂ ಇತ್ತು. ಇವತ್ತಿಗೂ ಇದೆ.

ಹಾಗೆ ಜಯಂತ್ ರೈ ಎಂಬ ನತದೃಷ್ಟ ಯುವಕ ಕಾಂಗ್ರೆಸ್ ಅಭ್ಯರ್ಥಿ ವಿನಯ್‌ಕುಮಾರ್ ಸೊರಕೆ ವಿಜಯಕ್ಕೆ ಭರ್ಜರಿ ತಯಾರಿ ಆರಂಭಿಸುತ್ತಿರುವ ಹೊತ್ತಿನಲ್ಲಿಯೇ ಅದೊಂದು ದಿನ ಅಮಾವಾಸ್ಯೆಯ ರಾತ್ರಿ ಮರವೂರು ಜಗದೀಶ್ ಶೆಟ್ಟರ ಗೆಸ್ಟ್ ಹೌಸ್‌ನಿಂದ ಹೊರಟ ನೀಲಿ ಬಣ್ಣದ ಮಾರುತಿ ಒಮ್ನಿ ಕಾರೊಂದು ಬಿ.ಸಿ. ರೋಡ್ ಸೇತುವೆ ದಾಟಿ ಪುತ್ತೂರಿನತ್ತ ಹೊರಟಿತ್ತು. ಸ್ಟೇರಿಂಗ್ ಹಿಡಿದು ಕುಳಿತಿದ್ದ ರಮೇಶ್ ಪೂಜಾರಿ ನಿರಾಸಕ್ತಿಯಿಂದ ಬಲ ಕೈ ತುದಿ ಬೆರಳು ಹಾಗೂ ಮೂರನೇ ಬೆರಳಿನ ಮಧ್ಯೆ ಉರಿಯುತ್ತಿದ್ದ ಸಿಗರೇಟ್ ಅನ್ನು ಕಿಟಕಿಯ ಹೊರಗೆ ಎಸೆದುಬಿಟ್ಟ. ಪಕ್ಕದ ಸೀಟಿನಲ್ಲಿ ಫ್ರಾನ್ಸಿಸ್ ಎಂದಿನಂತೆ ನಿರ್ಭಾವುಕನಾಗಿ ಕುಳಿತಿದ್ದ. ಕಾರು ತನ್ನ ಪವರ್‌ಫುಲ್ ಹೆಡ್‌ಲೈಟ್ ಹೆಚ್ಚಿಸಿಕೊಂಡು ಮೀಡಿಯಂ ವೇಗದಲ್ಲಿ ಚಲಿಸುತ್ತಿತ್ತು. ಪುತ್ತೂರು ಸಮೀಪಿಸುತ್ತಿದ್ದಂತೆಯೇ ಮಂಜಲ್ಪಡುಪುವಿನ ಸುದಾನ ಚರ್ಚ್ ಎದುರು ಬಪ್ಪಳಿಗೆ ಕಮಲಾಕ್ಷ ಎಂಬುವನನ್ನು ಹತ್ತಿಸಿಕೊಂಡ ಕಾರು ಕೊನೆಗೆ ಬಂದು ನಿಂತದ್ದು ಮರೀಲ್ ಸಮೀಪದ ಸುನಿಲ್ ಡಿಸೋಜಾ ಮನೆ ಮುಂದೆ.

ಜಯಂತ್ ಹತ್ಯೆ ಹೇಗಾಗಬೇಕು ಎಂಬ ವಿವರಗಳನ್ನು ನೀಡುವ ಮೂಲಕ ಸುನಿಲ್ ಎಂಬ 'ಹರಕೆಯ ಕುರಿ'ಯನ್ನು ರಮೇಶ್ ಪೂಜಾರಿ ತಯಾರು ಮಾಡುತ್ತಿದ್ದರೆ, ಪಕ್ಕದಲ್ಲಿದ್ದ ಫ್ರಾನ್ಸಿಸ್, 'ನಿನ್ನ ಸಹೋದರಿಯರ ಮದುವೆಗೆ ನೆರವು ನೀಡುವ ಜವಾಬ್ದಾರಿ ನಮ್ಮದು. ನಿನ್ನ ಕುಟುಂಬಕ್ಕೆ

☞ 10

# ಆಸ್ತಿಗಾಗಿ ಮಗಳು ಮತ್ತು ಮಗಳ ಪ್ರಿಯಕರನೊಂದಿಗೆ ಸೇರಿ ಗಂಡನನ್ನು ಕೊಲೆ ಮಾಡಿಸಿದ ಪತ್ನಿ ಸುಧಾ!


ಪ್ರಮುಖ ಆರೋಪಿ ಸುಧಾ


ಕೊಲೆಯಾದ ಸೋಮಶೇಖರ್

**ಸಾಂಸಾರಿಕ ವಿಚಾರದಲ್ಲಿ ಮನಸ್ತಾಪ ಉಂಟಾಗಿ ಗಂಡನಿಂದ ದೂರವಾಗಿದ್ದ ಪತ್ನಿಯೊಬ್ಬಳು ಗಂಡನ ಆಸ್ತಿಯನ್ನು ಲಪಟಾಯಿಸಲು ಮಗಳು ಮತ್ತು ಆಕೆಯ ಪ್ರಿಯಕರನೊಂದಿಗೆ ಸೇರಿಕೊಂಡು ತಾಯಿ ಜೊತೆ ಇದ್ದ ಮಗಳನ್ನು ಗಂಡನ ಮನೆಗೆ ಬಿಡುವಂತೆ ಕರೆಸಿಕೊಂಡು ಕಂಠ ಪೂರ್ತಿ ಮದ್ಯ ಕುಡಿಸಿ ನಶೆಯಲ್ಲಿದ್ದವನ ಕತ್ತು ಕೊಯ್ದು ಸಾಯಿಸಿ, ಶವಕ್ಕೆ ಕಲ್ಲು ಕಟ್ಟಿ ಬಾವಿಗೆ ಎಸೆದು ಪರಾರಿಯಾಗಿದ್ದ ಆರೋಪಿಗಳಾದ ಪತ್ನಿ, ಮಗಳು ಮತ್ತು ಪ್ರಿಯಕರನನ್ನು ಮುಳಬಾಗಿಲು ಗ್ರಾಮಾಂತರ ಠಾಣೆ ಪೊಲೀಸರು ಬಂಧಿಸಿ ಜೈಲಿಗೆ ಕಳುಹಿಸುವಲ್ಲಿ ಯಶಸ್ವಿಯಾಗಿದ್ದಾರೆ.**


**ಕೋಲಾರ**
✍ ಕೋಲಾರ ಮಂಜು

ಕೆಜಿಎಫ್ ತಾಲ್ಲೂಕಿನ ಬೇತಮಂಗಲ ಹೋಬಳಿಗೆ ಸೇರಿದ ಗೆನ್ನೆರಹಳ್ಳಿಯ ವಾಸಿ ರಾಮಕೃಷ್ಣಪ್ಪ ಮತ್ತು ಗಂಗೋಜಮ್ಮ ದಂಪತಿಗಳಿಗೆ ಸೋಮಶೇಖರ್, ಸುರೇಶ್, ರಾಧಮ್ಮ ಎಂಬ ಮೂರು ಜನ ಮಕ್ಕಳಿರುತ್ತಾರೆ. ಇವರಿಗೆಲ್ಲರಿಗೂ ಮದುವೆ ಗಳಾಗಿರುತ್ತದೆ. ದೊಡ್ಡ ಮಗ ಸೋಮಶೇಖರ್ ಗ್ರಾಮದಲ್ಲಿಯೇ ವಾಸವಿರುವ ಸೋದರಮಾವನ ಮಗಳಾದ ಸುಧಾ ಎನ್ನುವವರನ್ನು ಮದುವೆಯಾಗಿದ್ದು, ಇವರಿಗೆ ಶೈಲಜಾ, ಅಕ್ಷಯ, ಸಂಜನ ಮತ್ತು ಜಗನ್ ಸೇರಿದಂತೆ ಮೂರು ಜನ ಹೆಣ್ಣು ಮಕ್ಕಳು ಮತ್ತು ಒಂದು ಗಂಡು ಮಗನಿರುತ್ತಾನೆ. ಸೋಮಶೇಖರ್ ಮತ್ತು ಸುರೇಶ್ ಇಬ್ಬರು ತಂದೆತಾಯಿ ಜೊತೆಯಲ್ಲಿಯೇ ವಾಸವಾಗಿದ್ದು, ಸಹೋದರ ಸುರೇಶ್ ಮದುವೆಯಾದ ನಂತರ ಸೋಮಶೇಖರ್ ಹೆಂಡತಿ, ಮಕ್ಕಳೊಂದಿಗೆ ತಮ್ಮ ಗ್ರಾಮದಲ್ಲಿ ಬೇರೆಯಾಗಿ ವಾಸವಾಗಿದ್ದರು. ಗಾರೆ ಮೇಸ್ತ್ರಿಗಳಾಗಿರುವ ಅಣ್ಣತಮ್ಮಂದಿರಾದ ಸೋಮಶೇಖರ್ ಮತ್ತು ಸುರೇಶ್ ಇಬ್ಬರು ಒಂದೇ ಕಡೆ ಕೆಲಸ ಮಾಡುತ್ತಿದ್ದರು. ಅಣ್ಣ ಮನೆ ಬಿಟ್ಟು ಬೇರೆ ಹೋದರೂ ಸುರೇಶ್ ಮಾತ್ರ ತಂದೆತಾಯಿ ಜೊತೆಯಲ್ಲಿಯೇ ವಾಸವಾಗಿದ್ದರು. ಸೋಮಶೇಖರ್ ರವರು ಮಕ್ಕಳು ದೊಡ್ಡವರಾಗುತ್ತಿದ್ದಂತೆ ದೊಡ್ಡ ಮಗಳು ಶೈಲಜಾಳನ್ನು ಮುಳಬಾಗಿಲು ತಾಲ್ಲೂಕಿನ ಗಡ್ಡಂಚಿನ್ನೇನಪಲ್ಲಿ ಗ್ರಾಮದ ವಾಸಿ ಶಶಿಕುಮಾರ್‌ರವರ ಜೊತೆ ಮದುವೆ ಮಾಡಿಕೊಟ್ಟಿರುತ್ತಾರೆ. ಸುಮಾರು ನಾಲ್ಕು ವರ್ಷದ ಹಿಂದೆ ಸಾಂಸಾರಿಕ ವಿಚಾರದಲ್ಲಿ ಮನಸ್ತಾಪ ಉಂಟಾಗಿ ಗಂಡ ಸೋಮಶೇಖರ್ ರವರನ್ನು ಪತ್ನಿ ಸುಧಾ ಬಿಟ್ಟು ಮುಳಬಾಗಿಲು ನಗರದ ಶಿವಕೇಶವನಗರದ ನಂಜಪ್ಪನವರ ಮನೆಯನ್ನು ಬಾಡಿಗೆಗೆ ತೆಗೆದುಕೊಂಡು ಮೂವರು ಮಕ್ಕಳೊಂದಿಗೆ ವಾಸವಾಗಿದ್ದಳು. ಸೋಮಶೇಖರ್ ಮಾತ್ರ ನಾಲ್ಕು ವರ್ಷಗಳಿಂದ ತನ್ನ ಮನೆಯಲ್ಲಿ ಒಂಟಿಯಾಗಿ ವಾಸವಾಗಿದ್ದರು.

ನವೆಂಬರ್ 17ರಂದು ಮಧ್ಯಾಹ್ನ 2 ಗಂಟೆಗೆ ಗಾರೆಮೇಸ್ತ್ರಿ ಸುರೇಶ್‌ರವರು ಮುಳಬಾಗಿಲು ಗ್ರಾಮಾಂತರ ಪೊಲೀಸ್ ಠಾಣೆಗೆ ಹಾಜರಾಗಿ ನನ್ನ ಅಣ್ಣ ಸೋಮಶೇಖರ್ (42)ರವರು ನವೆಂಬರ್ 6ರಂದು ಬೆಳಿಗ್ಗೆ 10 ಗಂಟೆ ಸಮಯದಲ್ಲಿ ನಮ್ಮ ಮನೆಗೆ ಬಂದು ತಾಯಿಯಾದ ಗಂಗೋಜಮ್ಮನವರ ಬಳಿ ನನ್ನ ಮಗಳಾದ ಶೈಲಜಾರವರು ನೆನ್ನೆ ಮುಳಬಾಗಿಲಿನಲ್ಲಿ ಸಿಕ್ಕಿ ನಾನು ಗಂಡನ ಜೊತೆ ಮಾತನಾಡಿದ್ದೇನೆ ನೀವು ನಾಳೆ ನನ್ನನ್ನು ಗಡ್ಡಂಚಿನ್ನೇಪಲ್ಲಿಯಲ್ಲಿ ಬಿಟ್ಟು ನಂತರ ಶಿವಕೇಶವನಗರದಲ್ಲಿರುವ ಬಾಡಿಗೆ ಮನೆಯನ್ನು ಖಾಲಿ ಮಾಡಿಕೊಂಡು ಇರುವ ಸಾಮಾನುಗಳನ್ನು ಹಾಕಿಕೊಂಡು ಅಮ್ಮ ಸುಧಾರವರನ್ನು ಗೆನ್ನೇರಹಳ್ಳಿಗೆ ಕರೆದುಕೊಂಡು ಹೋಗುವಂತೆ ಹೇಳಿದಳು. ಅದಕ್ಕೆ ನೀನು ಆಟೋ ಬಾಡಿಗೆಗೆ 500 ರೂ.ಗಳನ್ನು ಕೊಡು ನಾನು ಹೋಗಿ ದೊಡ್ಡ ಮಗಳನ್ನು ಗಂಡನ ಮನೆಗೆ ಬಿಟ್ಟು ನಂತರ ಹೆಂಡತಿ, ಮಕ್ಕಳನ್ನು ಕರೆದುಕೊಂಡು ಬರುತ್ತೇನೆಂದು ಹೇಳಿ ತಾಯಿಯಿಂದ 500 ರೂ.ಗಳನ್ನು ತೆಗೆದುಕೊಂಡು ಹೋದವರು ರಾತ್ರಿ ಎಷ್ಟೊತ್ತಾದರೂ ನನ್ನ ಅಣ್ಣ ಸೋಮಶೇಖರ್ ಅತ್ತಿಗೆ ಸುಧಾ ಮತ್ತು ಮಕ್ಕಳೊಂದಿಗೆ ಮನೆಗೆ ವಾಪಸ್ಸು ಬರಲಿಲ್ಲ. ಈ ವಿಚಾರ ತಿಳಿದ ನನ್ನ ತಾಯಿ ಗಂಗೋಜಮ್ಮನವರು ಕೂಡಲೇ ಅಣ್ಣನ ಮಗಳಾದ ಶೈಲಜಾರವರಿ ಫೋನ್ ಮಾಡಿ ನಿನ್ನ ತಂದೆ ಮುಳಬಗಾಲಿಗೆ ಹೋಗಿಬರುವುದಾಗಿ ಹೇಳಿ ಹೋದವರು ಇನ್ನು ಮನೆಗೆ ವಾಪಸ್ಸು ಬಂದಿಲ್ಲ. ನಿಮ್ಮಗಳ ಜೊತೆ ಇದ್ದಾರೆಯೇ ಎಂದು ಕೇಳಿದಕ್ಕೆ ಶೈಲಜಾರವರು ನನ್ನ ತಂದೆ ನಮ್ಮ ಬಳಿಗೆ ಬಂದಿರುವುದಿಲ್ಲ ಎಂದು ತಿಳಿಸಿದರು. ಆಗ ಅಮ್ಮ ಅಣ್ಣನ ಬರುವಿಕೆಗಾಗಿ ಕಾದಿದ್ದರು. ಆದರೆ ಅಣ್ಣ ಬರಲಿಲ್ಲ. ಮರುದಿನ ಬೆಳಿಗ್ಗೆ ಅಣ್ಣನ ಮಗ ಜಗನ್‌ರವರು ಏಕಾಏಕಿ ಅವರ ತಾಯಿ ಸುಧಾ ಹಾಗೂ ಅಕ್ಕಂದಿರಿಗೆ ಯಾವುದೇ ಮಾಹಿತಿಯನ್ನು ತಿಳಿಸದೆ ನೇರವಾಗಿ ನಮ್ಮ ಮನೆಗೆ ಬಂದನು. ನಾನು ಯಾಕೆ ನೀನು ಒಬ್ಬನೇ ಬಂದಿದ್ದೀಯಾ ಎಂದು ಕೇಳಿದ್ದಕ್ಕೆ ನಮ್ಮ ತಾಯಿ ಸುಧಾ ಮತ್ತು ಅಕ್ಕಂದಿರು ಮುಳಬಾಗಿಲು ನಗರದ ಶಿವಕೇಶವನಗರದ ಒಂದೇ ಕಟ್ಟಡದಲ್ಲಿ ಬೇರೆ ಬೇರೆಯಾಗಿ ವಾಸವಾಗಿದ್ದುಕೊಂಡು ಆ ಮನೆಗಳಿಗೆ ಗಂಡಸರು ಯಾರೆಂದರೆ ಅವರು ಬಂದು ಹೋಗುತ್ತಿರುತ್ತಾರೆ. ಅವರಲ್ಲಿ ಮುದುಗೆರೆ ಗ್ರಾಮದ ವಾಸಿ ಪ್ರವೀಣ್ ಮತ್ತು ತಾಯಲೂರು ಗ್ರಾಮದ ವಾಸಿ ಸುಭಾಷ್ ಎಂಬುವವರು ಹೆಚ್ಚಾಗಿ ತಮ್ಮ ಮನೆಗೆ ಬಂದು ಹೋಗುತ್ತಿದ್ದರೆಂದು ಹೇಳಿದನು. ಆಗ ನಾನು ಅಣ್ಣನ ಮಗ ಜಗನ್‌ಗೆ ಇನ್ನು ಮೇಲೆ ಮುಳಬಾಗಿಲಿಗೆ ಹೋಗಬೇಡ, ಇಲ್ಲಿಯೇ ನಮ್ಮ ಜೊತೆ ಇದ್ದು ಬಿಡುವಂತೆ ಹೇಳಿದೆ. ಅದರಂತೆ ಜಗನ್ ನಮ್ಮ ಮನೆಯಲ್ಲಿಯೇ ವಾಸವಾಗಿದ್ದನು.

ನವೆಂಬರ್ 8ರಂದು ಅಣ್ಣ


ಆರೋಪಿಗಳಾದ ಮಗಳು ಶೈಲಜಾ ಹಾಗೂ ಪ್ರಿಯಕರ ಸುರೇಶ್



ಎಸ್ಪಿ ನಿಖಿಲ್


ಡಿವೈಎಸ್ಪಿ ನಂದಕುಮಾರ್


ಸಿಪಿಐ ಕೆ.ಜಿ. ಸತೀಶ್


ಪಿಎಸ್‌ಐ ವಿಠಲ್ ವೈ. ತಳವಾರ್


ಪಿಎಸ್‌ಐ ಮಮತಾ


ಶವವನ್ನು ಎಸೆದಿದ್ದ ಬಾವಿ


ಆರೋಪಿಗಳನ್ನು ಬಂಧಿಸಿರುವ ಪೊಲೀಸರು

☞ 4

# ಗಂಡನನ್ನು ಕೊಲೆ ಮಾಡಿಸಿದ ಪತ್ನಿ ಸುಧಾ!

3 ☞

ಸೋಮಶೇಖರ್‌ರವರ ಬಗ್ಗೆ ವಿಚಾರಿಸಲು ತಂದೆ, ತಾಯಿ, ಅಮ್ಮನ ಮಗ ಜಗನ್, ಗ್ರಾಮದ ಮುನಿಸ್ವಾಮಿರವರ ಮಗ ಲಕ್ಷ್ಮಯ್ಯ , ದೊರೆಸ್ವಾಮಿರವರ ಮಗ ಚೆನ್ನಕೇಶವ ಹಾಗೂ ಸಂಬಂಧಿಕರೊಂದಿಗೆ ಮುಳಬಾಗಿಲು ನಗರದ ಶಿವಕೇಶವ ದೇವಸ್ಥಾನದ ಬಳಿಗೆ ಬಂದೆವು. ನಂತರ ತಂದೆ, ತಾಯಿಯನ್ನು ನಮ್ಮ ಅತ್ತಿಗೆ ಸುಧಾರವರ ಮನೆ ಬಳಿಗೆ ಕಳುಹಿಸಿ ಸೊಸೆ ಮತ್ತು ಮೊಮ್ಮಕ್ಕಳನ್ನು ಕರೆದುಕೊಂಡು ಬರಲು ತಿಳಿಸಿದೆವು. ಅದರಂತೆ ಅತ್ತಿಗೆ ಮನೆಗೆ ಹೋಗಿ ಶಿವಕೇಶವನಗರದಲ್ಲಿರುವ ದೇವಸ್ಥಾನದ ಮುಂಭಾಗಕ್ಕೆ ಕರೆದುಕೊಂಡು ಬಂದರು. ಆಗ ಅವರ ಬಳಿ ನಮ್ಮ ಅಣ್ಣ ಸೋಮಶೇಖರ್ ಮನೆಯಿಂದ ನಿಮ್ಮ ಬಳಿಗೆ ಹೋಗುವುದಾಗಿ ಹೇಳಿ ಹೋದವರು ಕಾಣೆಯಾಗಿದ್ದಾರೆಂದು ಹೇಳಲಾಗಿ ಅತ್ತಿಗೆ ಸುಧಾರವರು ಯಾವುದೇ ವಿಚಾರವನ್ನು ಹೇಳಲಿಲ್ಲ. ನಂತರ ನಾವುಗಳು ಊರಿಗೆ ಬಂದು ಬಿಟ್ಟೆವು. ಕೆಲವು ದಿನಗಳ ಕಾಲ ಅಣ್ಣ ಸೋಮಶೇಖರ್‌ರವರನ್ನು ಹುಡುಕಾಡಿದರು. ಅವರು ಎಲ್ಲಿಯೂ ಪತ್ತೆಯಾಗಲಿಲ್ಲ. ನವೆಂಬರ್ 12ರಂದು ನಮ್ಮ ತಂದೆ ರಾಮಕೃಷ್ಣಪ್ಪನವರು ಬೇತಮಂಗಲ ಪೊಲೀಸ್ ಠಾಣೆಗೆ ಹೋಗಿ ಮಗ ಸೋಮಶೇಖರ್ ಕಾಣೆಯಾಗಿದ್ದು ಹುಡುಕಿ ಕೊಡುವಂತೆ ದೂರು ನೀಡಿದರು. ಠಾಣೆ ಮೊ.ಸಂ. 15/2024 ಕಲಂ ಮನುಷ್ಯ ಕಾಣೆಯಾಗಿರುತ್ತಾನೆ. ರೀತ್ಯಾ ಪ್ರಕರಣವನ್ನು ದಾಖಲಿಸಿಕೊಂಡಿರುತ್ತಾರೆ.



ಸೋಮಶೇಖರನ ಶವ



### ಬಾವಿಯಲ್ಲಿ ಸೋಮಶೇಖರ್ ಶವ ಪತ್ತೆ

ಗಾರೆಮೇಸ್ತ್ರಿ ಸುರೇಶ್ ಗೆನ್ನೇರಹಳ್ಳಿಯ ತನ್ನ ಮನೆಯಲ್ಲಿರುವಾಗ ನವೆಂಬರ್ 17ರಂದು ಮಧ್ಯಾಹ್ನ 12 ಗಂಟೆ ಸಮಯದಲ್ಲಿ ಬೇತಮಂಗಲ ಪೊಲೀಸರು ಫೋನ್ ಮಾಡಿ ಯಾರೋ ಗಂಡಸಿನ ಮೃತದೇಹ ಮುಳಬಾಗಿಲು ತಾಲ್ಲೂಕಿನ ಖಾದ್ರಿಪುರ ಗ್ರಾಮದ ಕೆರೆಯ ಪಕ್ಕದ ಜಮೀನಿನ ಕಲ್ಲು ಬಾವಿಯಲ್ಲಿ ತೇಲುತ್ತಿದ್ದು ಹೋಗಿ ನೋಡಿ ಎಂದು ತಿಳಿಸಿದರು. ಅದರಂತೆ ಸುರೇಶ್, ತಂದೆ, ತಾಯಿ, ಸೋಮಶೇಖರ್ ಮಗ ಜಗನ್, ಸಂಬಂಧಿಕರು ಮತ್ತು ಗ್ರಾಮಸ್ಥರು ಖಾದ್ರಿಪುರ ಗ್ರಾಮದ ನಾಗರಾಜ್‌ರವರ ಜಮೀನಿನಲ್ಲಿರುವ ಕಲ್ಲು ಕಟ್ಟಡದ ಗುಂಡು ಬಾವಿ ಬಳಿಗೆ ಮಧ್ಯಾಹ್ನ 1 ಗಂಟೆ ಹೋಗಿ ನೋಡಲಾಗಿ ಮುಳಬಾಗಿಲು ಗ್ರಾಮಾಂತರ ಪೊಲೀಸ್ ಠಾಣೆಯ ಸಿಬ್ಬಂದಿ ಮತ್ತು ಅಗ್ನಿಶಾಮಕದಳದ ಸಿಬ್ಬಂದಿಯವರು ಹಾಜರಿದ್ದರು. ಅಗ್ನಿಶಾಮಕ ದಳದ ಸಿಬ್ಬಂದಿಯವರು ಮೃತದೇಹವನ್ನು ಬಾವಿಯ ನೀರಿನಿಂದ ಮೇಲಕ್ಕೆ ಎತ್ತಿ ಬಾವಿಯ ದಡದ ಮೇಲೆ ಇಟ್ಟರು. ಆಗ ಪೊಲೀಸರು ಅಪರಿಚಿತ ಗಂಡಸಿನ ಮೃತದೇಹದ ಗುರುತು ಪತ್ತೆಗಾಗಿ ಬಾವಿಯ ಸುತ್ತ ಸೇರಿದ ಗ್ರಾಮಸ್ಥರಿಗೆ ವ್ಯಕ್ತಿ ಯಾರೆಂದು ಪತ್ತೆಹಚ್ಚಲು ತಿಳಿಸಿದರು. ರಾಮಕೃಷ್ಣಪ್ಪ - ಗಂಗೋಜಮ್ಮ ದಂಪತಿಗಳು ಹಾಗೂ ಸುರೇಶ್ ಮೃತದೇಹದ ಮೇಲಿದ್ದ ಬಟ್ಟೆಗಳನ್ನು ನೋಡಿ ಸದರಿ ಮೃತದೇಹವು ನಮ್ಮ ಮಗ ಸೋಮಶೇಖರನ ಮೃತದೇಹವಾಗಿರುತ್ತದೆಂದು ಹೇಳಿದರಲ್ಲದೆ, ಸೋಮಶೇಖರ್ ಕತ್ತಿನಲ್ಲಿ ಉದ್ದನೆಯ ಹರಿತವಾದ ಗಾಯವಾಗಿದ್ದು, ಅವರು ಬಳಸುತ್ತಿದ್ದ ಟರ್ಕಿ ಟವಲ್‌ನಿಂದ ಎರಡು ಕೈಗಳಿಗೆ ಕಟ್ಟಿ, ಹೊಟ್ಟೆ ಮತ್ತು ಸೊಂಟಕ್ಕೆ ಲುಂಗಿ ಬಟ್ಟೆಯ ಪೀಸುಗಳಿಂದ ಕಲ್ಲನ್ನು ಕಟ್ಟಿ ಬಾವಿಗೆ ಎಸೆದಿರುವಂತೆ ಕಾಣುತ್ತಿದ್ದು, ಯಾರೋ ದುಷ್ಕರ್ಮಿಗಳು ಯಾವುದೋ ಕಾರಣಕ್ಕಾಗಿ ಕತ್ತಿನ ಕೆಳಗೆ ಯಾವುದೋ ಆಯುಧದಿಂದ ಗಾಯಪಡಿಸಿ ಸಾಯಿಸಿ ಕೊಲೆಯನ್ನು ಮರೆ ಮಾಚುವ ಉದ್ದೇಶದಿಂದ ಮೃತದೇಹಕ್ಕೆ ಕಲ್ಲು ಕಟ್ಟಿ ಬಾವಿಗೆ ಎಸೆದು ಸಾಕ್ಷಿಯನ್ನು ಮರೆಮಾಚಿ ಹೊರಟು ಹೋಗಿರುತ್ತಾರೆ. ಈ ಕೊಲೆಯ ಬಗ್ಗೆ ನನ್ನ ಅಣ್ಣ ಗಾರೆಮೇಸ್ತ್ರಿ ಸೋಮಶೇಖರ್‌ರವರ ಪತ್ನಿ ಸುಧಾ, ಮುಳಬಾಗಿಲು ತಾಲ್ಲೂಕಿನ ಮುದುಗೆರೆ ವಾಸಿ ಪ್ರವೀಣ್, ತಾಯಲೂರು ವಾಸಿ ಸುಭಾಷ್ ಹಾಗೂ ಇತರರ ಮೇಲೆ ಅನುಮಾನ ಇದ್ದು ತಾವುಗಳು ಆರೋಪಿಗಳನ್ನು ಪತ್ತೆ ಮಾಡಿ ಕಾನೂನು ಕ್ರಮ ಜರುಗಿಸುವಂತೆ ಕೋರಿ ನೀಡಿದ ದೂರಿನ ಮೇರೆಗೆ ಮುಳಬಾಗಿಲು ಗ್ರಾಮಾಂತರ ಪೊಲೀಸ್ ಠಾಣೆಯ ಪಿಎಸ್‌ಐ ವಿಠಲ್ ವೈ. ತಳವಾರ್ ರವರು ಮೊ.ಸಂ. 269/2024 ಕಲಂ 103(1), 238(ಎ) 3(5) ಬಿಎನ್‌ಎಸ್ ಅನ್ವಯ ಪ್ರಕರಣವನ್ನು ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡರು.

### ಮೂವರು ಆರೋಪಿಗಳ ಬಂಧನ

ಖಾದ್ರಿಪುರ ಗ್ರಾಮದ ಕೆರೆ ಪಕ್ಕದಲ್ಲಿರುವ ಜಮೀನಿನ ಬಾವಿಯಲ್ಲಿ ಗಂಡಸಿನ ಶವ ಗೋಚರಿಸಿರುವ ಬಗ್ಗೆ ಮುಳಬಾಗಿಲು ಗ್ರಾಮಾಂತರ ಪೊಲೀಸ್ ಠಾಣೆಯ ಪಿಐ ಕೆ.ಜಿ. ಸತೀಶ್‌ರವರು ಹಿರಿಯ ಅಧಿಕಾರಿಗಳಿಗೆ ಮಾಹಿತಿಯನ್ನು ನೀಡಿದರು. ಸ್ಥಳಕ್ಕೆ ಎಸ್ಪಿ ನಿಖಿಲ್, ಡಿವೈಎಸ್ಪಿ ನಂದಕುಮಾರ್, ಬೆರಳಚ್ಚು ತಜ್ಞರು, ಶ್ವಾನದಳ ಹಾಗೂ ಸಿಬ್ಬಂದಿ ವರ್ಗವು ಭೇಟಿ ನೀಡಿ ಶವವನ್ನು ಬಾವಿಯಿಂದ ಮೇಲೆ ಎತ್ತಿದ ಮೇಲೆ ಗ್ರಾಮದ ಪಂಚರ ಸಮಕ್ಷಮದಲ್ಲಿ ಮಹಜರ್ ನಡೆಸಿದ ನಂತರ ಶವವನ್ನು ಮುಳಬಾಗಿಲು ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ಸಾಗಿಸಲಾಯಿತು. ಆಸ್ಪತ್ರೆಯ ವೈದ್ಯಾಧಿಕಾರಿಗಳಿಂದ ಮೃತದೇಹದ ಪರೀಕ್ಷೆ ನಡೆಸಿದ ಮೇಲೆ ಶವವನ್ನು ವಾರಸುದಾರರಿಗೆ ನೀಡಲಾಯಿತು. ಮೃತ ವ್ಯಕ್ತಿ ಯಾರೆಂದು ಪತ್ತೆಯಾಗಿದ್ದು, ಮೃತನ ತಂದೆ, ತಾಯಿ, ಸಹೋದರ ಹಾಗೂ ಮಗ ಸೇರಿದಂತೆ ಇತರರು ಮೃತನ ಪತ್ನಿ ಸುಧಾ ಆಕೆಯ ಮನೆಗೆ ಬಂದು ಹೋಗುತ್ತಿದ್ದ ಪ್ರವೀಣ್ ಮತ್ತು ಸುಭಾಷ್ ಎಂಬುವವರ ಮೇಲೆ ಅನುಮಾನ ವ್ಯಕ್ತಪಡಿಸಿ ದೂರು ನೀಡಿರುವ ಹಿನ್ನೆಲೆಯಲ್ಲಿ ಎಸ್ಪಿ ನಿಖಿಲ್ ಮತ್ತು ಡಿವೈಎಸ್ಪಿ ನಂದಕುಮಾರ್‌ರವರ ಮಾರ್ಗದರ್ಶನದಲ್ಲಿ ಮುಳಬಾಗಿಲು ಗ್ರಾಮಾಂತರ ಪೊಲೀಸ್ ಠಾಣೆಯ ಪಿಐ ಕೆ.ಜಿ. ಸತೀಶ್‌ರವರ ನೇತೃತ್ವದಲ್ಲಿ ಪಿಎಸ್‌ಐ ಗಳಾದ ವಿಠಲ್ ವೈ. ತಳವಾರ್, ಮಮತಾ, ಸಿಬ್ಬಂದಿ ವರ್ಗದವರಾದ ಸುರೇಶ್, ವೆಂಕಟರಾಘವನ್, ಶಂಕರ್ ಮುಂತಾದವರ ತಂಡವನ್ನು ರಚಿಸಲಾಗಿದ್ದು, ಕ್ರೈಂ ತಂಡವು ಮೃತನ ಮೊಬೈಲ್ ಫೋನ್‌ನ ಕಾಲ್ ಲಿಸ್ಟ್ ಮತ್ತು ಟವರ್ ಲೋಕೇಷನ್‌ನ ವಿವರವನ್ನು ಪಡೆದು ತನಿಖೆ ಪ್ರಾರಂಭಿಸಿದರು.

ದೂರುದಾರರು ಅನುಮಾನ ವ್ಯಕ್ತಪಡಿಸಿರುವ ವ್ಯಕ್ತಿಗಳಾದ ಮುದುಗೆರೆ ಪ್ರವೀಣ್ ಮತ್ತು ತಾಯಲೂರಿನ ಸುಭಾಷ್‌ರವರನ್ನು ವಿಚಾರಣೆ ಮಾಡಲಾಗಿ ಸುಧಾ ಮತ್ತು ಶೈಲಜಾರವರೊಂದಿಗೆ ಸ್ನೇಹ ಬಯಸಿ ಬಂದಿದ್ದಾಗಿ ತಿಳಿಸಿರುತ್ತಾರೆ. ನಂತರ ಮೃತನ ಪತ್ನಿ ಸುಧಾಳನ್ನು ನವೆಂಬರ್ 20ರಂದು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಲಾಗಿ 23 ವರ್ಷಗಳ ಹಿಂದೆ ಸೋಮಶೇಖರ್ ರವರನ್ನು ಮದುವೆಯಾಗಿದ್ದು, ನಾಲ್ಕು ಜನ ಮಕ್ಕಳಿರುತ್ತಾರೆ. ಆರು ವರ್ಷದ ಹಿಂದೆ ದೊಡ್ಡ ಮಗಳು ಶೈಲಜಾಳನ್ನು ಮುಳಬಾಗಿಲು ತಾಲ್ಲೂಕಿನ ಗಡ್ಡಂಚಿನ್ನೇಪಲ್ಲಿ ಗ್ರಾಮದ ಶಶಿಕುಮಾರ್‌ನೊಂದಿಗೆ ಮದುವೆ ಮಾಡಿಕೊಟ್ಟಿರುತ್ತೇವೆ. ಕಳೆದ ನಾಲ್ಕು ವರ್ಷದ ಹಿಂದೆ ನನ್ನ ಹಾಗೂ ಗಂಡ ಸೋಮಶೇಖರ್ ನಡುವೆ ಸಾಂಸಾರಿಕ ವಿಚಾರದಲ್ಲಿ ಮನಸ್ತಾಪ ಉಂಟಾಗಿ ಅವರನ್ನು ಬಿಟ್ಟು ಮೂರು ಮಕ್ಕಳೊಂದಿಗೆ ಮುಳಬಾಗಿಲು ನಗರದ ಶಿವಕೇಶವನಗರದ ನಂಜಪ್ಪನವರಿಗೆ ಸೇರಿದ ಬಿಲ್ಡಿಂಗ್‌ನಲ್ಲಿ ಒಂದು ಮನೆಯನ್ನು ಬಾಡಿಗೆಗೆ ತೆಗೆದುಕೊಂಡು ವಾಸವಾಗಿದ್ದೆನು. ನಾನು ಮುಳಬಾಗಿಲಿನಲ್ಲಿ ಬಂದು ಎರಡು-ಮೂರು ದಿನ ಇದ್ದು ಹೋಗುತ್ತಿದ್ದಳು. ಆ ಸಂದರ್ಭದಲ್ಲಿ ಮಗಳ ಶೈಲಜಾ ನಾನು ಮಾತನಾಡಿಕೊಂಡು ಗಂಡ ಸೋಮಶೇಖರ್‌ರವರಿಗೆ ಫೋನ್ ಮಾಡಿ ಪಿತ್ರಾರ್ಜಿತ ಆಸ್ತಿ ಮತ್ತು ಸ್ವಯಾರ್ಜಿತ ಆಸ್ತಿಯಲ್ಲಿ ಭಾಗ ಕೊಡುವಂತೆ ಕೇಳಿದ್ದೇನು. ಅದಕ್ಕೆ ಅವರು ಮೊದಲಿಗೆ ನೀನು ಮಕ್ಕಳನ್ನು ಕರೆದುಕೊಂಡು ಮನೆಗೆ ಬಂದು ಸೇರಿಕೋ. ಆನಂತರ ಆಸ್ತಿಯ ವಿಚಾರವನ್ನು ಮಾತನಾಡೋಣ ಎಂದುಬಿಟ್ಟರು. ಅದಕ್ಕೆ ನಾನು ಮನೆಗೆ ಬರುವ ಮಾತೇ ಇಲ್ಲ. ನನ್ನ ಹಾಗೂ ನನ್ನ ಮಕ್ಕಳಿಗೆ ಆಸ್ತಿಯಲ್ಲಿ ಭಾಗ ಕೊಟ್ಟರೆ ನೆಮ್ಮದಿಯಾಗಿ ಜೀವನ ಸಾಗಿಸುತ್ತೇವೆಂದು ಹೇಳಿದೆ. ಸರಿ ಈ ವಿಚಾರವನ್ನು ಅಪ್ಪ ಅಮ್ಮನಿಗೆ ಹೇಳಿ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆಂದು ಹೇಳಿ ಫೋನ್ ಕಟ್ ಮಾಡಿಬಿಟ್ಟರು. ವರ್ಷಗಳು ಕಳೆದರೂ ಗಂಡ ಸೋಮಶೇಖರ್‌ರವರಿಂದ ಒಂದು ಫೋನ್ ಕಾಲ್ ಕೂಡ ಬರಲಿಲ್ಲ. ಮಗಳು ಶೈಲಜಾ ಯಾವಾಗಲು ನಮ್ಮ ಮನೆಗೆ ಬಂದು 2-3 ದಿನ ಇದ್ದು ಹೋಗುತ್ತಿರುವ ಬಗ್ಗೆ ಅಳಿಯ ಶಶಿಕುಮಾರ್‌ಗೆ ಇಷ್ಟ ಇರಲಿಲ್ಲ. ಈ ವಿಚಾರವಾಗಿ ಮಗಳು ಮತ್ತು ಅಳಿಯನ ನಡುವೆ ಜಗಳವಾಗಿ ಕಳೆದ ಆರು ತಿಂಗಳ ಹಿಂದೆ ಗಂಡನನ್ನು ಬಿಟ್ಟ ಶೈಲಜಾ ನಾನು ವಾಸವಿದ್ದ ನಂಜಪ್ಪನ ಬಿಲ್ಡಿಂಗ್ ನಲ್ಲಿಯೇ ಒಂದು ಮನೆಯನ್ನು ಬಾಡಿಗೆಗೆ ತೆಗೆದುಕೊಂಡು ವಾಸವಾಗಿದ್ದಳು.

ಕಳೆದ 15 ದಿನಗಳ ಹಿಂದೆ ಮಗಳು ಶೈಲಜಾಳನ್ನು ಮನೆಗೆ ಕರೆಸಿಕೊಂಡು ತಾತ ಮತ್ತು ತಂದೆಗೆ ಸೇರಿದ ಆಸ್ತಿಯನ್ನು ಪಡೆಯಬೇಕಾದರೆ ನಿಮ್ಮ ತಂದೆ ಸೋಮಶೇಖರ್‌ರವರನ್ನು ಮುಗಿಸಿಬಿಟ್ಟರೆ ನಂತರ ತಾನಾಗಿಯೇ ಆಸ್ತಿ ಎಲ್ಲವು ನಮ್ಮ ಪಾಲಾಗುವುದು ಎಂದು ಹೇಳಿದೆ. ಅದರಂತೆ ಶೈಲಜಾ ಅವಳ ಸ್ನೇಹಿತ ಸುರೇಶ್‌ನನ್ನು ನಮ್ಮ ಮನೆಗೆ ಕರೆದುಕೊಂಡು ಬಂದಳು. ಆಗ ನಾವು ಮೂರು ಜನ ಸೇರಿ ಪ್ಲಾನ್ ಮಾಡಿದ್ದೆವು. ಅದರಂತೆ ನವೆಂಬರ್ 6ರಂದು ಬಂಗಾರು ತಿರುಪತಿ



ಕೊಲೆ ಮಾಡಿದ ಸ್ಥಳವನ್ನು ತೋರಿಸುತ್ತಿರುವ ಆರೋಪಿ ಸುರೇಶ್

ಗುಟ್ಟಹಳ್ಳಿಗೆ ಕರೆಸಿಕೊಂಡು ಸುರೇಶನ ಆಟೋದಲ್ಲಿ ಮುಳಬಾಗಿಲು ನಗರದ ಬಾರ್‌ನಲ್ಲಿ ಕಂಠ ಪೂರ್ತಿ ಕುಡಿಸಿ ಸೋಮಶೇಖರ್‌ರವರ ಮೊಬೈಲ್ ಸ್ವಿಚ್ ಆಫ್ ಮಾಡಿ ನಂತರ ಅಲ್ಲಿಂದ ಆಟೋದಲ್ಲಿ ಖಾದ್ರಿಪುರದ ನಾಗರಾಜ್ ರವರ ಜಮೀನಿನ ಬಳಿಗೆ ಆಟೋದಲ್ಲಿ ಕರೆದುಕೊಂಡು ಹೋಗಿ ಚಾಕುವಿನಿಂದ ಕತ್ತು ಕೊಯ್ದು ಶವ ನೀರಿನಿಂದ ಮೇಲಕ್ಕೆ ಬಾರದಂತೆ ತೂಕದ ಕಲ್ಲನ್ನು ಮೃತದೇಹದ ಕಟ್ಟಿ ಬಾವಿಗೆ ಎಸೆದು ಪರಾರಿಯಾಗಿದ್ದ ಬಗ್ಗೆ ಹೇಳಿದರು.

ಮೃತನ ಪತ್ನಿ ಹೇಳಿಕೆಯಲ್ಲಿ ನೀಡಿರುವಂತೆ ಮಗಳು ಶೈಲಜಾ ಮತ್ತು ಆಕೆಯ ಪ್ರಿಯಕರ ಖಾದ್ರಿಪುರ ಗ್ರಾಮದ ನಾಗರಾಜಪ್ಪನ ಮಗ ಸುರೇಶ್ (29) ರವರನ್ನು ವಶಕ್ಕೆ ಪಡೆದು ಅವರಿಂದ ಹೇಳಿಕೆ ಪಡೆದ ನಂತರ ಆರೋಪಿಗಳನ್ನು ಕೃತ್ಯ ನಡೆಸಿದ ಸ್ಥಳಕ್ಕೆ ಕರೆದುಕೊಂಡು ಹೋಗಿ ಪಂಚನಾಮೆ ನಡೆಸಿದ ಮೇಲೆ ಆರೋಪಿಗಳಿಂದ ಕೃತ್ಯಕ್ಕೆ ಬಳಸಿದ್ದ ಆಟೋ ಮತ್ತು ಚಾಕುವನ್ನು ಪಂಚರ ಸಮಕ್ಷಮದಲ್ಲಿ ವಶಪಡಿಸಿಕೊಂಡ ನಂತರ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಮೃತ ಸೋಮಶೇಖರ್‌ರವರ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಡಿವೈಎಸ್ಪಿ ನಂದಕುಮಾರ್‌ರವರು ಮುಂದಿನ ತನಿಖೆಯನ್ನು ನಡೆಸುತ್ತಿದ್ದಾರೆ.



ಈ ಸ್ಥಳದಲ್ಲಿಯೇ ಶವಕ್ಕೆ ಕಲ್ಲು ಕಟ್ಟಿದ್ದು ಎಂದು ತೋರಿಸುತ್ತಿರುವ ಪತ್ನಿ, ಮಗಳು

## ಡಿವೈಎಸ್ಪಿ ಡಿ.ಹೆಚ್. ಮುಲ್ಲಾ, ಸಿಪಿಐ ಶ್ರೀಶೈಲ ಬ್ಯಾಕೋಡ ನೇತೃತ್ವದಲ್ಲಿನ ಕಾರ್ಯಾಚರಣೆ

# ಸಿನಿಮೀಯ ರೀತಿ ಬೆನ್ನತ್ತಿ ಕಣ್ಣಿಗೆ ಖಾರದ ಪುಡಿ ಎರಚಿ 12 ಲಕ್ಷ ರೂ. ದರೋಡೆ ಆರು ಅಂತರರಾಜ್ಯ ದರೋಡೆಕೋರರ ಬಂಧನ; ಬಂಧಿತರಿಂದ 8 ಲಕ್ಷ ರೂ. ಜಪ್ತಿ !


ಅಂತರರಾಜ್ಯ ದರೋಡೆಕೋರರ ಗ್ಯಾಂಗ್‌ನ ತೋಹಿದ ಆರ್ಶದ್ ಸಾವನೂರಕರ, ಮೊಶೀನ್ ಸಿಕಂದರ ಮೋಮಿನ, ವಾಸಿಂ ಮನ್ಸೂರ ಭಾಗವಾನ, ಅನಿಕೇತ ಸಂಜು ಧುಮಾಳ, ಗಣೇಶ ಅ॥ ಗಣಿ ಸುರೇಶ ಆಡೇಕರ, ಪ್ರಕಾಶ ಸಿದರಾಯ ಭೋಸಲೆ

ಮೈ ಮುರಿದು, ನಡು ಬಗ್ಗಿಸಿ ದುಡಿದು ತಿನ್ನಲಾರದ ಐನಾತಿಗಳು ತಮ್ಮ ಮೋಜು-ಮಜಾ, ಮಸ್ತಿಗಾಗಿ ಹೇಗಾದರೂ ಮಾಡಿ ಹಣ ಗಳಿಸಬೇಕು. ತಾವು ದಿಢೀರ್ ಶ್ರೀಮಂತರಾಗಬೇಕೆಂದು ದುರಾಸೆಯಿಂದ ದರೋಡೆಗಿಳಿದಿದ್ದರು. ಆದರೆ ದರೋಡೆಕೋರರು ಮೂಡಲಗಿ ಪೊಲೀಸರ ಕೈಗೆ ಸಿಕ್ಕುಬಿದ್ದು ಜೈಲು ಸೇರಿ ಕಂಬಿ ಎಣಿಸುತ್ತ ತಂಗಳು ಮುರಿಯುತ್ತಿದ್ದಾರೆ. ಇಲ್ಲಿ ಸಿಕ್ಕವರಲ್ಲಿ ಐದು ಜನ ಮಹಾರಾಷ್ಟ್ರದ ಮೂಲದವರು. ಇವರಿಗೆ ಮಾಹಿತಿ ಪೂರೈಸುತ್ತಿದ್ದ ಒಬ್ಬ ಮೂಡಲಗಿ ತಾಲ್ಲೂಕಿನವನು ಭಾಗಿಯಾಗಿದ್ದಾನೆ.

**ಸಿನಿಮೀಯ ರೀತಿಯಲ್ಲಿ ಹಾಡುಹಗಲೇ ಬೆನ್ನತ್ತಿ ಮೋಟಾರ್ ಸೈಕಲ್ ಮೇಲೆ ಹೊರಟಿದ್ದ ಸವಾರರಿಬ್ಬರನ್ನು ಅಡ್ಡವಾಗಿ ನಿಲ್ಲಿಸಿ ಕಣ್ಣಿಗೆ ಖಾರದ ಪುಡಿ ಎರಚಿ ಅವರ ಹತ್ತಿರವಿದ್ದ 12 ಲಕ್ಷ ರೂ.ಗಳನ್ನು ಆರು ಜನರ ಗುಂಪೊಂದು ದರೋಡೆ ಮಾಡಿಕೊಂಡು ಪರಾರಿಯಾಗಿತ್ತು. ದರೋಡೆ ಪ್ರಕರಣವನ್ನು ಸವಾಲಾಗಿ ಸ್ವೀಕರಿಸಿದ ಡಿವೈಎಸ್ಪಿ ಡಿ.ಹೆಚ್. ಮುಲ್ಲಾ ನೇತೃತ್ವದಲ್ಲಿ ಧಾಡಸಿ ಸಿಪಿಐಗಳಾದ ಶ್ರೀಶೈಲ ಬ್ಯಾಕೋಡ, ಹೆಚ್.ಡಿ. ಮುಲ್ಲಾ, ಪಿಎಸ್‌ಐಗಳಾದ ರಾಜು ಪೂಜಾರಿ, ಆನಂದ ಬಿ., ಕಿರಣ ಮೋಹಿತೆ, ಬಿ.ಹೆಚ್. ಕುಂಬಾರ ಮತ್ತು ಸಿಬ್ಬಂದಿಗಳು ವಿಶೇಷ ಪರಿಶ್ರಮದಿಂದ ಕಾರ್ಯಾಚರಣೆ ಕೈಗೊಂಡು ಹಣ ದರೋಡೆ ಮಾಡಿದ್ದ ಆರು ಜನ ಅಂತರರಾಜ್ಯ ದರೋಡೆಕೋರರನ್ನು ವಶಕ್ಕೆ ತೆಗೆದುಕೊಂಡು ಅವರಿಂದ ದರೋಡೆ ಮಾಡಿದ 12 ಲಕ್ಷ ರೂ.ಗಳಲ್ಲಿ 8 ಲಕ್ಷ ರೂ.ಗಳು ಮತ್ತು ಕೃತ್ಯಕ್ಕೆ ಬಳಸಿದ ಎರಡು ಮೋಟಾರ್ ಸೈಕಲ್‌ಗಳನ್ನು ಜಪ್ತಿ ಮಾಡಿಕೊಂಡು ಐನಾತಿಗಳನ್ನು ಬಂಧಿಸಿ ಜೈಲಿಗಟ್ಟುವಲ್ಲಿ ಯಶಸ್ವಿಯಾದ ಪ್ರಕರಣ ಬೆಳಗಾವಿ ಜಿಲ್ಲೆ ಗೋಕಾಕ ಪೊಲೀಸ್ ಉಪವಿಭಾಗದ ಮೂಡಲಗಿ ಠಾಣೆಯಿಂದ ವರದಿಯಾಗಿದೆ.**


ಎಸ್ಪಿ ಡಾ. ಭೀಮಾಶಂಕರ ಗುಳೇದ


ಹೆಚ್ಚುವರಿ ಎಸ್ಪಿ ಶ್ರುತಿ ಎನ್.ಎಸ್.


ಹೆಚ್ಚುವರಿ ಎಸ್ಪಿ ರಾಮನಗೌಡ ಬಸರಗಿ

**ಬೆಳಗಾವಿ**
✍ ಮನ್ನಾಪೂರ

**ಹಣ ಸಂಗ್ರಹಿಸಿಕೊಂಡು ಬರುತ್ತಿದ್ದವರು...**

ಬಾಗಲಕೋಟ ಜಿಲ್ಲೆಯ ರಬಕವಿ-ಬನಹಟ್ಟಿ ತಾಲ್ಲೂಕಿನ ತೇರದಾಳ ಪಟ್ಟಣದಲ್ಲಿ ಜಾಪರ್ ಇಬ್ರಾಹಿಂ ಮುಜಾವರ (39 ವ) ಎಂಬುವವರು ಬಹಳ ದೊಡ್ಡದಾದ ಹೊಲ್‌ಸೇಲ್ ಕಿರಾಣಿ ಅಂಗಡಿಯೊಂದನ್ನು ಇಟ್ಟುಕೊಂಡಿದ್ದರು. ಇವರು ತಮ್ಮ ಚಿಕ್ಕಪ್ಪ ಹಾಗೂ ಅವರ ಮಕ್ಕಳೊಂದಿಗೆ ಕೂಡಿ ಇರುತ್ತಿದ್ದರು. ಇವರು ಮುಧೋಳ, ಜಮಖಂಡಿ, ರಾಯಭಾಗ, ಹಾರೂಗೇರಿ, ಗೋಕಾಕ, ಮೂಡಲಗಿ, ಘಟಪ್ರಭಾಗಳಲ್ಲಿರುವ ಕಿರಾಣಿ ಅಂಗಡಿಗಳಿಗೆ ಪ್ರತಿ ವಾರ ಉದ್ರಿ ಸಾಮಾನುಗಳನ್ನು ಪೂರೈಸುತ್ತಿದ್ದರು. ಇದರ ಹಣವನ್ನು ವಸೂಲಿ ಮಾಡುವುದಕ್ಕಾಗಿ ಇರ್ಷಾದ್ ಇಸ್ಮಾಯಿಲ್ ಮುಜಾವರ ಮತ್ತು ಸಂಜು ಕಲ್ಲಪ್ಪ ಕೂಹಳ್ಳಿ ಎಂಬಿಬ್ಬರು ಸೇಲ್ಸ್‌ಮನ್‌ಗಳನ್ನು ಕೆಲಸಕ್ಕೆ ಇಟ್ಟುಕೊಂಡಿದ್ದನು. ಇವರಿಬ್ಬರು ಪ್ರತಿ ವಾರ ಮೋಟಾರ್ ಸೈಕಲ್ ಮೇಲೆ ತಿರುಗಾಡಿ 8ರಿಂದ 10 ಲಕ್ಷ ರೂ. ಹಣವನ್ನು ಅಂಗಡಿಗಳಿಂದ ವಸೂಲಿ ಮಾಡಿಕೊಂಡು ಬರುತ್ತಿದ್ದರು.

ಸೇಲ್ಸ್‌ಮನ್‌ಗಳು ಪ್ರತಿ ವಾರ 8-10 ಲಕ್ಷ ರೂ.ಗಳನ್ನು ವಸೂಲಿ ಮಾಡಿಕೊಂಡು ಹೋಗುವುದು ಪಕ್ಕಾ ಗೊತ್ತಿದ್ದ ಮೂಡಲಗಿ ತಾಲ್ಲೂಕಿನ ನಾಗನೂರ ಗ್ರಾಮದ ಬಾಂಡಿ ವ್ಯಾಪಾರಿ ಪ್ರಕಾಶ ಸಿದರಾಯ ಭೋಸಲೆ (34 ವ) ಎಂಬಾತನ ಮನಸ್ಸಿನಲ್ಲಿ ಆಗಲೇ ದುರಾಸೆ ಮೂಡಿತ್ತು.


ಅಂತರರಾಜ್ಯ ದರೋಡೆಕೋರರಿಂದ ವಶಪಡಿಸಿಕೊಂಡ 8 ಲಕ್ಷ ರೂ.ಗಳು

**ದರೋಡೆಗೆ ಸಂಚು ರೂಪಿಸಿದರು...**

ನೆರೆಯ ಮಹಾರಾಷ್ಟ್ರ ರಾಜ್ಯದ ಕೊಲ್ಹಾಪುರ ಜಿಲ್ಲೆಯ ಹಾಥಕಣಗಲಾ ತಾಲ್ಲೂಕಿನ ಇಚಲಕರಂಜಿ ನಗರದ ರಿಕ್ಷಾ ಚಾಲಕ ತೋಹಿದ ಆರ್ಶದ್ ಸಾವನೂರಕರ (34 ವ) ಎಂಬ ಐನಾತಿಯು ಇಚಲಕರಂಜಿ ನಗರದ ಬೇರೆ ಬೇರೆ ಬಡಾವಣೆಗಳಲ್ಲಿ ವಾಸ ಮಾಡುತ್ತಿದ್ದ ಮೋಶಿನ್ ಸಿಕಂದರ ಮೊಮೀನ್ (35 ವ), ವಾಸಿಂ ಮನ್ಸೂರ ಬಾಗವಾನ್ (38 ವ), ಅನಿಕೇತ ಸಂಜು ಧುಮಾಳ (25), ಗಣೇಶ ಅಲಿಯಾಸ್ ಗಣಿ ಸುರೇಶ ಆಡೇಕರ (27 ವ) ಇವರೆಲ್ಲರನ್ನು ಸೇರಿಸಿಕೊಂಡು, 'ನಾವು ದಿಢೀರ್ ಶ್ರೀಮಂತರಾಗಬೇಕು ಏನಾದರೂ ಮಾಡಿ ಹಣ ಗಳಿಸಬೇಕೆಂಬ' ಐನಾತಿ ಐಡಿಯಾಗಳನ್ನು ಮಾತನಾಡುತ್ತ ಇತ್ತೀಚಿಗೆ ಸಂಚು ರೂಪಿಸಲು ಆರಂಭಿಸಿದ್ದರು. ಇದರಲ್ಲಿನ ಗಣೇಶ ಅಲಿಯಾಸ್ ಗಣಿ ಆಡೇಕರನಿಗೆ ಮೂಡಲಗಿ ತಾಲ್ಲೂಕಿನ ನಾಗನೂರ ಗ್ರಾಮದ ಬಾಂಡಿ ವ್ಯಾಪಾರಿ ಪ್ರಕಾಶ ಸಿದರಾಯಿ ಭೋಸಲೆನ ಪರಿಚಯವಿತ್ತು. ಅದೊಂದು ದಿನ ಈ ಮೇಲ್ಕಂಡ ಆರು ಜನರು ಹಣ ಗಳಿಸುವ ಸುಲಭ ಮಾರ್ಗವನ್ನು ಹುಡುಕುತ್ತ, ಮಾತನಾಡುತ್ತ ಕುಳಿತಾಗ ಪ್ರಕಾಶ ಸಿದರಾಯಿ ಭೋಸಲೆ ತೇರದಾಳ ಪಟ್ಟಣದ ಹೊಲ್‌ಸೇಲ್ ಕಿರಾಣಿ ಅಂಗಡಿಯ ಸೆಲ್ಸ್‌ಮನ್‌ಗಳು ಬಾಕಿ ವಸೂಲಿ ಮಾಡಿಕೊಂಡು ಹೋಗುವ ಬಗ್ಗೆ ಹೇಳಿ ಅವರನ್ನು ದರೋಡೆ ಮಾಡಿದರೆ ನಮ್ಮ ಸಮಸ್ಯೆ ಬಗೆಹರಿಯುತ್ತದೆ ಎಂದಾಗ ಎಲ್ಲ ಹರಾಮಿಗಳು ಇದನ್ನೇ ಮಾಡೋಣ ಎಂದು ತೀರ್ಮಾನಕ್ಕೆ ಬಂದರು.


ಡಿವೈಎಸ್ಪಿ ಡಿ.ಹೆಚ್. ಮುಲ್ಲಾ


ಸಿಪಿಐ ಶ್ರೀಶೈಲ ಬ್ಯಾಕೋಡ


ಸಿಪಿಐ ಹೆಚ್.ಡಿ. ಮುಲ್ಲಾ

**ಸಿನಿಮೀಯ ರೀತಿ ದರೋಡೆ...**

ದಿನಾಂಕ 20-11-2024ರಂದು ಎಂದಿನಂತೆ ಕಿರಾಣಿ ಅಂಗಡಿಯ ಸೆಲ್ಸ್‌ಮನ್‌ಗಳಾದ ಕಲ್ಲಪ್ಪ ಕೂಹಳ್ಳಿ ಮತ್ತು ಇರ್ಷಾದ್ ಇಸ್ಮಾಯಿಲ್ ಮುಜಾವರ ಇಬ್ಬರೂ ಸೇರಿಕೊಂಡು ಮುಂಜಾನೆ 11 ಗಂಟೆಯಿಂದ ಮೂಡಲಗಿ, ಘಟಪ್ರಭಾ, ಕಲ್ಲೋಳಿ, ನಾಗನೂರ, ಮುಂತಾದ ಕಡೆಗಳಲ್ಲಿ ಕಿರಾಣಿ ಅಂಗಡಿಗಳಿಂದ ಬರತಕ್ಕ ಬಾಕಿ ವಸೂಲಿ ಮಾಡಿಕೊಂಡು 12 ಲಕ್ಷ ರೂ.ಗಳನ್ನು ಬ್ಯಾಗಿನಲ್ಲಿಟ್ಟುಕೊಂಡು ತೇರದಾಳ ಪಟ್ಟಣದತ್ತ ಹೊರಟಿದ್ದರು. ಈ ವಿಷಯವನ್ನು ಕರಾರುವಕ್ಕಾಗಿ ಪ್ರಕಾಶ ಸಿದರಾಯಿ ಭೋಸಲೆ ಮಹಾರಾಷ್ಟ್ರ ಮೂಲದ ದಾಂಡಿಗರಿಗೆ ತಿಳಿಸಿ ಗುರ್ಲಾಪೂರ ಕ್ರಾಸ್ ಹತ್ತಿರ ನಿಲ್ಲುವಂತೆ ಸೂಚನೆ ಕೊಟ್ಟಿದ್ದನು. ಇತ್ತ ಮಧ್ಯಾಹ್ನ 3 ಗಂಟೆಯ ಸುಮಾರಿಗೆ ಇರ್ಷಾದ್ ಬೈಕ್ ನಡೆಸುತ್ತಿದ್ದನು. ಸಂಜು ಹಣದ ಬ್ಯಾಗ್ ನಡುವೆ ಇಟ್ಟುಕೊಂಡು ಕುಳಿತಿದ್ದನು.

ಸೆಲ್ಸ್‌ಮನ್‌ಗಳು ಬರುತ್ತಿದ್ದ ಮೋಟಾರ್


ಪಿಎಸ್‌ಐ ರಾಜು ಎಂ. ಪೂಜಾರಿ


ಕುಲಗೋಡ ಪಿಎಸ್‌ಐ ಆನಂದ ಬಿ.

☞ 7



# ಕಾಂಗ್ರೆಸ್ ನೇತೃತ್ವದ ಇಂಡಿಯಾ ಒಕ್ಕೂಟದಲ್ಲಿ ಬಿರುಕು!

**ಬಿಜೆಪಿ ನೇತೃತ್ವದ ಎನ್‌ಡಿಎಗೆ ಸೆಡ್ಡು ಹೊಡೆಯಲೆಂದೇ ಕಾಂಗ್ರೆಸ್ ನೇತೃತ್ವದಲ್ಲಿ ಹುಟ್ಟಿಕೊಂಡ ಐಎನ್ ಡಿಐಎ(ಇಂಡಿಯಾ) ಮೊದಲ ಲೋಕಸಭೆ ಚುನಾವಣೆ ಕಳೆಯುತ್ತಿದ್ದಂತೆಯೇ ಮಂಕಾಗುತ್ತಿದ್ದು, ಒಕ್ಕೂಟದಲ್ಲಿದ್ದ ಒಂದೊಂದೇ ಪಕ್ಷ ದೂರ ಸರಿಯಲಾರಂಭಿಸಿರುವುದು, ನಾಯಕರು ವ್ಯತಿರಿಕ್ತ ಹೇಳಿಕೆಗಳನ್ನು ನೀಡುತ್ತಿರುವುದು, ನಾಯಕತ್ವದ ಮೇಲೆ ಕಣ್ಣಿಟ್ಟಿರುವುದು, ಹೀಗೆ ಎಲ್ಲವನ್ನೂ ಗಮನಿಸಿದರೆ ಒಕ್ಕೂಟದಲ್ಲಿ ಬಿರುಕು ಎದ್ದು ಕಾಣಿಸುತ್ತಿದೆ. ಇದು ಹೀಗೆ ಮುಂದುವರೆದರೆ ಸಂಕಷ್ಟ ತಪ್ಪಿದಲ್ಲ...**

✍ ಬಿ.ಎಂ. ಲವಕುಮಾರ್

ದೇಶದಲ್ಲಿ ಕಳೆದೊಂದು ದಶಕದಿಂದ ನಾಗಾಲೋಟದಲ್ಲಿದ್ದ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಅನ್ನು ಕಟ್ಟಿ ಹಾಕಲು ಆಗಿನ ಕಾಂಗ್ರೆಸ್ ನೇತೃತ್ವದ ಯುಪಿಎಗೆ ಸಾಧ್ಯವಾಗುವುದಿಲ್ಲ, ಮತ್ತು ಒಂದೇ ಮನಸ್ಥಿತಿಯ ಅರ್ಥಾತ್ ನರೇಂದ್ರ ಮೋದಿಯನ್ನು ವಿರೋಧಿಸುವ ಒಂದಷ್ಟು ನಾಯಕರು ಒಟ್ಟಾಗಬೇಕೆಂಬ ಉದ್ದೇಶದಿಂದ ಉದಯಗೊಂಡ ಐಎನ್‌ಡಿಐಎ ಅರ್ಥಾತ್ ಇಂಡಿಯಾ ಒಕ್ಕೂಟ ಇತ್ತೀಚೆಗೆ ನಡೆದ ಲೋಕಸಭಾ ಚುನಾವಣೆಯಲ್ಲಿ ಅಧಿಕಾರಕ್ಕೆ ಬಾರದೆ ಹೋದರೂ ಮೋದಿಯನ್ನು ಕಟ್ಟಿ ಹಾಕುವಲ್ಲಿ ಯಶಸ್ವಿಯಾಗಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ.

ಇನ್ನೊಂದಷ್ಟು ಸ್ಥಾನಗಳನ್ನು ಗೆದ್ದಿದ್ದರೆ ಬಹುಶಃ ಅಧಿಕಾರಕ್ಕೆ ಬರುವ ಸಾಧ್ಯತೆಯೂ ಇತ್ತು. ಇದು ಇಂಡಿಯಾ ಒಕ್ಕೂಟದ ಸಾಧನೆ ಎಂದರೆ ತಪ್ಪಾಗಲಾರದು. ದೇಶದಲ್ಲಿ ಬಿಜೆಪಿಯನ್ನು ಕುಗ್ಗಿಸುವಲ್ಲಿ ಇಂಡಿಯಾ ಒಕ್ಕೂಟದ ಪಾತ್ರವಿದೆ ಎನ್ನುವುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಆದರೆ ಬಿಜೆಪಿ ನಾಯಕರು ಮಾಡಿಕೊಂಡ ಎಡವಟ್ಟು ಮತ್ತು ಅತಿಯಾದ ಆತ್ಮವಿಶ್ವಾಸವೂ ಅವರಿಂದ ಒಂದಷ್ಟು ಸ್ಥಾನವನ್ನು ಕಳೆದುಕೊಳ್ಳುವಂತಾಯಿತು ಎಂಬುದು ಕೂಡ ಅಷ್ಟೇ ಸತ್ಯ. ಲೋಕಸಭಾ ಚುನಾವಣೆಗೆ ಮುನ್ನ ಮೇಲ್ನೋಟಕ್ಕೆ ಇಂಡಿಯಾ ಒಕ್ಕೂಟದಲ್ಲಿ ಒಗ್ಗಟ್ಟು ಪ್ರದರ್ಶನ ಕಾಣಿಸಿತ್ತಾದರೂ ಒಳಗೆ ಕಚ್ಚಾಟ ಮುಂದುವರೆದಿತ್ತು.



ಕಾಂಗ್ರೆಸ್ ನೇತೃತ್ವದಲ್ಲಿ ಇಂಡಿಯಾ ಒಕ್ಕೂಟ ಮುನ್ನಡೆಯುತ್ತಿದೆ ಎಂಬಂತೆ ತೋರುತ್ತಿತ್ತಾದರೂ ರಾಹುಲ್ ಗಾಂಧಿಯನ್ನು ಪ್ರಧಾನಿ ಅಭ್ಯರ್ಥಿ ಎಂದು ಘೋಷಣೆ ಮಾಡಲು ಇತರೆ ನಾಯಕರು ತಯಾರಿರಲಿಲ್ಲ. ಹೀಗಾಗಿಯೇ ಪ್ರಧಾನಿ ಅಭ್ಯರ್ಥಿಯನ್ನು ಘೋಷಣೆ ಮಾಡದೇ ಚುನಾವಣೆಗೆ ಹೋಗಿದ್ದರು. ಒಂದಷ್ಟು ಹೋರಾಟಗಳು, ಮತ್ತೊಂದಷ್ಟು ಶ್ರಮ ಹೀಗೆ ಎಲ್ಲವೂ ಸೇರಿದ್ದರಿಂದ ಎನ್‌ಡಿಎಗೆ ಒಂದು ಪ್ರಬಲವಾದ ಸ್ಪರ್ಧೆಯನ್ನು ನೀಡಿದ್ದಂತು ನಿಜ. ಬಹುಶಃ ಇನ್ನೈದು ವರ್ಷಗಳ ಕಾಲ ಇಂಡಿಯಾ ಒಕ್ಕೂಟ ಗಟ್ಟಿಯಾಗಿ ನಿಂತರೆ ಎನ್‌ಡಿಎಗೆ ಮುಳುಗು ನೀರು ತಂದರೂ ಅಚ್ಚರಿಯಿಲ್ಲ ಆದರೆ ಇಂಡಿಯಾ ಒಕ್ಕೂಟದಲ್ಲಿ ಆಗುತ್ತಿರುವ ಬೆಳವಣಿಗೆಯನ್ನು ಗಮನಿಸಿದರೆ ಅದ್ಯಾವುದೂ ಸಾಧ್ಯವಾಗುವಂತೆ ಕಾಣಿಸುತ್ತಿಲ್ಲ.

ಸಾಮಾನ್ಯವಾಗಿ ಪ್ರಾದೇಶಿಕ ಪಕ್ಷಗಳು ಚುನಾವಣೆ ಸಂದರ್ಭದಲ್ಲಿ ತಮಗೆ ಅನುಕೂಲವಾಗಬಹುದು ಎಂಬ ಕಾರಣಕ್ಕೆ ರಾಷ್ಟ್ರೀಯ ಪಕ್ಷಗಳತ್ತ ಒಲವು ತೋರುತ್ತವೆ. ಜತೆಗೆ ಕೇಂದ್ರದಲ್ಲಿ ಆಡಳಿತದಲ್ಲಿರುವ ರಾಷ್ಟ್ರೀಯ ಪಕ್ಷಗಳು ತಮ್ಮ ಬೆಂಬಲಕ್ಕೆ ಇರಲಿ ಎಂಬ ಕಾರಣಕ್ಕೆ ಪ್ರಾದೇಶಿಕ ಪಕ್ಷಗಳನ್ನು ಉತ್ತೇಜಿಸುತ್ತವೆ. ಕೇಂದ್ರದಲ್ಲಿ ಯಾವುದೇ ಪಕ್ಷ ಆಡಳಿತದಲ್ಲಿರಲಿ ಅದರೊಂದಿಗೆ ಉತ್ತಮ ಬಾಂಧವ್ಯವನ್ನಿಟ್ಟುಕೊಂಡು ತಮ್ಮ ರಾಜ್ಯಕ್ಕೆ ಏನೆಲ್ಲ ಆಗಬೇಕೋ ಅದನ್ನು ಮಾಡಿಸಿಕೊಳ್ಳಲು ಪ್ರಾದೇಶಿಕ ಪಕ್ಷವು ಹವಣಿಸುತ್ತವೆ.

ಲೋಕಸಭಾ ಚುನಾವಣೆಗೆ ಮುನ್ನ ಎನ್‌ಡಿಎ ವಿರುದ್ಧ ಐಎನ್‌ಡಿಐಎ ಒಕ್ಕೂಟದ ಜತೆಗೆ ಸೇರಿದರೆ ಮುಂದೆ ಅಧಿಕಾರಕ್ಕೆ ಬಂದರೆ ತಮಗೆ ಒಂದಷ್ಟು ಸ್ಥಾನಮಾನಗಳು ಸಿಗಬಹುದೆಂದು ಹಲವು ಪ್ರಾದೇಶಿಕ ಪಕ್ಷಗಳು ನಂಬಿದ್ದವು. ಹಾಗೆಯೇ ಇಂಡಿಯಾ ಒಕ್ಕೂಟವನ್ನು ಗೆಲ್ಲಿಸಲೇಬೇಕೆಂಬ ಹಠಕ್ಕೂ ಬಿದ್ದಿದ್ದವು. ಇನ್ನು ದೇಶ ಮಾತ್ರವಲ್ಲದೆ ಹೊರದೇಶದಲ್ಲಿಯೂ ಮೋದಿಯನ್ನು ಸೋಲಿಸಿ ರಾಹುಲ್ ಗಾಂಧಿಯನ್ನು ಗೆಲ್ಲಿಸಬೇಕೆಂಬ ಬಯಕೆಗಳಿದ್ದವು. ಆದರೆ ಇಂಡಿಯಾ ಒಕ್ಕೂಟ ಕಳೆದ ಎರಡು ಅವಧಿಯ ಚುನಾವಣೆಗೆ ಹೋಲಿಸಿದರೆ ಒಂದಷ್ಟು ಉತ್ತಮ ಸಾಧನೆ ಮಾಡಿತ್ತಾದರೂ ಮಹತ್ವದ ಸಾಧನೆ ಏನೂ ಮಾಡಲಾಗಲಿಲ್ಲ.

ಎನ್‌ಡಿಎನಲ್ಲಿದ್ದ ಚಂದ್ರಬಾಬು ನಾಯ್ಡು ನೇತೃತ್ವದ ತೆಲುಗು ದೇಶಂ ಪಕ್ಷ ಮತ್ತು ಬಿಹಾರದ ನಿತೀಶ್‌ಕುಮಾರ್ ನೇತೃತ್ವದ ಜೆಡಿಯು ಪಕ್ಷ ತಮ್ಮೊಂದಿಗೆ ಕೈಜೋಡಿಸಿದರೆ ಅಧಿಕಾರಕ್ಕೆ ಬರಬಹುದು ಎಂಬ ಕೊನೆಯ ಕನಸನ್ನು ಕಾಣಲಾಯಿತು. ಅದಕ್ಕೆ ಬೇಕಾದ ಕಸರತ್ತು ಮಾಡಲಾಯಿತಾದರೂ ಕನಸು ನನಸಾಗಲಿಲ್ಲ.




ಹಾಗೆ ನೋಡಿದರೆ ಬಿಹಾರದ ಜೆಡಿಯುನ ನಿತೀಶ್ ಕುಮಾರ್ ಇಂಡಿಯಾ ಒಕ್ಕೂಟದ ಉದಯಕ್ಕೆ ಕಾರಣ ಎಂದರೆ ತಪ್ಪಾಗಲಾರದು. ಬಿಹಾರದಲ್ಲಿ ಬಿಜೆಪಿ ಸಖ್ಯವನ್ನು ಕಳೆದುಕೊಂಡು ಕಾಂಗ್ರೆಸ್‌ನೊಂದಿಗೆ ಅಧಿಕಾರ ರಚಿಸಿದ ಅವರು ಪ್ರಧಾನಮಂತ್ರಿ ಹುದ್ದೆ ಮೇಲೆ ಕಣ್ಣಿಟ್ಟಿದ್ದರು. ಹೀಗಾಗಿ ಕಾಂಗ್ರೆಸ್ ಸೇರಿದಂತೆ ಸುಮಾರು ಇಪ್ಪತ್ತೆರಡಕ್ಕೂ ಹೆಚ್ಚು ಪಕ್ಷಗಳ ನಾಯಕರನ್ನು ಒಟ್ಟುಗೂಡಿಸಿ ಇಂಡಿಯಾ ಒಕ್ಕೂಟ ಸ್ಥಾಪನೆಗೆ ಪಣತೊಟ್ಟರು ಅದರಲ್ಲಿ ಯಶಸ್ವಿಯಾದರು.

ಆದರೆ ಕಾಂಗ್ರೆಸ್ ನಾಯಕರು ರಾಹುಲ್ ಗಾಂಧಿಯನ್ನು ಹೊರತುಪಡಿಸಿ ಬೇರೆ ಯಾರನ್ನೂ ಒಪ್ಪಲ್ಲ ಎಂಬುದು ಗೊತ್ತಾಗುತ್ತಿದ್ದಂತೆಯೇ ಇಂಡಿಯಾ ಒಕ್ಕೂಟದಲ್ಲಿ ತಾನು ಪ್ರಧಾನಿ ಅಭ್ಯರ್ಥಿಯಾಗುವುದು ಕಷ್ಟ ಎನ್ನುವುದು ಮನವರಿಕೆಯಾಗಿತ್ತು. ಹೀಗಾಗಿಯೇ ಲೋಕಸಭಾ ಚುನಾವಣೆಗೆ ಮುನ್ನವೇ ಇಂಡಿಯಾ ಒಕ್ಕೂಟವನ್ನು ಬಿಟ್ಟು ಮತ್ತೆ ಎನ್‌ಡಿಎನ್ನು ಸೇರಿದ್ದಲ್ಲದೆ ರಾಜ್ಯದಲ್ಲಿ ಮತ್ತೆ ಬಿಜೆಪಿಯೊಂದಿಗೆ ಸೇರಿ ಸರ್ಕಾರ ರಚಿಸಿ ತಾನೇ ಮುಖ್ಯಮಂತ್ರಿಯಾದರು. ಆ ನಂತರ ಲೋಕಸಭಾ ಚುನಾವಣೆಯಲ್ಲಿ ತಮ್ಮ ಪಕ್ಷದಿಂದ ಒಂದಷ್ಟು ಸಂಸದರನ್ನು ಆಯ್ಕೆ ಮಾಡಿ ಕಳಿಸಿಕೊಟ್ಟರು.

ಸಾಮಾನ್ಯವಾಗಿ ಲೋಕಸಭಾ ಚುನಾವಣೆ ನಂತರ ಇಂಡಿಯಾ ಒಕ್ಕೂಟ ಗಟ್ಟಿಯಾಗುತ್ತದೆ ಎಂದೇ ನಂಬಲಾಗಿತ್ತು. ಆದರೆ ಲೋಕಸಭಾ ಚುನಾವಣೆ ನಂತರ ನಡೆದ ವಿವಿಧ ರಾಜ್ಯಗಳ ವಿಧಾನಸಭಾ ಚುನಾವಣೆ ಕಾಂಗ್ರೆಸ್ ನೇತೃತ್ವದ ಇಂಡಿಯಾ ಒಕ್ಕೂಟವನ್ನು ಮಕಾಡೆ ಮಲಗಿಸಿದೆ. ಅದರಲ್ಲೂ ಕಾಂಗ್ರೆಸ್ ದಿನದಿಂದ ದಿನಕ್ಕೆ ಕುಸಿಯುತ್ತಿದೆ. ನಾಲ್ಕು ರಾಜ್ಯಗಳಲ್ಲಿಯೂ ಉತ್ತಮ ಸಾಧನೆ ಮಾಡಿಲ್ಲ. ಹರ್ಯಾಣದಲ್ಲಿ ಕಾಂಗ್ರೆಸ್ ಗೆಲ್ಲುತ್ತದೆ ಎಂದೇ ಹೇಳಲಾಗುತ್ತಿತ್ತಾದರೂ ನಾಯಕರ ಸ್ವಜನ ಪಕ್ಷಪಾತ ಕಾಂಗ್ರೆಸ್‌ಗೆ ಮತ ತಂದು ಕೊಡಲಿಲ್ಲ. ಮಹಾರಾಷ್ಟ್ರದಲ್ಲಂತೂ ಹೀನಾಯವಾಗಿ ಸೋಲು ಕಾಣುವಂತಾಯಿತು. ಜಮ್ಮು ಮತ್ತು ಕಾಶ್ಮೀರದಲ್ಲಿ ಇಂಡಿಯಾ ಒಕ್ಕೂಟದ ಎನ್ಸಿ ಭಾರೀ ಗೆಲುವು ಕಂಡರೂ ಅಲ್ಲಿ ಕಾಂಗ್ರೆಸ್ ಸಾಧನೆ ಹೇಳಿಕೊಳ್ಳುವಂತಿಲ್ಲ. ಜಾರ್ಖಂಡ್‌ನಲ್ಲಿ ಜಾರ್ಖಂಡ್ ಮುಕ್ತಿ ಮೋರ್ಚಾದ ನೆರಳಿನಡಿ ಸ್ಪರ್ಧಿಸಿದ್ದರೂ ಅಲ್ಲಿ ಪ್ರಾಬಲ್ಯ ಸಾಧಿಸುವಷ್ಟರ ಮಟ್ಟಿಗೆ ಬೆಳೆದಂತೆ ಕಾಣುತ್ತಿಲ್ಲ. ಇದೆಲ್ಲವನ್ನು ಗಮನಿಸಿರುವ ಇಂಡಿಯಾ ಒಕ್ಕೂಟದ ಸದಸ್ಯ ಪಕ್ಷಗಳು ಕಾಂಗ್ರೆಸ್ ಜತೆಗಿದ್ದರೆ ತಮಗೆ ಕಷ್ಟ ಎಂಬ ತೀರ್ಮಾನಕ್ಕೆ ಬಂದಿದ್ದು ಅಂತರ ಕಾಪಾಡಿಕೊಳ್ಳುವ ಪ್ರಯತ್ನ ಮಾಡುತ್ತಿವೆ.

ಪಂಜಾಬ್, ದೆಹಲಿಯಲ್ಲಿ ಅಧಿಕಾರದಲ್ಲಿರುವ ಎಎಪಿಗೆ ಕಾಂಗ್ರೆಸ್‌ನ ಅಗತ್ಯತೆ ಕಾಣುತ್ತಿಲ್ಲ. ಸದ್ಯ ಪಶ್ಚಿಮ ಬಂಗಾಳದಲ್ಲಿ ಅಧಿಕಾರ ನಡೆಸುತ್ತಿರುವ ಮಮತಾ ಬ್ಯಾನರ್ಜಿ ಕೂಡ ಕಾಂಗ್ರೆಸ್‌ನಿಂದ ಅಂತರ ಕಾಪಾಡಿಕೊಳ್ಳುತ್ತಿದ್ದಾರೆ. ಅಷ್ಟೇ ಅಲ್ಲದೆ ಇಂಡಿಯಾ ಒಕ್ಕೂಟವನ್ನು ಮುನ್ನಡೆಸುವ ಇಂಗಿತ ವ್ಯಕ್ತಪಡಿಸುವುದರೊಂದಿಗೆ ನೆಹರು ಕುಟುಂಬಕ್ಕೆ ಸೆಡ್ಡು ಹೊಡೆಯುವ ಸೂಚನೆ ನೀಡಿದ್ದಾರೆ. ಇದು ಮುಂದಿನ ದಿನಗಳಲ್ಲಿ ಇಂಡಿಯಾ ಒಕ್ಕೂಟದಲ್ಲಿ ಬಿರುಕು ಮೂಡಿಸಿದರೂ ಅಚ್ಚರಿಯಿಲ್ಲ. ಕಾಂಗ್ರೆಸ್ಸಿಗರು ಇಂಡಿಯಾ ಒಕ್ಕೂಟದ ನಾಯಕ ಸ್ಥಾನವನ್ನು ರಾಹುಲ್ ಗಾಂಧಿಯನ್ನು ಹೊರತುಪಡಿಸಿ ಮತ್ಯಾರಿಗೂ ನೀಡಲು ಮನಸ್ಸು ಮಾಡುತ್ತಿಲ್ಲ. ಆದರೆ ಪ್ರಿಯಾಂಕ ಗಾಂಧಿ ಈಗಾಗಲೇ ವೈನಾಡು ಲೋಕಸಭಾ ಕ್ಷೇತ್ರದ ಚುನಾವಣೆಯಲ್ಲಿ ಗೆಲುವು ಸಾಧಿಸಿ ಸಂಸದರಾಗುವ ಮೂಲಕ



☞ 7

5 ☞

ಸೈಕಲ್ ನಂಬರ್ ಗುರುತಿಸಿದ್ದ ಐನಾತಿಗಳು ಅವರಿಗೆ ಗೊತ್ತಾಗದಂತೆ ಅವರ ಬೆನ್ನು ಬಿದ್ದರು. ಸೆಲ್ಸ್‌ಮನ್‌ಗಳು ಗುರ್ಲಾಪೂರ ಕ್ರಾಸ್ ದಾಟಿ ಹಾರೂಗೇರಿ ಕ್ರಾಸ್ ಸಮೀಪ ಬರುವುದರೊಳಗಾಗಿ ಅವರಿಗೆ ಹಿಂದಿನಿಂದ ಓವರ್‌ಟೇಕ್ ಮಾಡಿ ತಮ್ಮ ವಾಹನಗಳನ್ನು ಅಡ್ಡ ನಿಲ್ಲಿಸಿ ಮೊದಲೇ ತೆಗೆದುಕೊಂಡು ಬಂದಿದ್ದ ಖಾರದಪುಡಿ ಎರಚಿ ಅವರ ಹತ್ತಿರವಿದ್ದ ಹಣದ ಬ್ಯಾಗನ್ನು ಬಲವಂತವಾಗಿ ದರೋಡೆ ಮಾಡಿಕೊಂಡು ಶರವೇಗದಲ್ಲಿ ಪರಾರಿಯಾದರು. ಇತ್ತ ಕಣ್ಣಲ್ಲಿ ಬಿದ್ದ ಖಾರದ ಪುಡಿಯ ವಿಪರೀತ ಉರಿಯಿಂದ ನರಳಾಡುತ್ತ ನಿಂತಿದ್ದ ಸೆಲ್ಸ್‌ಮನ್‌ಗಳ ಪಾಡು ಹೇಳತೀರದಾಗಿತ್ತು. ಇದು ನಡೆದದ್ದು ಮಧ್ಯಾಹ್ನ 3 ಗಂಟೆ ಸಮಯದಲ್ಲಿ. ಹಾಡುಹಗಲೇ ನಡೆದ ದರೋಡೆ ಪ್ರಕರಣ ದಾರಿಹೋಕರನ್ನು ತಲ್ಲಣಗೊಳಿಸಿತ್ತು. ಸಿನಿಮೀಯ ರೀತಿ ಪ್ರಕರಣ ಮೂಡಲಗಿ ಪರಿಸರದಲ್ಲಿ ಮಾರ್ದನಿಸಿತು.

### ಪೊಲೀಸರಿಗೆ ದೂರು...

ತಮ್ಮ ಅಂಗಡಿಯ ಸೆಲ್ಸ್‌ಮನ್‌ಗಳು ಹಣ ವಸೂಲಿ ಮಾಡಿಕೊಂಡು ಬರುವಾಗ ಯಾರೋ ಅಜ್ಞಾತ ದರೋಡೆಕೋರರು ಸಿನಿಮೀಯ ರೀತಿ ಅವರನ್ನು ಅಡ್ಡಗಟ್ಟಿ ಕಣ್ಣಲ್ಲಿ ಖಾರದ ಪುಡಿ ಎರಚಿ 12 ಲಕ್ಷ ರೂ.ಗಳನ್ನು ದೋಚಿ ಪರಾರಿಯಾಗಿದ್ದಾರೆಂದು ತೇರದಾಳದ ಕಿರಾಣಿ ಅಂಗಡಿ ಮಾಲೀಕ ಜಾಫರ್ ಇಬ್ರಾಹಿಂ ಮುಜಾವರ ಮೂಡಲಗಿ ಪೊಲೀಸ್ ಠಾಣೆಗೆ ಧಾವಿಸಿ ಬಂದು ಕರ್ತವ್ಯದ ಮೇಲಿದ್ದ ಪಿಎಸ್‌ಐ ರಾಜು ಪೂಜಾರಿ ಅವರಿಗೆ ವಿವರಿಸಿ ದೂರು ನೀಡಿದನು. ವಿಷಯದ ಗಂಭೀರತೆಯನ್ನು ಅರಿತುಕೊಂಡು ತಕ್ಷಣ ಸಿಪಿಐ ಶ್ರೀಶೈಲ ಬ್ಯಾಕೋಡ, ಗೋಕಾಕ ಡಿವೈಎಸ್ಪಿ ಡಿ.ಹೆಚ್. ಮುಲ್ಲಾ, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್., ರಾಮನಗೌಡ ಬಸರಗಿ, ಎಸ್ಪಿ ಡಾ. ಭೀಮಾಶಂಕರ ಗುಳೇದ ಅವರಿಗೆ ತಿಳಿಸಿ ಅವರ ನಿರ್ದೇಶನದಂತೆ ಪ್ರಕರಣ ದಾಖಲಿಸಿಕೊಂಡು ಪಂಚನಾಮೆ ಕಾರ್ಯ ಮುಗಿಸಿದರು.

### ಗಂಭೀರವಾಗಿ ಪರಿಗಣಿಸಿದರು...

ಮೂಡಲಗಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ 12 ಲಕ್ಷ ರೂ.ಗಳ ದರೋಡೆ ಪ್ರಕರಣವನ್ನು ಮೂಡಲಗಿ ಸಿಪಿಐ ಶ್ರೀಶೈಲ ಬ್ಯಾಕೋಡ, ಡಿವೈಎಸ್ಪಿ ಡಿ.ಹೆಚ್. ಮುಲ್ಲಾ ತುಂಬಾ ಗಂಭೀರವಾಗಿ ಪರಿಗಣಿಸಿದರು. ಎಸ್ಪಿ ಡಾ. ಭೀಮಾಶಂಕರ ಗುಳೇದ, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್., ರಾಮನಗೌಡ ಬಸರಗಿ ಅವರು ಶತಾಯ-ಗತಾಯ ದರೋಡೆ ಪ್ರಕರಣವನ್ನು ಸವಾಲಾಗಿ ಸ್ವೀಕರಿಸ ಬೇಕು. ಆದಷ್ಟು ದರೋಡೆಕೋರರನ್ನು ಬಂಧಿಸಲು ಕ್ರಮ ಕೈಗೊಳ್ಳಬೇಕು. ಇದಕ್ಕಾಗಿ ತಮ್ಮ ಉಪ ವಿಭಾಗದಲ್ಲಿ ಅಪರಾಧ ಪರಿಶೋಧನೆಯಲ್ಲಿ ಚತುರರಾದ ಅಧಿಕಾರಿ ಮತ್ತು ಸಿಬ್ಬಂದಿಗಳ ಒಂದು ವಿಶೇಷ ತನಿಖಾ ತಂಡವನ್ನು ರಚಿಸಿ ಕಾರ್ಯಾಚರಣೆ ಮಾಡಲು ತಿಳಿಸಿದರು.

### ವಿಶೇಷ ತನಿಖಾ ತಂಡ ರಚನೆ...

ದರೋಡೆ ಪ್ರಕರಣದಲ್ಲಿ ಡಿವೈಎಸ್ಪಿ ಡಿ.ಹೆಚ್. ಮುಲ್ಲಾ 24X7 ಕೆಲಸಕ್ಕೆ ಸನ್ನದ್ಧರಾದರು. ತಮ್ಮ ಉಪವಿಭಾಗದಲ್ಲಿನ ಮೂಡಲಗಿ ಸಿಪಿಐ ಶ್ರೀಶೈಲ ಬ್ಯಾಕೋಡ, ಘಟಪ್ರಭಾ ಸಿಪಿಐ ಹೆಚ್.ಡಿ. ಮುಲ್ಲಾ, ಕುಲಗೋಡ ಪಿಎಸ್‌ಐ ಆನಂದ ಬಿ., ಗೋಕಾಕ ಗ್ರಾಮೀಣ ಪಿಎಸ್‌ಐ ಕಿರಣ ಮೋಹಿತೆ, ಮೂಡಲಗಿ ಪಿಎಸ್‌ಐಗಳಾದ ರಾಜು ಪೂಜಾರಿ, ಬಿ.ಹೆಚ್. ಕುಂಬಾರ (ಕ್ರೈಂ), ಸಿಬ್ಬಂದಿಗಳಾದ ಆರ್.ಎಸ್. ಪೂಜೇರಿ, ಎನ್.ಎಸ್. ವಡೆಯರ, ಬಿ.ವ್ಹಿ. ನೇರ್ಲಿ, ರಾಮಕೃಷ್ಣ ಗಿಡ್ಡಪ್ಪಗೋಳ, ಜೆ.ಡಿ. ಮಿರ್ಜಿ, ಎಂ.ಬಿ. ಕರಣಿ, ಗಜಾನನ ಕಾಂಬಳೆ, ವ್ಹಿ.ಆರ್. ನಾಯಿಕ, ಅಜೀತ ನಾಯಿಕ, ಸುರೇಶ ಮನ್ನಾಪೂರ, ಎಲ್.ಎಸ್. ಜೋಕಾನಟ್ಟಿ, ಆರ್.ಪಿ. ಕೊಣ್ಣೂರ, ಸುನೀಲ ಬಾಗಿ, ಎಂ.ಜಿ. ಆಡಿನ, ಕೆ.ಸಿ. ಬಾಗಲಿ, ಜಿ.ಬಿ. ನಾಗನ್ನವರ, ಪಿ.ಕೆ. ಕಿಳ್ಳಿಕೇತರ, ಬಿ.ಎಸ್. ನಾಯಿಕ, ಎಲ್.ಪಿ. ಹಂಪಿಹೋಳಿ, ಎಸ್.ಆರ್. ಚೌಗಲಾ, ಅಜೀತ ಚಿಕ್ಕೋಡಿ, ಬಿ.ವೈ. ಮಾರಾಪೂರ, ಪಿ.ವ್ಹಿ. ಲೋಕುರಿ, ಲಕ್ಷ್ಮಣ ಗೋಡೇರ, ಬೆಳಗಾವಿ ಜಿಲ್ಲಾ ಟೆಕ್ನಿಕಲ್ ಸೆಲ್‌ನ ವಿನೋದ ಠಕ್ಕನ್ನವರ ಅವರನ್ನೊಳಗೊಂಡಂತೆ ವಿಶೇಷ ತನಿಖಾ ತಂಡ ರಚಿಸಿದರು. ಸ್ವತಃ ಈ ತಂಡದ ನೇತೃತ್ವವನ್ನು ಡಿವೈಎಸ್ಪಿ ಡಿ.ಹೆಚ್. ಮುಲ್ಲಾ ಮತ್ತು ಸಿಪಿಐ ಶ್ರೀಶೈಲ ಬ್ಯಾಕೋಡ ವಹಿಸಿಕೊಂಡು ತನಿಖಾ ತಂಡವನ್ನು ಎರಡು ಗುಂಪುಗಳನ್ನಾಗಿ ದರೋಡೆಕೋರರ ಪತ್ತೆಗೆ ನಿಯೋಜಿಸಲಾಯಿತು. ಎರಡು ಗುಂಪಿಗೂ ಕ್ಷಣ... ಕ್ಷಣಕ್ಕೂ ಡಿವೈಎಸ್ಪಿ ಡಿ.ಹೆಚ್. ಸೂಕ್ತ ನಿರ್ದೇಶನಗಳನ್ನು ನೀಡುತ್ತಿದ್ದರು.

### 6 ಜನ ದರೋಡೆಕೋರರ ಬಂಧನ

ಮೂಡಲಗಿ ಪರಿಸರದಲ್ಲಿ ನಡೆದ ಸಿನಿಮೀಯ ರೀತಿ ದರೋಡೆ ಪ್ರಕರಣ ಇತ್ತೀಚಿಗೆ ಹೊಸದು. ಆದರೂ ಧಾಡಸಿ ಮತ್ತು ಚಾಣಾಕ್ಷ ಸಿಪಿಐಗಳಾದ ಶ್ರೀಶೈಲ ಬ್ಯಾಕೋಡ ಮತ್ತು ಹೆಚ್.ಡಿ. ಮುಲ್ಲಾ ತಮಗಿರುವ ಎಲ್ಲಾ ರೀತಿಯ ಅನುಭವಗಳನ್ನು ಪಣಕ್ಕೆ ಹಚ್ಚಿ ದರೋಡೆಕೋರರ ಪತ್ತೆಗೆ ವ್ಯಾಪಕವಾಗಿ ಶ್ರಮಿಸಿದರು. ತಾಂತ್ರಿಕ ಸೌಲಭ್ಯಗಳ ನೆರವಿನಿಂದ ತಮ್ಮ ಪಿಎಸ್‌ಐಗಳು ಮತ್ತು ಸಿಬ್ಬಂದಿಗಳ ನೆರವಿನಿಂದ ಅಂದುಕೊಂಡಂತೆ ದರೋಡೆಕೋರರ ಮಾಹಿತಿಯನ್ನು ಆದಾಗಲೇ ಅಂಗೈಯಲ್ಲಿರಿಸಿಕೊಂಡಾಗಿತ್ತು. ಅತ್ಯಂತ ಖಚಿತವಾದ, ಕರಾರುವಕ್ಕಾದ ಮಾಹಿತಿಯನ್ನು ಹೆಕ್ಕಿ ತೆಗೆದ ವಿಶೇಷ ತನಿಖಾ ತಂಡ ಮಹಾರಾಷ್ಟ್ರದ ಇಚಲಕರಂಜಿಗೆ ದಾಂಗುಡಿಯಿಟ್ಟು 1) ತೋಹಿದ್ ಅರ್ಶದ್ ಸಾವನೂರಕರ, 2) ಮೊಶೀನ್ ಸಿಕಂದರ ಮೊಮೀನ್, 3) ವಾಸಿಂ ಮನ್ಸೂರ್ ಭಾಗವಾನ್, 4) ಗಣೇಶ ಅಲಿಯಾಸ್ ಗಣಿ, ಸುರೇಶ ಆಡೇಕರ, 5) ಮಾಹಿತಿ ಪೂರೈಕೆದಾರ ಪ್ರಕಾಶ ಶಿದರಾಯಿ ಭೋಸಲೆ ಎಂಬುವವರನ್ನು ವಶಕ್ಕೆ ಪಡೆದುಕೊಂಡರು. (ಇದರಲ್ಲಿ ಅನಿಕೇತ ಸಂಜು ಧುಮಾಳ ಎಂಬುವ ಪರಾರಿಯಾಗಿದ್ದನು. ನಂತರ ಆತನನ್ನು ಕೂಡಾ ಬಂಧಿಸಲಾಯಿತು.)

ವಿಚಾರಣೆ ಕಾಲಕ್ಕೆ ಸ್ವತಃ ಡಿವೈಎಸ್ಪಿ ಡಿ.ಹೆಚ್. ಮುಲ್ಲಾ, ಸಿಪಿಐ ಶ್ರೀಶೈಲ ಬ್ಯಾಕೋಡ ವಿಶೇಷ ಪರಿಶ್ರಮ ವಹಿಸಿದರು. ಸಿಕ್ಕ ದರೋಡೆಕೋರರು ಮೊದಲು ಕಾಗಕ್ಕ-ಗುಬ್ಬಕ್ಕನ ಕಥೆ ಹೇಳಲು ಆರಂಭಿಸಿದ್ದರು. ಆದರೆ ಪೊಲೀಸ್ ಭಾಷೆಯಲ್ಲಿ ಅವರಿಗೆ ಕೇಳಿದಾಗ ದರೋಡೆ ಮಾಡಿದ ಎಲ್ಲ ವಿಷಯ ಬಾಯಿ ಬಿಟ್ಟರು. ಇದು ನಡೆದದ್ದು ದಿ. 27-11-2024ರಂದು.

### 8 ಲಕ್ಷ ರೂ.ಗಳು 2 ಬೈಕ್ ಜಪ್ತಿ...

ಬಂಧಿತ ದರೋಡೆಕೋರರು 12 ಲಕ್ಷ ರೂ.ಗಳಲ್ಲಿ ಆದಾಗಲೇ 4 ಲಕ್ಷ ರೂ.ಗಳನ್ನು ಉಡಾಯಿಸಿದ್ದರು. ಉಳಿದ 8 ಲಕ್ಷ ರೂ.ಗಳನ್ನು ಪೊಲೀಸರಿಗೆ ನೀಡಿದ್ದಾರೆ. ಅಲ್ಲದೇ ದರೋಡೆ ಕೃತ್ಯಕ್ಕೆ ಬಳಸಿದ ಒಂದು ಹೀರೋ ಹೊಂಡಾ ಸಿಬಿಝಡ್ ಮೋಟಾರ್ ಬೈಕ್ ಅಂದಾಜು 1 ಲಕ್ಷ ರೂ. ಮೌಲ್ಯದ್ದು, ಒಂದು ಹೊಂಡಾ ಆ್ಯಕ್ಟಿವಾ ಸ್ಕೂಟಿ ಅಂದಾಜು 1 ಲಕ್ಷ ರೂ. ಮತ್ತು ಕಬ್ಬಿಣದ ರಾಡ್ ಜಪ್ತಿ ಮಾಡಿಕೊಂಡು ದರೋಡೆಕೋರರನ್ನು ಜೈಲಿಗಟ್ಟಿದ್ದಾರೆ. ಅವರೆಲ್ಲ ಈಗ ಜೈಲಿನ ಕಂಬಿ ಎಣಿಸುತ್ತಲೇ ತಂಗಳು ಮುರಿಯುತ್ತಿದ್ದಾರೆ.

### ಅಭಿನಂದನೆಗಳು...

ಸಿನಿಮೀಯ ರೀತಿ ಹಾಡುಹಗಲೇ ಕಣ್ಣಲ್ಲಿ ಖಾರದ ಪುಡಿ ಎರಚಿ 12 ಲಕ್ಷ ರೂ.ಗಳನ್ನು ದರೋಡೆ ಮಾಡಿದ್ದ ದರೋಡೆಕೋರರನ್ನು ವಿಶೇಷ ಪರಿಶ್ರಮದಿಂದ ಬಂಧಿಸುವಲ್ಲಿ ಗೋಕಾಕ ಡಿವೈಎಸ್ಪಿ ಡಿ.ಹೆಚ್. ಮುಲ್ಲಾ, ಮೂಡಲಗಿ ಸಿಪಿಐ ಶ್ರೀಶೈಲ ಬ್ಯಾಕೋಡ, ಘಟಪ್ರಭಾ ಸಿಪಿಐ ಹೆಚ್.ಡಿ. ಮುಲ್ಲಾ, ಪಿಎಸ್‌ಐಗಳಾದ ರಾಜು ಪೂಜಾರಿ, ಆನಂದ ಬಿ., ಕಿರಣ ಮೋಹಿತೆ, ಕುಂಬಾರ ಮತ್ತು ಸಿಬ್ಬಂದಿಗಳ ದಕ್ಷ ಕಾರ್ಯಾಚರಣೆಯನ್ನು ಎಸ್ಪಿ ಡಾ. ಭೀಮಾಶಂಕರ ಗುಳೇದ, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್., ರಾಮನಗೌಡ ಬಸರಗಿ ಅವರುಗಳು ಅಭಿನಂದಿಸಿದ್ದಾರೆ. ಇವರಿಗೆಲ್ಲಾ 'ಪೊಲೀಸ್ ನ್ಯೂಸ್'ನ ಹ್ಯಾಟ್ಸಪ್... ☯



ಮೂಡಲಗಿ ಪೊಲೀಸರು ವಶಪಡಿಸಿಕೊಂಡ 8 ಲಕ್ಷ ರೂ.ಗಳು ನಗದು ಹಣ ಮತ್ತು ಕೃತ್ಯಕ್ಕೆ ಬಳಸಿದ 2 ಮೋಟಾರ್ ಸೈಕಲ್‌ಗಳು



ಸಿಬ್ಬಂದಿಗಳಾದ ಎನ್.ಎಸ್. ವಡೇಯರ, ರಾಮಕೃಷ್ಣ ಗಿಡ್ಡಪ್ಪಗೋಳ, ಜೆ.ಡಿ. ಮಿರ್ಜಿ, ಎಸ್.ಜಿ. ಮನ್ನಾಪೂರ, ಬಿ.ವೈ. ಮಾರಾಪೂರ, ಪಿ.ವ್ಹಿ. ಲೋಕುರಿ, ಲಕ್ಷ್ಮಣ ಗೋಡೇರ, ವಿನೋದ ಠಕ್ಕನ್ನವರ (ಟೆಕ್ನಿಕಲ್ ಸೆಲ್)

# ಕಾಂಗ್ರೆಸ್ ನೇತೃತ್ವದ ಇಂಡಿಯಾ ಒಕ್ಕೂಟದಲ್ಲಿ ಬಿರುಕು!

6 ☞

ರಾಜಕೀಯಕ್ಕೆ ಅಧಿಕೃತ ಎಂಟ್ರಿ ಕೊಟ್ಟಿದ್ದಾರೆ. ಸಂಸತ್ ಅಧಿವೇಶನ ಆರಂಭವಾಗಿದ್ದು ಅವರ ವಿಷಯ ಮಂಡನೆ ಹೇಗಿದೆ ಎಂಬುದು ಮುಂದೆ ನೋಡಬೇಕಿದೆ.

ಪ್ರಿಯಾಂಕ ಗಾಂಧಿ ಗೆಲುವು ಕಾಂಗ್ರೆಸ್ ನಾಯಕರಲ್ಲಿ ಆಶಾಭಾವನೆ ಮೂಡಿಸಿದೆ. ಅಜ್ಜಿ ಇಂದಿರಾ ಗಾಂಧಿಯನ್ನು ಹೋಲುವುದರಿಂದ ಕಾಂಗ್ರೆಸ್‌ಗೆ ಭವಿಷ್ಯವಿದೆ ಎಂದು ನಂಬಿದ್ದಾರೆ. ಹೀಗಾಗಿ ಅವರನ್ನು ಮುನ್ನಲೆಗೆ ತರುವ ಪ್ರಯತ್ನಗಳು ನಡೆಯುತ್ತಿವೆ. ಹಾಗೊಂದು ವೇಳೆ ನಡೆದರೆ ಮಮತಾ ಬ್ಯಾನರ್ಜಿ ಬದಿಗೆ ಸರಿದು ಹೋಗಬಹುದು ಎಂಬ ಭಯವೂ ಇಲ್ಲದಿಲ್ಲ. ಹೀಗಾಗಿಯೇ ಅವರು ಮುಖ್ಯವಾಹಿನಿಗೆ ಬರಬೇಕಾದರೆ ಇಂಡಿಯಾ ಒಕ್ಕೂಟದ ಸಾರಥ್ಯವಹಿಸಿಕೊಂಡು ಆ ಮೂಲಕ ದೇಶದ ಗಮನ ಸೆಳೆಯುವುದು ಅನಿವಾರ್ಯವಾಗಿದೆ. ಆದರೆ ಮಮತಾ ಬ್ಯಾನರ್ಜಿ ಕನಸು ನನಸಾಗುವುದು ಕಷ್ಟಸಾಧ್ಯವೇ...

ಮಮತಾ ಬ್ಯಾನರ್ಜಿ ಬಿಜೆಪಿಗೆ ಮಾತ್ರವಲ್ಲದೆ, ನರೇಂದ್ರ ಮೋದಿಗೂ ಟಕ್ಕರ್ ಕೊಡುತ್ತಾ ಬಂದಿದ್ದಾರೆ. ಹೀಗಾಗಿ ನಾನೇ ಸುಪ್ರೀಂ ಎಂಬ ತೀರ್ಮಾನಕ್ಕೂ ಅವರು ಬಂದಂತಿದೆ. ಆದರೆ ಒಂದು ಪಕ್ಷವನ್ನು ಸಂಭಾಳಿಸಿದಷ್ಟು ಸುಲಭವಲ್ಲ ಹತ್ತಾರು ಪಕ್ಷಗಳ ಒಕ್ಕೂಟವನ್ನು ಮುನ್ನಡೆಸುವುದು ಎಂಬುದು ಗೊತ್ತಿರುವ ವಿಚಾರವೇ... ಇದೆಲ್ಲದರ ನಡುವೆ ಲೋಕಸಭಾ ಅಧಿವೇಶನದಲ್ಲಿ ಕಾಂಗ್ರೆಸ್‌ಗೆ ಇಂಡಿ ಒಕ್ಕೂಟದ ಪಕ್ಷಗಳ ಸಹಕಾರವೂ ಸರಿಯಾಗಿ ಸಿಕ್ಕಂತೆ ಕಾಣುತ್ತಿಲ್ಲ. ಕಾಂಗ್ರೆಸ್ ಅದಾನಿ ವಿಚಾರವನ್ನು ಹಿಡಿದುಕೊಂಡು ಎಳೆದಾಡುತ್ತಿದ್ದರೆ ಅದಕ್ಕೆ ಮಮತಾ ಬ್ಯಾನರ್ಜಿ ನೇತೃತ್ವದ ಟಿಎಂಸಿಯಾಗಲೀ, ಎಸ್‌ಪಿ ಪಕ್ಷವಾಗಲೀ ಸಹಕಾರ ನೀಡಿದಂತೆ ಕಾಣುತ್ತಿಲ್ಲ.

ಇಲ್ಲಿ ರಾಹುಲ್ ಗಾಂಧಿ ವಿಪಕ್ಷ ನಾಯಕರಾಗಿದ್ದು ಅವರು ಹೇಳಿದಂತೆ ಮುನ್ನಡೆದರೆ ತಮ್ಮ ಪಕ್ಷ ಮೂಲೆ ಗುಂಪಾಗುವ ಭಯವೂ ಕೆಲವು ಪ್ರಾದೇಶಿಕ ಪಕ್ಷಗಳನ್ನು ಕಾಡುತ್ತಿದೆ. ಎಎಪಿ, ಎಸ್‌ಪಿ ಮತ್ತು ಟಿಎಂಸಿ ಪಕ್ಷಗಳು ತಮ್ಮದೇ ಆದ ಪ್ರಾಬಲ್ಯ ಹೊಂದಿದ್ದು ಅದನ್ನು ಉಳಿಸಿಕೊಳ್ಳಬೇಕಿದೆ. ತಮ್ಮ ರಾಜ್ಯಗಳಲ್ಲಿ ಮುಂದೆ ಗಟ್ಟಿಯಾಗಬೇಕಾದರೆ ಇಂಡಿಯಾ ಒಕ್ಕೂಟದಲ್ಲಿದ್ದರೆ ಸಾಧ್ಯವಿಲ್ಲ ಎಂಬುದು ಆ ಪಕ್ಷಗಳಿಗೆ ಅರ್ಥವಾಗಿದೆ. ಏಕೆಂದರೆ ಲೋಕಸಭಾ ಚುನಾವಣೆಗೂ ವಿಧಾನಸಭಾ ಚುನಾವಣೆಗೂ ವ್ಯತ್ಯಾಸವಿರುವುದರಿಂದ ಕಾಂಗ್ರೆಸ್ ಜತೆಗಿದ್ದರೆ ತಮಗೆ ಕಷ್ಟವಾಗಬಹುದು ಎಂಬ ತೀರ್ಮಾನಕ್ಕೆ ಬಂದಂತಿವೆ.

ಇದು ಹರಿಯಾಣ, ಮಹಾರಾಷ್ಟ್ರ ಚುನಾವಣೆಯಲ್ಲಿ ಸೋಲಿನ ಬಳಿಕ ಜಾಸ್ತಿಯಾಗಿದ್ದು, ಇಂಡಿಯಾ ಒಕ್ಕೂಟದಲ್ಲಿದ್ದ ಪ್ರಾದೇಶಿಕ ಪಕ್ಷಗಳು ಕಾಂಗ್ರೆಸ್‌ನಿಂದ ಅಂತರ ಕಾಪಾಡಿಕೊಳ್ಳಲು ಮುಂದಾಗುತ್ತಿವೆ ಹಾಗಾಗಿ ಒಕ್ಕೂಟದಲ್ಲಿ ನಾಯಕತ್ವ ಬದಲಾಗಬೇಕು ಎಂಬ ಮನವಿಯನ್ನು ಮಾಡುತ್ತಿವೆ. ಇದಕ್ಕೆ ದಿನಕಳೆದಂತೆ ಹೆಚ್ಚಿನ ಬೆಂಬಲಗಳು ದೊರೆಯಬಹುದು. ಮುಂದಿನ ವರ್ಷಗಳಲ್ಲಿ ಇನ್ನಷ್ಟು ರಾಜ್ಯಗಳಲ್ಲಿ ವಿಧಾನಸಭಾ ಚುನಾವಣೆ ನಡೆಯಲಿರುವುದರಿಂದ ಲೋಕಸಭಾ ಚುನಾವಣೆ ವೇಳೆಯಿದ್ದ ಒಗ್ಗಟ್ಟು ಮುಂದುವರೆಯುವ ಸಾಧ್ಯತೆ ಕಡಿಮೆಯೇ...

ಒಟ್ಟಾರೆಯಾಗಿ ಹೇಳಬೇಕೆಂದರೆ ಇನ್ನೈದು ವರ್ಷಗಳಲ್ಲಿ ಏನೆಲ್ಲ ಬೆಳವಣಿಗೆ ಆಗಬಹುದು ಎಂಬುದನ್ನು ಈಗಲೇ ಹೇಳುವುದು ಕಷ್ಟವೇ.. ಅಲ್ಲಿ ತನಕ ಇಂಡಿಯಾ ಒಕ್ಕೂಟವನ್ನು ಒಟ್ಟಾಗಿ ತೆಗೆದುಕೊಂಡು ಹೋಗುವ ನಾಯಕನ ಅಗತ್ಯವಿದ್ದು, ಆ ನಾಯಕನ ಆಯ್ಕೆಯೇ ಒಕ್ಕೂಟದ ಬಿರುಕಿಗೆ ಕಾರಣವಾದರೂ ಅಚ್ಚರಿಯಿಲ್ಲ. ಕೇವಲ ಲೋಕಸಭಾ ಚುನಾವಣೆ ವೇಳೆ ಒಗ್ಗಟ್ಟು ಪ್ರದರ್ಶಿಸಿ ನಂತರ ಕಿತ್ತಾಡಿಕೊಂಡು ದೂರವಾದರೆ ಅದರಿಂದ ಯಾವುದೇ ಪ್ರಯೋಜನವಾಗಲಾರದು. ಇಂಡಿಯಾ ಒಕ್ಕೂಟದ ನಾಯಕರು ಎಲ್ಲ ಅಸಮಾಧಾನಗಳನ್ನು ಸರಿಪಡಿಸಿಕೊಂಡು ಮುನ್ನಡೆಯುತ್ತಾರಾ? ಅಥವಾ ಕೈಚೆಲ್ಲುತ್ತಾರಾ? ಎಂಬುದರ ಜತೆಗೆ ರಾಹುಲ್ ಗಾಂಧಿ ಹೊರತಾಗಿ ಪ್ರಿಯಾಂಕ ಗಾಂಧಿಗೆ ನಾಯಕತ್ವ ನೀಡುತ್ತಾರಾ? ಎಂಬ ಪ್ರಶ್ನೆಯೂ ಎದ್ದಿದೆ... ಎಲ್ಲ ಪ್ರಶ್ನೆಗಳಿಗೆ ಕಾಲವೇ ಉತ್ತರ ನೀಡಬೇಕಿದೆ. ☯

## ಘಟಪ್ರಭಾ ಪೊಲೀಸ್ ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ ಮತ್ತು ಸಿಬ್ಬಂದಿಗಳ ಯಶಸ್ವಿ ಕಾರ್ಯಾಚರಣೆ...

# 50 ಲಕ್ಷ ರೂ.ಗಳ ಇನ್ಸುರೆನ್ಸ್ ಹಣ ಪಡೆಯಲು ಒಡಹುಟ್ಟಿದ ಅಣ್ಣನನ್ನೇ ತನ್ನ ಮೂವರು ಸ್ನೇಹಿತರ ಜತೆ ಸೇರಿ ಕೊಲೆಗೈದಿದ್ದ ತಮ್ಮ ಸೇರಿ ನಾಲ್ವರ ಬಂಧನ!


ತಮ್ಮನ ದುಡ್ಡಿನ ದುರಾಸೆಗೆ ಬಲಿಯಾದ ಹಣಮಂತ ತಳವಾರ

**ದಿಢೀರನೆ ತಾನು ಶ್ರೀಮಂತನಾಗಬೇಕೆಂಬ ದುರಾಸೆ ದುಷ್ಟ ತಮ್ಮನಾದವನ ಮನದಲ್ಲಿ ಹೆಡೆಯೆತ್ತಿತ್ತು. ಇದಕ್ಕಾಗಿ ಆತ ತನ್ನ ಒಡಹುಟ್ಟಿದ ಅಣ್ಣನಿಗೆ ಗೊತ್ತಿಲ್ಲದಂತೆ ಆತನ ಹೆಸರಿಗೆ 50 ಲಕ್ಷ ರೂ.ಗಳ ಲೈಫ್ ಇನ್ಸುರೆನ್ಸ್ ಪಾಲಸಿ ಮಾಡಿಸಿದ್ದನು. ಅಣ್ಣನಿಗೆ ಹೆಂಡತಿ-ಮಕ್ಕಳಿದ್ದರೂ ಕೂಡಾ ನಿಜಸಂಗತಿ ಮುಚ್ಚಿಟ್ಟು ನಾಮಿನಿಯೂ ಕೂಡಾ ತಾನೇ ಆಗಿದ್ದನು. ಅಣ್ಣ ಸತ್ತರೆ ನಾಮಿನಿ ಆಗಿರುವ ತನಗೆ ಸುಮಾರು ಒಂದು ಕೋಟಿ ಹಣ ಬರುವುದು ಎಂದು ಅಣ್ಣನ ಕೊಲೆಗೆ ದುಷ್ಟ ತಮ್ಮ ತನ್ನ ಮೂವರು ಐನಾತಿ ಸ್ನೇಹಿತರೊಂದಿಗೆ ಸಂಚು ರೂಪಿಸಿದನು. ತನ್ನ ಅಣ್ಣನ ಕೊಲೆಗೆ ತಾವು ಸಹಕರಿಸಿದರೆ ತಲಾ 5 ಲಕ್ಷ ರೂ.ಗಳನ್ನು ನೀಡುವುದಾಗಿ ಆಮಿಷ ಒಡ್ಡಿದನು. ಅಂದುಕೊಂಡಂತೆ ನವೆಂಬರ್ 2ರಂದು ರಾತ್ರಿ ತನ್ನ ಅಣ್ಣನಿಗೆ ಕಂಠಪೂರ್ತಿ ಸಾರಾಯಿ ಕುಡಿಸಿ ತನ್ನ ಗ್ಯಾಂಗ್‌ನೊಂದಿಗೆ ಶ್ರೀಗಂಧದ ಕಟ್ಟಿಗೆಗಳಿವೆ ತರೋಣವೆಂದು ಕರೆದೊಯ್ದು ಕಬ್ಬಿನ ಗದ್ದೆಯಲ್ಲಿ ಕಬ್ಬಿಣದ ರಾಡ್‌ನಿಂದ ಬಲವಾಗಿ ಥಳಿಸಿ ಕೊಲೆ ಮಾಡಿ ಪ್ರಕರಣದ ದಿಕ್ಕು ತಪ್ಪಿಸಲು ಶ್ರೀಗಂಧದ ತುಂಡುಗಳನ್ನು ಶವದ ಹತ್ತಿರ ಬೀಸಾಕಿದ್ದರು. ತುಂಬಾ ನಿಗೂಢವಾಗಿದ್ದ ಕೊಲೆ ಪ್ರಕರಣವನ್ನು ಸವಾಲಾಗಿ ಸ್ವೀಕರಿಸಿದ ಧಾಡಸಿ ಮತ್ತು ಚತುರ ಪೊಲೀಸ್ ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ, ಪಿಎಸ್‌ಐಗಳಾದ ಎಸ್.ಆರ್. ಕಣವಿ, ಹೆಚ್.ಕೆ. ನರಳೆ ಮತ್ತು ಸಿಬ್ಬಂದಿಗಳು ಡಿವೈಎಸ್ಪಿ ಡಿ.ಹೆಚ್. ಮುಲ್ಲಾ ನೇತೃತ್ವದಲ್ಲಿ, ಎಸ್ಪಿ ಡಾ. ಭೀಮಾಶಂಕರ ಗುಳೇದ, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್., ರಾಮನಗೌಡ ಬಸರಗಿ ನಿರ್ದೇಶನದಲ್ಲಿ ಯಶಸ್ವಿಯಾಗಿ ಪತ್ತೆ ಮಾಡಿ ದುಷ್ಟ ತಮ್ಮ ಮತ್ತವನ ಮೂವರು ಸ್ನೇಹಿತರು ಸೇರಿ ನಾಲ್ವರನ್ನು ಹೆಡೆಮುರಿ ಕಟ್ಟಿ ಜೈಲಿಗಟ್ಟಿದ ರೋಚಕ ವರದಿ ಬೆಳಗಾವಿ ಜಿಲ್ಲೆ, ಮೂಡಲಗಿ ತಾಲ್ಲೂಕಿನ ಘಟಪ್ರಭಾ ಪೊಲೀಸ್ ಠಾಣೆಯಿಂದ ವರದಿಯಾಗಿದೆ.**


ದುಡ್ಡಿಗಾಗಿ ಅಣ್ಣನನ್ನೇ ಕೊಲೆ ಮಾಡಿದ ತಮ್ಮ ಬಸಪ್ಪ ತಳವಾರ

**ಬೆಳಗಾವಿ**
✍ ಮನ್ನಾಪೂರ

ಹುಟ್ಟುತ್ತ, ಹುಟ್ಟುತ್ತ ಅಣ್ಣ-ತಮ್ಮಂದಿರು ಆಗಿದ್ದವರು ಬೆಳೆದು ದೊಡ್ಡವರಾದಾಗ ಬಹುತೇಕರಲ್ಲಿ ಈರ್ಷೆ, ಅಸೂಯೆ, ದುರಾಸೆಗಳು ಮೂಡುತ್ತ ಬಂದಿವೆ. ಇದು ಇಂದು ನಿನ್ನೆಯದಲ್ಲ. ಸನಾತನ ಕಾಲದಿಂದಲೂ ಅಣ್ಣ-ತಮ್ಮಂದಿರಲ್ಲಿ ವೈರತ್ವ ಬೆಳೆದು 'ಮಹಾಭಾರತ' ಸೃಷ್ಟಿಯಾಗಿದೆ. ಇದಕ್ಕೆ ಜೀವಂತ ಉದಾಹರಣೆಯೆಂಬಂತೆ ಬೆಳಗಾವಿ ಜಿಲ್ಲೆಯ ಮೂಡಲಗಿ ತಾಲ್ಲೂಕಿನ ಕಲ್ಲೋಳಿ ಗ್ರಾಮದ ಘಟನೆ. ದುಷ್ಟ ದುರಾಸೆಯ ತಮ್ಮನಾಗಿದ್ದ ಬಸಪ್ಪ ಗೋಪಾಲ ತಳವಾರ ಎಂಬ ನೀಚನೊಬ್ಬನು ತನ್ನ ಒಡಹುಟ್ಟಿದ ಅಣ್ಣ ಹಣಮಂತ ಗೋಪಾಲ ತಳವಾರ ಎಂಬಾತನಿಗೆ ಗೊತ್ತಿಲ್ಲದಂತೆ ತಾನೇ ಫೋರ್ಜರಿ ಸಹಿ ಮಾಡಿ ಹಣ ತುಂಬಿ 50 ಲಕ್ಷ ರೂ.ಗಳ ಲೈಫ್ ಇನ್ಸುರೆನ್ಸ್ ಮಾಡಿಸಿದ್ದಾನೆ. ಅದಕ್ಕೆ ತಾನೇ ನಾಮಿನಿಯೂ ಆಗಿ ಅಣ್ಣ ಸತ್ತರೆ ತನಗೆ ಕೋಟಿಗಟ್ಟಲೇ ಹಣ ಬರುತ್ತದೆ ಎಂದರಿತುಕೊಂಡು ತನ್ನ ಐನಾತಿ ಸ್ನೇಹಿತರಾದ ಸಚಿನ್ ಕಂಟೆನ್ನವರ, ಈರಪ್ಪ ಹಡಗಿನಾಳ, ಬಾಪು ಶೇಖ ಎಂಬುವರೊಂದಿಗೆ ಸಂಚು ರೂಪಿಸಿ ಕೊಲೆ ಮಾಡುತ್ತಾನೆ. ಆದರೆ ಈತನ ಪಾಪದ ಕೊಡ ತುಂಬಿ ಬಂದಿತ್ತು. ಘಟಪ್ರಭಾದ ಟಫ್‌ಕಾಪ್‌ಗಳಾದ ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ, ಪಿಎಸ್‌ಐಗಳಾದ ಎಸ್.ಆರ್. ಕಣವಿ, ಹೆಚ್.ಕೆ. ನರಳೆ ಮತ್ತು ಸಿಬ್ಬಂದಿಗಳು ಕೂಡಿಕೊಂಡು ಗೋಕಾಕದ ಡೈನಾಮಿಕ್ ಡಿವೈಎಸ್ಪಿ ಡಿ.ಹೆಚ್. ಮುಲ್ಲಾ ನೇತೃತ್ವದಲ್ಲಿ ದುಷ್ಟ ಹಂತಕ ತಮ್ಮ ಬಸಪ್ಪ ಆತನ ಮೂವರು ಸ್ನೇಹಿತರನ್ನು ಕೊಲೆ ಪ್ರಕರಣದಲ್ಲಿ ಬಂಧಿಸಿ ಹೆಡೆಮುರಿ ಕಟ್ಟಿ ಜೈಲಿಗೆ ಸೇರಿಸಿದ್ದಾರೆ. ನಾಲ್ವರು ಕಂಬಿಯ ಹಿಂದೆ ತಂಗಳು ಮುರಿಯುತ್ತಿದ್ದಾರೆ.


ಎಸ್ಪಿ ಡಾ. ಭೀಮಾಶಂಕರ ಗುಳೇದ


ಹೆಚ್ಚುವರಿ ಎಸ್ಪಿ ಶ್ರುತಿ ಎನ್.ಎಸ್.


ಹೆಚ್ಚುವರಿ ಎಸ್ಪಿ ರಾಮನಗೌಡ ಬಸರಗಿ

### ಅನಾಮಧೇಯ ಗಂಡಸಿನ ಶವ...

ದಿನಾಂಕ 07-11-2024ರಂದು ರವಿವಾರ ಕಲ್ಲೋಳಿಯ ಶಂಕರ ಸಂಗಟಿ ಎನ್ನುವವರು ಘಟಪ್ರಭಾ ಪೊಲೀಸ್ ಠಾಣೆಗೆ ಧಾವಿಸಿ ಬಂದರು. ಅಂದು ಕರ್ತವ್ಯದ ಮೇಲಿದ್ದ ಪಿಎಸ್‌ಐ (ಕಾ.ಸು) ಎಸ್.ಆರ್. ಕಣವಿ ಅವರನ್ನು ಕಂಡು ತಾನು ಪಾಲಿನಿಂದ ಮಾಡಿದ ಜಮೀನು ಆಣೆನ್ನವರ ತೋಟದ ಹತ್ತಿರವಿದ್ದು, ಅಲ್ಲಿ ಕಬ್ಬಿನ ಪಡದ ನಡುವೆ ಸುಮಾರು 30ರಿಂದ 35 ವರ್ಷದ ಗಂಡಸಿನ ಶವವೊಂದು ಕೊಳೆತ ಸ್ಥಿತಿಯಲ್ಲಿದೆ ಎಂದು ವಿವರಿಸಿ ದೂರೊಂದನ್ನು ನೀಡಿದನು. ತಕ್ಷಣ ಅಲರ್ಟ್ ಆದ ಪಿಎಸ್‌ಐ ಕಣವಿ ಅವರು ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ, ಗೋಕಾಕದ ಡಿವೈಎಸ್ಪಿ ಡಿ.ಹೆಚ್. ಮುಲ್ಲಾ ಅವರಿಗೆ ವಿಷಯ ತಿಳಿಸಿ ಅವರ ನಿರ್ದೇಶನದಂತೆ ಪ್ರಕರಣ ದಾಖಲು ಮಾಡಿಕೊಂಡು ತಮ್ಮ ಸಿಬ್ಬಂದಿಗಳೊಡನೆ ಘಟನಾ ಸ್ಥಳಕ್ಕೆ ಧಾವಿಸಿದರು. ಅಷ್ಟರಲ್ಲಿ ಬೆನ್ನ ಹಿಂದೆ ಶರವೇಗದಲ್ಲಿ ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ ತಮ್ಮ ಸಿಬ್ಬಂದಿಗಳೊಡನೆ ಧಾವಿಸಿ ಬಂದಿದ್ದರು.


ಒಡಹುಟ್ಟಿದ ತಮ್ಮನ ಸಂಚಿಗೆ ಅನಾಮತ್ತಾಗಿ ಬಲಿಯಾಗಿರುವ ಹಣಮಂತನ ಮೃತದೇಹ

ಕಬ್ಬಿನ ಗದ್ದೆಯ ನಟ್ಟ ನಡುವೆ ನಾಲ್ಕೈದು ದಿನಗಳ ಹಿಂದೆ ಸತ್ತು ಬಿದ್ದಿದ್ದ ಗಂಡಸಿನ ಶವ ವಿಕಾರವಾಗಿ ಊದಿಕೊಂಡು ದುರ್ನಾತ ಬೀರುತ್ತಿತ್ತು. ಶವದ ಪಕ್ಕದಲ್ಲಿ ಸುಮಾರು ಎರಡು ಅಡಿಯಷ್ಟು ಕತ್ತರಿಸಿದ ಶ್ರೀಗಂಧದ ತುಂಡುಗಳು, ಅವುಗಳನ್ನು ಕತ್ತರಿಸಲು ಬಳಸಿದ ಕುಡುಗೋಲು, ಗರಗಸದಂತ ಆಯುಧಗಳಿದ್ದವು. ಒಟ್ಟಾರೆಯಾಗಿ ಶವದ ಗುರುತು ಹಿಡಿಯುವುದು ದುರ್ಲಭವಾಗಿತ್ತು.

ಅನಾಮಧೇಯ ಗಂಡಸು ಬಹುತೇಕ ಶ್ರೀಗಂಧದ ಕಳ್ಳನಾಗಿರಬಹುದು. ಶ್ರೀಗಂಧ ಕತ್ತರಿಸಿ ತೆಗೆದುಕೊಂಡು ಹೋಗುವಾಗ ಹೃದಯಾಘಾತವಾಗಿರಬೇಕು, ಇಲ್ಲವೇ ತಮ್ಮ ಗುಂಪಿನಲ್ಲಿ ಜಗಳವಾಗಿ ಕೊಲೆಯಾಗಿರಬಹುದು ಎಂದು ಇನ್ಸ್‌ಪೆಕ್ಟರ್ ಮುಲ್ಲಾ ಮತ್ತು ಪಿಎಸ್‌ಐಗಳಾದ ಎಸ್.ಆರ್. ಕಣವಿ, ಹೆಚ್.ಕೆ. ನರಳೆ ತರ್ಕಿಸಿದರು. ಏನೇ ಆಗಲಿ ಈ ಅನಾಮಧೇಯ ಗಂಡಸಿನ ಶವ ಯಾರದು? ಎಂದು ಗೊತ್ತಾದರೆ ಸಾಕು. ಮುಂದಿನದನ್ನು ನಿರ್ಧರಿಸಲಾಗುವುದು ಎಂಬ ನಿರ್ಧಾರಕ್ಕೆ ಪೊಲೀಸ್ ಅಧಿಕಾರಿಗಳು ಬಂದರು.

### ಅನಾಥ ಶವದ ಅಂತ್ಯಕ್ರಿಯೆ...

ಕಬ್ಬಿನ ಗದ್ದೆಯಲ್ಲಿ ಸಿಕ್ಕ ಶವದ ವಿವರವಾದ ಪಂಚನಾಮೆ ಕೈಗೊಂಡ ಘಟಪ್ರಭಾ ಪೊಲೀಸರು ಶವದ ಫೋಟೊ ತೆಗೆದುಕೊಂಡು, ಶವದ ಮೈಮೇಲಿನ ಟೀಶರ್ಟ್ ಮತ್ತು ಬರ್ಮುಡಾ ಇನ್ನಿತರ ವಸ್ತುಗಳನ್ನು ಪೊಲೀಸ್ ಠಾಣೆಯಲ್ಲಿ ಕಾಯ್ದಿರಿಸಿದರು. ಇದೊಂದು ಅನಾಥ ಶವವೆಂದು ಇದು ಅಸಹಜ ರೀತಿಯ ಸಾವು ಎಂದು ಪ್ರಕರಣ ದಾಖಲಿಸಿಕೊಂಡು ಇನ್ಸ್‌ಪೆಕ್ಟರ್ ಮುಲ್ಲಾ ಅವರು ಡಿವೈಎಸ್ಪಿ ಡಿ.ಹೆಚ್. ಮುಲ್ಲಾ ಅವರ ನಿರ್ದೇಶನ ಪಡೆದುಕೊಂಡು ಶವದ ಅಂತ್ಯಸಂಸ್ಕಾರವನ್ನು ತಾವೇ ಮುಂದೆ ನಿಂತು ಮಾಡಿಸಿದರು.

### ಅನಾಮಧೇಯ ಶವದ ಗುರುತಿಗಾಗಿ...

ದಿ. 07-11-2024ರಂದು ಕಲ್ಲೋಳಿ-ಮೂಡಲಗಿ ರಸ್ತೆಯ ಆಣೆನ್ನವರ ತೋಟದ ಪರಿಸರದಲ್ಲಿ ಕಬ್ಬಿನ ಗದ್ದೆಯಲ್ಲಿ ದೊರೆತ ಅನಾಮಧೇಯ ಗಂಡಸಿನ ಶವದ ಗುರುತು ಪತ್ತೆಗಾಗಿ ಎಲ್ಲಾ ಅಗತ್ಯ ಕ್ರಮ ಕೈಗೊಳ್ಳಲಾಯಿತು. ಕೆಲವೊಂದು ಧಾಡಸಿ ಮತ್ತು ಚತುರ ಸಿಬ್ಬಂದಿಗಳಿಗೆ ಅನಾಮಧೇಯ ಗಂಡಸಿನ ಶವದ ಕುರಿತು ಪತ್ತೆ ಕಾರ್ಯಕ್ಕೆ ನಿಯೋಜಿಸಿದವರಿಗೆಲ್ಲ ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ, ಪಿಎಸ್‌ಐಗಳಾದ ಎಸ್.ಆರ್. ಕಣವಿ, ಹೆಚ್.ಕೆ. ನರಳೆ ಅಗತ್ಯ ನಿರ್ದೇಶನಗಳನ್ನು ನೀಡಿದರು. ಘಟಪ್ರಭಾ ಠಾಣೆಯ ಸಿಬ್ಬಂದಿಗಳು ನೆರೆಯ ಮಹಾರಾಷ್ಟ್ರದ ಸಾಂಗಲಿ, ಮಿರಜ್, ಕೊಲ್ಹಾಪುರ, ಚಂದಗಡ, ಗಡಹಿಂಗ್ಲಜ ಸೇರಿದಂತೆ ಕರ್ನಾಟಕದ ಕೆಲವು ಕಡೆ 'ಮೋಸ್ಟ್-ವಾಂಟೆಡ್' ಆಗಿದ್ದ ಶ್ರೀಗಂಧ ಕಳ್ಳರನ್ನು ಕಂಡು ನಿಮ್ಮ ಗುಂಪಿನಲ್ಲಿ ಯಾರಾದರೂ ನಾಪತ್ತೆಯಾಗಿದ್ದಾರಾ...? ಎಂದು ವಿವರವಾದ ತನಿಖೆಗೆ ಇಳಿದರು. ಪೊಲೀಸರು ಸಂಪರ್ಕಿಸಿದ ಶ್ರೀಗಂಧದ ಕಳ್ಳರೆಲ್ಲಾ ತಮ್ಮ ಪುರಾಣಾ ಕಸುಬು ಬಿಟ್ಟು ಸಭ್ಯರಾಗಿದ್ದರು. ಅವರ ತಂಡದಲ್ಲಿದ್ದವರು ಎಲ್ಲರೂ ಸೇಫಾಗಿದ್ದರು. ಈ ವಿಷಯ ಅರಿತುಕೊಂಡ ಪೊಲೀಸ್ ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ ಅವರು ಶತಾಯ-ಗತಾಯ ಕಬ್ಬಿನ ಪಡದಲ್ಲಿ ಬಿದ್ದ ಅನಾಥ ಗಂಡಸಿನ ಶವ ಯಾರದ್ದು ಎಂದು ಗೊತ್ತಾದರೆ ಸಾಕು. ಮುಂದಿನ ಹಂತ ನಮ್ಮ ಅಂಗೈಯಲ್ಲಿದ್ದಂತೆ ಎಂದುಕೊಂಡರು. ಸುಮಾರು 8-10 ದಿನ ಸಿಬ್ಬಂದಿಗಳು ಅಂಡಲೆದರೂ ಯಾವುದೇ ಪ್ರಯೋಜನವಾಗಿರಲಿಲ್ಲ.



## ಇನ್ಸೂರೆನ್ಸ್ ಹಣ ಪಡೆದ ಅನುಭವವಿತ್ತು...

50 ಲಕ್ಷ ಇನ್ಸೂರೆನ್ಸ್ ಹಣಕ್ಕಾಗಿ ಒಡಹುಟ್ಟಿದ ಅಣ್ಣ ಹಣಮಂತ ತಳವಾರನನ್ನು ಕೊಲೆಗೈದಿರುವ ದುಷ್ಟ ತಮ್ಮ ಬಸಪ್ಪ ಈ ಮೊದಲು ತನ್ನ ಖಾಸಾ ಚಿಕ್ಕಪ್ಪನ ಹೆಸರಿನಲ್ಲೂ ಲೈಫ್ ಇನ್ಸೂರೆನ್ಸ್ ಮಾಡಿಸಿ ಅದಕ್ಕೂ ತಾನೇ ನಾಮಿನಿಯಾಗಿದ್ದನು. ಚಿಕ್ಕಪ್ಪನಿಗೆ ಹೆಂಡತಿ, ಮಕ್ಕಳಿದ್ದರೂ ಬಸಪ್ಪ ಆಗಲೂ ಮುಚ್ಚಿಟ್ಟಿದ್ದನು. ಮುಂದೆ ಚಿಕ್ಕಪ್ಪ ವಯೋ ಸಹಜ ಕಾಯಿಲೆಯಿಂದಾಗಿ ತೀರಿಕೊಂಡಾಗ ಸಹಜವಾಗಿ ಇನ್ಸೂರೆನ್ಸ್ ಹಣ ಬಸಪ್ಪನ ಕೈಗೆ ಬಂದಿತ್ತು. ಹೀಗಾಗಿ ಆತ ತನ್ನ ಅಣ್ಣನ ವಿಷಯದಲ್ಲೂ ಇದೇ ರೀತಿ ಹಣ ಪಡೆಯಲು ಪ್ರಯತ್ನಿಸಿ ಇದೀಗ ಪೊಲೀಸರ ಅತಿಥಿಯಾಗಿದ್ದಾನೆ. ಜತೆಗೆ ಮೂವರು ಸ್ನೇಹಿತರೊಂದಿಗೆ ಮುದ್ದೆ ಮುರಿಯುತ್ತಿದ್ದಾನೆ. ಕೃತ್ಯ ಬಯಲಿಗೆಳೆದ ಘಟಪ್ರಭಾ ಪೊಲೀಸರ ಜಾಣ್ಮೆ ಮೆಚ್ಚುವಂತಹುದು.

### ವಿಶಿಷ್ಟ ತನಿಖಾ ತಂಡದ ರಚನೆ...

ಗೋಕಾಕದ ಡಿವೈಎಸ್ಪಿ ತುಂಬಾ ಇಂಟಲಿಜೆಂಟ್ ಅಧಿಕಾರಿ. ಹಿಡಿದ ಕೆಲಸ ಸಕ್ಸಸ್ ಆಗುವತನಕ ಬಿಡದ ಜಾಯಮಾನದವರು. ಘಟಪ್ರಭಾ ಪೊಲೀಸ್ ಠಾಣೆಯಲ್ಲಿ ದಾಖಲಿಸಿದ ಅನಾಮಧೇಯ ಗಂಡಸಿನ ಶವ... ಶವದ ಸುತ್ತಲೂ ನಿಷೇಧಿತ ಶ್ರೀಗಂಧದ ತುಂಡುಗಳು... ಶ್ರೀಗಂಧ ಕತ್ತರಿಸಲು ಬಳಸಿದ ಆಯುಧಗಳು... ಇವುಗಳೆಲ್ಲವನ್ನು ನೋಡಿದರೆ ಇದು ಅಸಹಜ ಸಾವಲ್ಲ ಎಂದು ಪೊಲೀಸ್ ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ ಅವರೊಂದಿಗೆ ದೀರ್ಘವಾಗಿ ಚರ್ಚಿಸಿದರು. ಮತ್ತು ಎಸ್ಪಿ ಡಾ. ಭೀಮಾಶಂಕರ ಗುಳೇದ, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್., ರಾಮನಗೌಡ ಬಸರಗಿ ಅವರೊಂದಿಗೆ ಸಮಾಲೋಚಿಸಿ ಅವರ ನಿರ್ದೇಶನದಂತೆ ವಿಶೇಷ ತನಿಖಾ ತಂಡ ರಚಿಸಿ ಕಾರ್ಯಾಚರಣೆ ನಡೆಸಲು ಮುಂದಾದರು.


ಹಣಮಂತ ತಳವಾರನ ಶವದ ಪಕ್ಕದಲ್ಲಿ ಬಿದ್ದಿರುವ ಆಯುಧಗಳು

ಘಟಪ್ರಭಾ ಪೊಲೀಸ್ ಇನ್ಸ್‌ಪೆಕ್ಟರ್ ನೇತೃತ್ವದಲ್ಲಿ ಪಿಎಸ್‌ಐಗಳಾದ ಎಸ್.ಆರ್. ಕಣವಿ, ಹೆಚ್.ಕೆ. ನರಳೆ, ಸಿಬ್ಬಂದಿಗಳಾದ ಕೆ.ಆರ್. ಬಬಲೇಶ್ವರ, ಆರ್.ಕೆ. ಗೋಳ್ಕರ, ಆರ್.ಆರ್. ಗಿಡ್ಡಪ್ಪಗೋಳ, ಪಿ.ಕೆ. ಘೋಣಿ, ಕೆ.ಎಲ್. ಚವರೆಡ್ಡಿ, ಪಿ.ಐ. ಪತ್ತಾರ, ಎಸ್.ಎಸ್. ಮಠಪತಿ, ಆರ್.ಕೆ. ಧುಮಾಳ, ಬಿ.ಎಂ. ತಳವಾರ, ಬಿ.ಎಸ್. ನಾಯಿಕ, ಆರ್.ಎಂ. ಪಡತರೆ, ದೇವೇಂದ್ರ, ತಳಗೇರಿ ಮತ್ತು ಬೆಳಗಾವಿಯ ಟೆಕ್ನಿಕಲ್ ಸೆಲ್‌ನ ಸಿಬ್ಬಂದಿ ವಿನೋದ ಠಕ್ಕನ್ನವರ ಒಳಗೊಂಡಂತೆ ಒಂದು ವಿಶೇಷ ತನಿಖಾ ತಂಡ ರಚನೆಯಾಯಿತು. ತಂಡಕ್ಕೆ ಡಿವೈಎಸ್ಪಿ ಡಿ.ಹೆಚ್. ಮುಲ್ಲಾ ಅವರು ಅಗತ್ಯ ಮಾರ್ಗದರ್ಶನಗಳನ್ನು ನೀಡಿ 'ಗೋ ಅಹೆಡ್' ಎಂದರು.

### ಅನಾಥ ಶವದ ಗುರುತು ಪತ್ತೆ...

ಡಿವೈಎಸ್ಪಿ ಡಿ.ಹೆಚ್. ಮುಲ್ಲಾ, ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ ನಿರ್ದೇಶನದಂತೆ ವಿಶೇಷ ತನಿಖಾ ತಂಡದ ಸದಸ್ಯರು ತಮ್ಮ ಠಾಣೆಯ ಅಕ್ಕ ಪಕ್ಕದ ಊರುಗಳಲ್ಲಿ ಇದ್ದಕ್ಕಿದ್ದಂತೆ ಹದಿನೈದು ದಿನಗಳಿಂದ ಕಾಣೆಯಾದ 30ರಿಂದ 35 ವಯಸ್ಸಿನ ಗಂಡಸರ ಬಗ್ಗೆ ಮಾಹಿತಿ ತೆಗೆಯಲು ಆರಂಭಿಸಿದಾಗ ಘಟಪ್ರಭಾ ಪೊಲೀಸ್ ಠಾಣೆ ವ್ಯಾಪ್ತಿಯ ಕಲ್ಲೋಳಿಯಲ್ಲಿ ಹದಿನೈದು ದಿನಗಳಿಂದ ಒಬ್ಬ ವ್ಯಕ್ತಿ ಹಣಮಂತ ತಳವಾರ ಎಂಬಾತ ಕಾಣುತ್ತಿಲ್ಲ ಎಂಬ ಮಾಹಿತಿಯನ್ನು ಮಾಹಿತಿದಾರರಿಂದ ಸಂಗ್ರಹಿಸಿದರು. ಪೊಲೀಸ್ ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ ನಿರ್ದೇಶನದಂತೆ ಹಣಮಂತ ತಳವಾರನ ಸಂಬಂಧಿಕರನ್ನು ಠಾಣೆಗೆ ಕರೆಯಿಸಿ ಹಣಮಂತನ ಬಗ್ಗೆ ವಿವರಣೆ ಕಲೆ ಹಾಕಿ ದಿನಾಂಕ 07-11-2024ರಂದು ದೊರೆತ ಅನಾಮಧೇಯ ಶವದ ಫೋಟೋ... ಬಟ್ಟೆಗಳು ಮತ್ತು ಗರಗಸಕ್ಕೆ ಸುತ್ತಿದ ಟವೆಲ್ ತೋರಿಸಿದಾಗ ಇದು ಹಣಮಂತ ತಳವಾರನದ್ದೇ ಶವ. ಆತನ ಸಾವು ಅಸಹಜ ರೀತಿಯಲ್ಲ ಅದು ಪಕ್ಕಾ ಕೊಲೆ ಎಂದು ತಮ್ಮ ಸಂಶಯ ವ್ಯಕ್ತಪಡಿಸಿದರು. ನಿಜವಾಗಿಯೂ ಇಲ್ಲಿ ಡಿವೈಎಸ್ಪಿ ಮುಲ್ಲಾ, ಇನ್ಸ್‌ಪೆಕ್ಟರ್ ಮುಲ್ಲಾ ಮತ್ತು ಪಿಎಸ್‌ಐಗಳಾದ ಎಸ್.ಆರ್. ಕಣವಿ, ಹೆಚ್.ಕೆ. ನರಳೆ ಮತ್ತು ವಿಶೇಷ ತನಿಖಾ ಸಿಬ್ಬಂದಿಗಳ ಪರಿಶ್ರಮ ಸಾರ್ಥಕವಾಗಿತ್ತು. ಸತ್ತವನು ಯಾರೆಂದು ತಿಳಿದು ಬಂದಿತು. ಇನ್ನೂ ಮುಂದಿನ ಕಾರ್ಯ ಸುಗಮವೆಂದು ಭಾವಿಸಿದ ವಿಶೇಷ ತನಿಖಾ ತಂಡ ರಂಗಕ್ಕಿಳಿಯಿತು.


ಡಿವೈಎಸ್ಪಿ ಡಿ.ಹೆಚ್. ಮುಲ್ಲಾ


ಪೊಲೀಸ್ ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ


ಪಿಎಸ್‌ಐ ಎಸ್.ಆರ್. ಕಣವಿ


ಪಿಎಸ್‌ಐ ಹೆಚ್.ಕೆ. ನರಳೆ

### ಕಲ್ಲೋಳಿಯ ಗ್ರಾಮ ಸಹಾಯಕನಾಗಿದ್ದನು...

ಅನಾಮಧೇಯವಾಗಿ ಸತ್ತು ಬಿದ್ದಿದ್ದ ಹಣಮಂತ ಗೋಪಾಲ ತಳವಾರ (38 ವ) ಕಲ್ಲೋಳ್ಳಿಯ ಗ್ರಾಮ ಸಹಾಯಕನಾಗಿ ಕಾರ್ಯ ನಿರ್ವಹಿಸುತ್ತಿದ್ದನು. ಈತನಿಗೆ ಮದುವೆಯಾಗಿ ಎರಡು ಮಕ್ಕಳಿದ್ದವು. ಆದರೆ ಹೆಂಡತಿ ಇತ್ತೀಚಿಗೆ ಈತನ ಕುಡಿತದ ಚಟಕ್ಕೆ ಬೇಸತ್ತು ಜಗಳವಾಡಿ ತನ್ನ ಮಕ್ಕಳೊಂದಿಗೆ ತವರುಮನೆ ಸೇರಿದ್ದಳು. ಈತ ಕುಡುಕನಾದರೂ ನಿರುಪದ್ರವಿಯಾಗಿ ಯಾರೊಂದಿಗೂ ಶತ್ರುತ್ವ ಹೊಂದಿರಲಿಲ್ಲ. ಈತನಿಗೊಬ್ಬ ತಮ್ಮ ಭರಮಪ್ಪ. ಆತ ತನ್ನ ಹೆಂಡತಿ, ಮಕ್ಕಳೊಂದಿಗೆ ಬೇರೆಯಾಗಿ ಸಂಸಾರ ನಡೆಸುತ್ತಿದ್ದನು. ಇನ್ನೂ ಮತ್ತೊಬ್ಬ ತಮ್ಮ ಮಹಾ ದುಷ್ಟನಿದ್ದನು. ಆತನ ಹೆಸರು ಬಸಪ್ಪ. ಈತ ಮೇಲೆ ಬಸಪ್ಪ ಒಳಗಿಂದೊಳಗೆ ವಿಷಪ್ಪನಾಗಿದ್ದನು. ಈತನ ಹೆಂಡತಿಯ ಊರು ಘಟಪ್ರಭಾ ಪಕ್ಕ ಕೊಣ್ಣೂರ. ಈತನ ಹೆಂಡತಿ ಕೂಡಾ ಈತನ ಕುಡುಕತನ ಮತ್ತು ಪರಮ ನೀಚತನದ ಕೆಲಸಕ್ಕೆ ಬೇಸತ್ತಿದ್ದಳು. ಇತ್ತೀಚಿಗೆ ಹೆರಿಗೆಗೆಂದು ತವರಿಗೆ ಹೋಗಿದ್ದಳು. ಹಣಮಂತ ತಳವಾರನ ತಂದೆ ಮೊದಲು ಗ್ರಾಮ ಸಹಾಯಕನಾಗಿದ್ದನು. ಆತ ತೀರಿ ಹೋದ ಮೇಲೆ ಹಣಮಂತ ತನ್ನ ತಂದೆಯ ಗ್ರಾಮ ಸಹಾಯಕ ಕೆಲಸವನ್ನು ಮಾಡಿಕೊಂಡು ತನ್ನ ಪಾಡಿಗಿದ್ದನು. ತನ್ನ ತಮ್ಮ ಮಹಾ ನೀಚ ಬಸಪ್ಪನೊಂದಿಗೆ ಕೂಡಿ ಇದ್ದ ಹಣಮಂತನ ಬೇಕು-ಬೇಡಿಕೆ, ಪ್ರತಿಯೊಂದನ್ನು ಬಸಪ್ಪನೇ ಮುಂದಾಗಿ ಮಾಡುತ್ತಿದ್ದನು. ಕೆಲವೊಂದು ಪ್ರಸಂಗಗಳಲ್ಲಿ ಹನಮಂತನಂತೆ ಫೋರ್ಜರಿ ಸಹಿಯನ್ನು ಮಾಡುತ್ತಲಿದ್ದನು.


ಐನಾತಿ ಬಸಪ್ಪನ ಆಮಿಷಕ್ಕೆ ಒಳಗಾಗಿ ಕೊಲೆಯಲ್ಲಿ ಭಾಗಿಯಾದ ಸಚೀನ ಕಂಟೆನ್ನವರ, ಈರಪ್ಪ ಹಡಗಿನಾಳ, ಬಾಪು ಶೇಖ್

### ದುಡ್ಡಿನ ದುರಾಸೆಗೆ ಬೆನ್ನು ಬಿದ್ದ ಬಸಪ್ಪ...

ಬಸಪ್ಪ ಗೋಪಾಲ ತಳವಾರ ಎಂಬ ಮಹಾ ಹರಾಮಿ ಐನಾತಿ. ದುಡ್ಡಿನ ದುರಾಸೆಗೆ ಬೆನ್ನು ಬಿದ್ದಿದ್ದನು. ದುಡ್ಡು ಸಲೀಸಾಗಿ ಸಿಗುತ್ತದೆ ಎಂದರೆ ಎಂತಹ ಕೆಲಸ ಮಾಡಲು ಈತ ಸೈ ಎನ್ನುತ್ತಿದ್ದನು. ಮೈ-ಮುರಿದು ದುಡಿಯುವುದನ್ನು ಬಿಟ್ಟು ಗುಂಡು... ಗುಟಕಾ... ತುಂಡು... ತೊಡೆಗಳ ನಡುವೆ ತನ್ನದೆಲ್ಲವನ್ನೂ ಕಳೆದುಕೊಂಡಿದ್ದ ಈತ ದಿಢೀರನೇ ಶ್ರೀಮಂತನಾಗಿ ಕಾರು-ಬಾರು ಎಂದೆಲ್ಲ ಮೆರೆಯಬೇಕೆಂದು ಹವಣಿಸುತ್ತಿದ್ದನು. ಇದಕ್ಕಾಗಿ ಹಗಲಿರುಳು ಕ್ರಿಮಿನಲ್ ಐಡಿಯಾಗಳನ್ನು ಹೆಣೆಯುತ್ತಲಿದ್ದನು. ಇದಕ್ಕೆ ಎಂಬಂತೆ ಐನಾತಿ ಐಡಿಯಾಗಳನ್ನು ಕೊಡಲು ಸಚಿನ್ ಕಂಟೆನ್ನವರ, ಈರಪ್ಪ ಹಡಗಿನಾಳ ಎಂಬಿಬ್ಬರು ಸದಾ ಬಸಪ್ಪನ ಸುತ್ತ ಗಿರಕಿ ಹೊಡೆಯುತ್ತಿದ್ದರು. ಇಂತಹ ಬಸಪ್ಪ ದುಡ್ಡಿನ ದುರಾಸೆಗೆ ಬೆನ್ನು ಬಿದ್ದಿದ್ದನು. ಇದಿಷ್ಟು ಹಣಮಂತ ತಳವಾರ ಕುಟುಂಬದ ಇತಿಹಾಸವಾಗಿತ್ತು.

### ಹಣಮಂತನ ಕೊಲೆ ಮಾಡಿದ್ಯಾರು...?

ಕುಡುಕನಾದರೂ ತೀರಾ ಸಂಭಾವಿತ ಪ್ರಾಣಿ. ಹಣಮಂತ ಗೋಪಾಲ ತಳವಾರನನ್ನು ಅದ್ಯಾರು... ಯಾವ ಕಾರಣಕ್ಕೆ ಕೊಲೆ ಮಾಡಿರಬೇಕು? ಹಣಮಂತ ತಳವಾರ ಶ್ರೀಗಂಧದ ಕಳ್ಳ ಸಾಗಣೆ ಮಾಡುವ ಕೃತ್ಯ ನಡೆಸಿದ್ದನೇ... ಅಥವಾ ಕಳ್ಳ ಸಾಗಣೆದಾರರು ಗುಂಪಿನಲ್ಲಿದ್ದನೇ... ಹಣಮಂತ ತಳವಾರ ಕೊಲೆಗೆ ಕಾರಣಗಳೇನಿರಬಹುದು? ಎಂಬ ಸಂಗತಿ ಪೊಲೀಸರಿಗೆ ಸವಾಲಿನಂತೆ ಎದುರಾಗಿತ್ತು. ಅನಾಮಧೇಯವಾಗಿ ಸತ್ತವನು ಹಣಮಂತ ಎಂದು ಗೊತ್ತಾಗಿದೆ. ಇನ್ನು ಇವನ ಹಂತಕರ ಪತ್ತೆಗೆ ಡಿವೈಎಸ್ಪಿ ಡಿ.ಹೆಚ್. ಮುಲ್ಲಾ ನೇತೃತ್ವದಲ್ಲಿ ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ, ಪಿಎಸ್‌ಐಗಳಾದ ಕಣವಿ, ಹೆಚ್.ಕೆ. ನರಳೆ ಮತ್ತು ವಿಶೇಷ ತನಿಖಾ ತಂಡದ ಸಿಬ್ಬಂದಿಗಳು ಕಾರ್ಯಾಚರಣೆ ರೂಪಿಸಿದ್ದರು.

### ಊರು ಬಿಟ್ಟು ಪರಾರಿ ಆಗಿದ್ದರು...

ಹಣಮಂತ ತಳವಾರ ಕೊಲೆ ಆದದ್ದು ಹೇಗೆ? ಮತ್ತು ಯಾತಕ್ಕೆ ಎಂದು ಕೇಳಬೇಕೆಂದರೆ ಜತೆಯಾಗಿ ಇರುತ್ತಿದ್ದ ಬಸಪ್ಪ ಅದಾಗಲೇ ನಾಪತ್ತೆಯಾಗಿದ್ದನು. ಮತ್ತು ಈತನ ಜತೆಗಿದ್ದ ಐನಾತಿಗಳು ಸಚಿನ್ ಕಂಟೆನ್ನವರ, ಈರಪ್ಪ ಹಡಗಿನಾಳ ಅವರ ಸುಳಿವು ಇರಲಿಲ್ಲ. ಊರಲ್ಲಿ ಕೇಳಿದಾಗ ಕಬ್ಬಿನ ಕಟಾವ್ ಗ್ಯಾಂಗ್‌ನಲ್ಲಿ ಸಿಕ್ಕಾಪಟ್ಟೆ ಅಡ್ವಾನ್ಸ್ ಪಡೆದುಕೊಂಡು ಮಾಲೀಕರಿಗೆ ಕೈಕೊಟ್ಟು ಪರಾರಿಯಾದ ಸುದ್ದಿ ತಿಳಿದು ಬಂದಿತು. ಛಲ ಬಿಡದ ವಿಶೇಷ ಪೊಲೀಸ್ ತನಿಖಾ ತಂಡಕ್ಕೆ ಹಣಮಂತ ತಳವಾರನ ಜತೆಗೆ ಆತನ ತಮ್ಮ ಬಸಪ್ಪ, ಸಚಿನ್ ಕಂಟೆನ್ನವರ, ಈರಪ್ಪ ಹಡಗಿನಾಳ, ಇನ್ನೋರ್ವ ಓಡಾಡಿಕೊಂಡ ಮಾಹಿತಿಯನ್ನು ಹೆಕ್ಕಿ ತೆಗೆದಿದ್ದರು. ಘಟಪ್ರಭಾ ಪೊಲೀಸರಿಗೆ ಯಾಕೋ ಮೃತನಾಗಿದ್ದ ಹಣಮಂತ ತಳವಾರ ಮತ್ತು ಆತನ ಸ್ನೇಹಿತರ ಮೇಲೆ ಸಂದೇಹ ಬಲವಾಗತೊಡಗಿತ್ತು. ಹೇಗಾದರೂ ಸರಿ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದರೆ ನಿಜವಾದ ಹಕೀಕತ್ ಏನೆಂದು ತಿಳಿಯುವುದು ಎಂದರಿತುಕೊಂಡು ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ ತಮ್ಮ ತನಿಖಾ ತಂಡಕ್ಕೆ ಸೂಚನೆ ನೀಡಿ ಆದಷ್ಟು ಬೇಗನೆ ಮಾಡಿ ಎಂದರು.

### ದುಷ್ಟ ತಮ್ಮ ಬಸಪ್ಪ ಬಿಚ್ಚಿಟ್ಟ ಕೊಲೆ...

ನಿಜವಾಗಿಯೂ ಇದು ಪತ್ತೇದಾರಿ ಸಿನಿಮಾ... ವೆಬ್

☞ 12


ಹಣಮಂತನ ಶವದ ಪಕ್ಕದಲ್ಲಿ ಶ್ರೀಗಂಧದ ತುಂಡುಗಳು ಬಿದ್ದಿರುವುದು

# ಜಯಂತ್ ರೈ ಹತ್ಯೆಗೆ 30 ವರ್ಷ

2 ☞

ಇನ್ನು ಮುಂದೆ ಬಡತನವೆಂಬುದು ಮುಗಿದ ಅಧ್ಯಾಯ. ಇದೊಂದು ಕೆಲಸ ಮಾಡಿ ಕೊಟ್ಟುಬಿಡು. ಮುಂದೆ ಪುತ್ತೂರಿನಲ್ಲಿ ನಿನ್ನ ಮಾತು ಹೇಗೆ ನಡೆಯುತ್ತದೋ ನೋಡುತ್ತಿರು' ಎಂಬ ಮಾತು ಸೇರಿಸಿಬಿಟ್ಟ.

ಹತ್ಯೆ ಹೇಗಾಗಬೇಕು ಎಂದು ಶೂಟರ್‌ಗಳು ವಿವರ ನೀಡುತ್ತಿದ್ದರೆ ಸುನಿಲ್ ನಿಂತಲ್ಲೇ ಸಂಭ್ರಮಿಸುತ್ತಿದ್ದ. ಅದು ಯಾರದೋ ಶತ್ರುವನ್ನು ಕೊಲ್ಲುತ್ತೇನೆ ಎಂಬ ಆನಂದವಲ್ಲ. ರಮೇಶ್-ಫ್ರಾನ್ಸಿಸ್‌ನಂತಹ ಮುಂಬೈನ 'ಭಾಯಿಲೋಗ್'ಗಳು ತನ್ನನ್ನು ನಂಬಿ ತನಗೊಂದು ಕೆಲಸ ವಹಿಸಿಕೊಟ್ಟರಲ್ಲ ಎಂಬ ಆನಂದ. ಅಷ್ಟರಮಟ್ಟಿಗೆ ಅವರಿಗೆ ಹತ್ತಿರವಾದೆನಲ್ಲ ಎಂಬ ಪರಮಾನಂದ.

ಮರುದಿನದಿಂದಲೇ ಮಂಗಳೂರಿನ ಬಜ್ಪೆಯ ಗುಡ್ಡ ಪ್ರದೇಶದ ಅಜ್ಞಾತ ಸ್ಥಳದಲ್ಲಿ ಸುನಿಲ್‌ಗೆ ಗುಂಡು ಹಾರಿಸುವ ತರಬೇತಿ ನೀಡಲಾಯಿತು. ನಂತರ ಪುತ್ತೂರಿಗೆ ಕಳುಹಿಸಿಕೊಡಲಾಯಿತು. ಕಾಂಗ್ರೆಸ್ ಮುಖಂಡ ಡಾಲ್ಫಿರೇಗೋ ಎಂಬವರಿಗೆ ದೂರದ ಬಂಧುವಾಗಿದ್ದ ಸುನಿಲ್, ಚುನಾವಣೆ ಘೋಷಣೆಯಾಗುತ್ತಿದ್ದಂತೆಯೇ ಕಾಂಗ್ರೆಸ್ ಪ್ರಚಾರ್ ಸಭೆಗಳಲ್ಲಿ ಕಾರ್ಯಕರ್ತರಿಗೆ ಜೊತೆಯಾಗತೊಡಗಿದ. ಜಯಂತ್ ರೈಗೂ ವಂಚಿತನಾದ. ಹೋದಲ್ಲಿ ಬಂದಲ್ಲೆಲ್ಲ ಜಯಂತ್ ಸನಿಹದಲ್ಲಿ ಕಾಣಿಸಿಕೊಳ್ಳಲಾರಂಭಿಸಿದ.

ಹತ್ಯೆಯ ಮುನ್ನ ದಿನ ರಾತ್ರಿ ಪುತ್ತೂರಿಗೆ ಮತ್ತೊಮ್ಮೆ ಬಂದಿಳಿದ ರಮೇಶ್ ಪೂಜಾರಿ ಮತ್ತು ಫ್ರಾನ್ಸಿಸ್‌ಗೆ ಎಂದಿನಂತೆ ಮಂಜಲ್ಪಡ್ಪುವಿನ ಕೊಡಿಪಾಡಿ ರಸ್ತೆಯಲ್ಲಿ ಬಪ್ಪಳಿಗೆ ಕಮಲಾಕ್ಷ ಜೊತೆಯಾಗಿದ್ದ. ಮೂವರು ಸೇರಿ ಸಾಲ್ಮರ ರೈಲ್ವೆ ಟ್ರ್ಯಾಕ್ ಬಳಿಯ ಕತ್ತಲ ಪ್ರದೇಶ ಒಂದರಲ್ಲಿ ಸುನಿಲ್‌ನನ್ನು ಭೇಟಿಯಾದರು. ವ್ಯಾನ್‌ನಲ್ಲಿ ಕುಳಿತೇ ನಾಲ್ವರು ಚರ್ಚಿಸಿದರು. ಹೆಚ್ಚಿನ ಮಾತು ಬೇಕಿರಲಿಲ್ಲ.



ನಾಳೆ ಇಷ್ಟು ಹೊತ್ತಿಗೆವಿ ಡಾನ್ ಜಯಂತನ ಕೊಲೆಯ ಸುದ್ದಿ ಪುತ್ತೂರು ಒಂದನ್ನೇ ಏಕೆ? ಇಡೀ ಕರ್ನಾಟಕ ರಾಜ್ಯವನ್ನೇ ಅಲ್ಲೋಲಕಲ್ಲೋಲ ಮಾಡಿ ಹಾಕಿರುತ್ತದೆ. ಜಯಂತ್‌ನ ಹೆಣ ಬಿದ್ದ ಕೂಡಲೇ ಕೊಣಾಜೆಯ ಕೋಳಿಫಾರಂನಲ್ಲಿರುವ ಹಂಚಿನ ಮನೆಯೊಳಗಿನ ಫೋನು ರಿಂಗಣಿಸಬೇಕು. ಅಲ್ಲಿಯತನಕ ಬಪ್ಪಳಿಗೆ ಕಮಲಾಕ್ಷ ಪುತ್ತೂರಿನಿಂದ ಕದಲುವಂತಿಲ್ಲ ಎಂಬ ಆದೇಶವನ್ನು ಹೊರಡಿಸಲಾಯಿತು.

ಹತ್ಯೆಯ ಸಿದ್ಧತೆಗಳನ್ನು ಹೇಗೆ ನಡೆಸಬೇಕು ಎಂಬುದನ್ನು ಮತ್ತೊಮ್ಮೆ ಸುನಿಲ್‌ಗೆ ಮನದಟ್ಟು ಮಾಡಲಾಯಿತು. ಕೊನೆ ಕ್ಷಣದಲ್ಲಿ ರಮೇಶ್ ಪೂಜಾರಿ ತನ್ನ ಸೊಂಟದಲ್ಲಿದ್ದ ಅಡಗಿಸಿ ಇಟ್ಟುಕೊಂಡಿದ್ದ ಪಿಸ್ತೂಲನ್ನು ಸುನಿಲ್‌ಗೆ ಹಸ್ತಾಂತರಿಸಿ ಆಲ್ ದಿ ಬೆಸ್ಟ್ ಅಂದುಬಿಟ್ಟ.

ಸರಿಯಾಗಿ 15 ನಿಮಿಷಗಳ ನಂತರ ವ್ಯಾನ್‌ನಿಂದ ಕೆಳಗಿಳಿದ ಸುನಿಲ್ ಡಿಸೋಜಾ ಹೊರಡಲು ಸಿದ್ಧನಾದ. ಅದುವರೆಗೂ ತಲ್ವಾರ್ ಮುಟ್ಟಿರದ, ಅಪ್ಪಿತಪ್ಪಿ ಕೂಡಾ ಭೂಗತಲೋಕದ ಕಡೆ ತಲೆ ಹಾಕಿ ಮಲಗಿರದ ಈತ ನಾಳೆಯಿಂದ ದಿನಪತ್ರಿಕೆಗಳ ಮುಖಪುಟದ ಸುದ್ದಿಯಾಗುತ್ತಾನಲ್ಲ? ಅಂತ ಫ್ರಾನ್ಸಿಸ್ ಯೋಚಿಸಿದ. ಮುಖದಲ್ಲಿ ಸಣ್ಣದೊಂದು ಕಿರುನಗೆ ಇತ್ತು. ಪುತ್ತೂರಿನ ಸುನಿಲ್ ಯಾವತ್ತೂ ತನ್ನ ಆದೇಶ ತಪ್ಪುವ ಮಗನಲ್ಲ ಎಂಬುದು ಚೆನ್ನಾಗಿ ಗೊತ್ತಿತ್ತು.

ಸೊಂಟ ಬಳಿ ಪಿಸ್ತೂಲನ್ನು ಅಡಗಿಸಿಟ್ಟುಕೊಂಡು ಕತ್ತಲ ರಾತ್ರಿಯ ಬೀದಿ ದೀಪದ ಬೆಳಕಿನಲ್ಲಿ ಸಾಲ್ಮರ ರೈಲ್ವೆ ಗೇಟ್ ದಾಟಿ ನಡೆದು ಹೋಗುತ್ತಿದ್ದ ಸುನಿಲ್‌ನನ್ನೊಮ್ಮೆ ದಿಟ್ಟಿಸಿ ನೋಡಿದ ರಮೇಶ್ ಪೂಜಾರಿ. ಆತ ತನ್ನ ಬಲಹೀನ ದೇಹವನ್ನು, ನಿಸ್ಸಹಾಯಕ ಕಾಲುಗಳ ನೆರವಿನಿಂದ ನಡೆಸಿಕೊಂಡು ಹೋಗುವುದನ್ನು ನೋಡಿದ ರಮೇಶ್‌ಗೆ ಇದೇ ನಿಸ್ಸಹಾಯಕ, ನಿತ್ರಾಣ ಮತ್ತು ನಿರುಪಯೋಗಿ ಮನುಷ್ಯ ಇನ್ನು 12 ಗಂಟೆಗಳ ಒಳಗಾಗಿ ಮಂಗಳೂರು, ಬೆಂಗಳೂರು ಮತ್ತು ಪುತ್ತೂರಿನ ಸರ್ವಶಕ್ತ ಭೂಗತದೊರೆಯೊಬ್ಬನ ಸರ್ವನಾಶಕ್ಕೆ ಕಾರಣವಾಗಿ ಬಿಡುತ್ತಾನಲ್ಲ? ಅನ್ನಿಸಿ ಆಶ್ಚರ್ಯವಾಯಿತು. ಮಾರಣಹೋಮಕ್ಕೆ ವೇದಿಕೆ ಸಿದ್ಧವಾಯಿತು.

ಜಯಂತ್ ಹತ್ಯೆಯ ಸಂಚುಕೋರರ ಸಾಲಿನಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್‌ನ ಮೂವರು ರಾಜಕಾರಣಿಗಳ ಹೆಸರು ತೇಲಿ ಬಂತು. 'ಜಯಂತ್ ಸಾಯದೆ ಹೋಗಿದ್ದರೆ ನಾನೇ ಕೊಲ್ಲಿಸುವ ಅಗತ್ಯವೂ ಬರುತ್ತಿತ್ತು' ಅಂತ ಮುತ್ತಪ್ಪ ರೈ ಪುತ್ತೂರಿನ ತನ್ನ ಆತ್ಮೀಯರೊಬ್ಬರ ಬಳಿ ಹೇಳಿದರಂತೆ ಎಂಬ ವಿಷಯವೂ ಚರ್ಚೆಗೆ ವಸ್ತುವಾಯಿತು. ಆದರೆ ಜಯಂತ್ ರೈ ದೇಹ ಚಿತೆಯಲ್ಲಿ ಉರಿದು ಆರಿ ಹೋಗುವ ಮೊದಲೇ ಚರ್ಚೆಯೂ ತಣ್ಣಗಾಗಿತ್ತು. ಭೂಗತಲೋಕದ ಬಣ್ಣವೂ ಬದಲಾಗಿತ್ತು.

ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸಿದ ಜಯಂತ್ ರೈ ಹತ್ಯೆಯ ಸುದ್ದಿ ತಿಳಿಯುತ್ತಿದ್ದಂತೆ ಪ್ರೀತಿಸಿದ ಹುಡುಗಿ ದಿಗ್ಭ್ರಮೆಗೊಳಗಾದಿದ್ದಳು. 'ನಮ್ಮಿಬ್ಬರ ಚಂದದ ಸಂಸಾರದ ಕನಸಿನ ಬುನಾದಿಯೇ ಕುಸಿದುಬಿತ್ತಲ್ಲ' ಅಂತ ಹೆತ್ತವರೆದುರು ತಲೆ ಚಚ್ಚಿಕೊಂಡು ಅತ್ತಳಂತೆ.


ಆದರೆ ಭೂಗತ ಪ್ರಪಂಚ ಚಂದವನ್ನೆಲ್ಲಿ ಕೇಳುತ್ತದೆ? ಅದೇನಿದ್ದರೂ ಚಂದ ಕೆಡಿಸುವ ಪ್ರಪಂಚ ಅಷ್ಟೇ.

**ಇಷ್ಟಕ್ಕು ಏನಾಯಿತೆಂದರೆ...**

ಅವತ್ತು ತಾರೀಕು **ನವೆಂಬರ್ 21, 1994, ಸಮಯ ಬೆಳಗ್ಗಿನ 9.45.**

ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್‌ನ ಉಪಾಧ್ಯಕ್ಷರಾಗಿದ್ದ ಜಯಂತ್ ರೈ ಎಂಬ ನತದೃಷ್ಟ ಯುವಕ ಪುತ್ತೂರು ಹೊರವಲಯದ ಮುಕ್ರುಂಪಾಡಿಯ ಮನೆಯಿಂದ ಹೊರಡುವ ಹೊತ್ತಿಗಾಗಲೇ ಬೆಳಗ್ಗಿನ ಎಂಟೂವರೆ ಗಂಟೆ. ತೀರಾ ಹೊರಡುವ ಮುನ್ನ ಶೂ ರ್ಯಾಕ್‌ನ ಮೂಲೆಯಲ್ಲಿ ಅಡಗಿಸಿಟ್ಟಿದ್ದ ರಿವಾಲ್ವರನ್ನು ಕೈಗೆತ್ತಿಕೊಂಡು ಕರ್ಚೀಫಿನಿಂದೊಮ್ಮೆ ಹಗುರಾಗಿ ಒರೆಸಿಕೊಂಡರು. ರಿವಾಲ್ವರ್ ಜೊತೆಗಿದ್ದರೆ ಆ ಧೈರ್ಯವೇ ಬೇರೆ ಅಂದುಕೊಂಡರು.

ಮುಕ್ರುಂಪಾಡಿ ರಸ್ತೆಯಿಂದ ನೇರವಾಗಿ ಹೊರಟರೆ 10-15 ನಿಮಿಷಗಳಲ್ಲಿ ಮಹಾಲಿಂಗೇಶ್ವರ ದೇವಸ್ಥಾನ ತಲುಪಿಕೊಳ್ಳಬಹುದು. ಆದರೆ ಭೂಗತಲೋಕದ ಆಂತರ್ಯ ಬಲ್ಲವರಾರೂ ಪ್ರತಿದಿನ ನೇರ ರಸ್ತೆಗಳಲ್ಲಿ ಓಡಾಡುವುದಿಲ್ಲ. ಜಯಂತ್ ಕೂಡ ಅಷ್ಟೇ, ಬಿಳಿ ಅಂಗಿ, ಕಡು ನೀಲಿ ಬಣ್ಣದ ಪ್ಯಾಂಟು ಧರಿಸಿ ಕಣ್ಣಿಗೆ ತಂಪು ಕನ್ನಡಕ ಏರಿಸಿಕೊಂಡು ಕಾರು ಸ್ಟಾರ್ಟ್ ಮಾಡುವ ಹೊತ್ತಿಗಾಗಲೇ ಬೆಂಗಾವಲಿನ ಇಬ್ಬರು ಹುಡುಗರು ಚಕ್ಕನೆ ಹಾರಿ ಹಿಂದಿನ ಸೀಟಿನಲ್ಲಿ ಸ್ಥಾಪಿತರಾದರು. ಜಯಂತ್ ಬದಿಯೇ ಕುಳಿತ ಉಮಾನಾಥ್ ಎಂಬ ಹುಡುಗನೊಬ್ಬ 'ರೈಟ್ ಪೋಯಿ ಅಣ್ಣ' ಎನ್ನುವಷ್ಟರಲ್ಲಿ ಕಾರು ಮುಖ್ಯ ರಸ್ತೆಯಲ್ಲಿ ಬಿಟ್ಟು ನಿಧಾನವಾಗಿ ಬೈಪಾಸು ರಸ್ತೆಯಲ್ಲಿ ಸಾಗುತ್ತಿತ್ತು. ಮಹಾಲಿಂಗೇಶ್ವರ ದೇವಸ್ಥಾನ ತಲುಪಿಕೊಂಡ ರೈ ಭಕ್ತಿಯಿಂದ ನಮಸ್ಕರಿಸಿದ್ದರು. ಬೆಳಗ್ಗೆ ಪ್ರಾರ್ಥನೆಯಿಂದಲೇ ಆರಂಭವಾಗುವ ಅವರ ದಿನ ಪ್ರಾರ್ಥನೆಯಲ್ಲಿ ಮುಕ್ತಾಯಗೊಳ್ಳುತ್ತದೆ. ಇದು ನಿತ್ಯದ ರೂಢಿ.



ನಂತರ ತಲುಪಿಕೊಂಡದ್ದು ಪುತ್ತೂರು ಬಸ್ ಸ್ಟಾಂಡ್ ಬಳಿ ತಾತ್ಕಾಲಿಕವಾಗಿ ನಿರ್ಮಿಸಲಾಗಿದ್ದ ಕಾಂಗ್ರೆಸ್ ಚುನಾವಣಾ ಕಚೇರಿಗೆ. ಬಾಗಿಲಲ್ಲೇ ಕಾಲೇಜು ವಿದ್ಯಾರ್ಥಿ ಲಕ್ಷ್ಮಣ ಕಾಣಿಸಿಕೊಂಡಿದ್ದರು. ತಾನು ಪ್ರತಿನಿತ್ಯ ನೋಡುತ್ತಿರುವ ತನ್ನದೇ ಹುಡುಗ ಅಂದುಕೊಂಡರು. ನೋಡಿ ಮುಗುಳ್ನಕ್ಕವರೇ, 'ನೋಡು ಇದು ವಿನಯ್ ಕುಮಾರ್ ಸೊರಿಕೆ ಕಾರು. ನಂಬರ್ ಪ್ಲೇಟ್ ಹಾಳಾಗಿದೆ. ಸ್ವಲ್ಪ ಗಮ್ ಟೇಪ್ ಅಂಟಿಸಿಬಿಡು', ಅಂದವರೇ ಜೇಬಿನಲ್ಲಿದ್ದ .38 ರಿವಾಲ್ವರನ್ನು ಮಾರುತಿ ಕಾರಿನ ಡ್ಯಾಶ್ ಬೋರ್ಡ್‌ನಲ್ಲಿರಿಸಿದರು.

ಕಚೇರಿಯ ಒಳ ಕೋಣೆಯಲ್ಲಿ ಕುಳಿತಿದ್ದ ಅಶ್ವಿನಿ ಫ್ಯಾನ್ಸಿಯ ಚಂದ್ರ, ಕಾಂಗ್ರೆಸ್ ಮುಖಂಡ ಕೆ.ಪಿ. ಅಬ್ದುಲ್ಲಾಗೆ ಹೊರಗಿನಿಂದಲೇ ವಿಶ್ ಮಾಡಿದರು. ಅಷ್ಟೊತ್ತಿಗಾಗಲೆ ಲಕ್ಷ್ಮಣ ಗಮ್ ಟೇಪ್ ತೆಗೆದುಕೊಂಡು ನಂಬರ್ ಪ್ಲೇಟ್ ರಿಪೇರಿ ಆರಂಭಿಸಿಯಾಗಿತ್ತು. ಸರಿಯಾಗಿ ಅದೇ ಹೊತ್ತಿಗೆ ಮರಿಲ್‌ನ ತನ್ನ ಮನೆಯಲ್ಲಿ ಹಿಂದಿನ ರಾತ್ರಿ ಯಾವತ್ತಿಗಿಂತಲೂ ಮುಂಚಿತವಾಗಿ ಊಟ ಮಾಡಿ ಬಲವಂತದಿಂದ ಕಣ್ಣುಗಳಿಗೆ ನಿದ್ರೆ ಹೇಳಿಕೊಂಡು ಮಲಗಿಬಿಟ್ಟಿದ್ದ ಸುನಿಲ್ ಡಿಸೋಜಾ. ಬೆಳಿಗ್ಗೆ ಬೇಗ ಎದ್ದವನೇ ಸ್ನಾನ ಮಾಡಿ ಚಪ್ಪಲು ಹಾಕಿಕೊಳ್ಳುವಷ್ಟರಲ್ಲಿ ಮೀರಿ ಮೀರಿ ಮಿಂಚುವ ಕರಿ ನಾಗರದಂತಹ ಏಳು ಗುಂಡುಗಳ ಪಿಸ್ತೂಲನ್ನು ಸೊಂಟಕ್ಕೆ ಸಿಕ್ಕಿಸಿಕೊಂಡು ರಸ್ತೆಬದಿಯಲ್ಲಿ ನಿಂತಿದ್ದ ಆಟೋರಿಕ್ಷ ಹತ್ತಿ ಪುತ್ತೂರು ಬಸ್ ಸ್ಟಾಂಡ್ ಸಮೀಪದ ಕಾಂಗ್ರೆಸ್ ಕಚೇರಿ ಒಳ ಆವರಣ ತಲುಪುವ ಹೊತ್ತಿಗೆ 8.30 ಗಂಟೆ.

ಸ್ವಲ್ಪ ಹೊತ್ತಿನ ನಂತರ ಜಯಂತ್ ರೈ ನೆರಳು ಕಾಂಗ್ರೆಸ್ ಕಚೇರಿ ಆವರಣದಲ್ಲಿ ಕಾಣಿಸುತ್ತಿದ್ದಂತೆಯೇ ಒಳಗೆ ಕುಳಿತಿದ್ದ ಸುನಿಲ್ ಅಸಹನೆಯಿಂದ ಕದಲಿದ. ಕಣ್ಣುಗಳಲ್ಲಿ ಇದ್ದಕ್ಕಿದ್ದಂತೆ ಒಂದು ಮೃಗೀಯ ಎಚ್ಚರ ಜಾಗೃತರಾಗಿತ್ತು. ಮುಷ್ಟಿ ಬಿಗಿಯಾದವು. ಮಾಂಸ ಖಂಡಗಳು ವಿಚಿತ್ರವಾಗಿ ಕದಲಿ ಇನ್ನಷ್ಟು ಬಿಗಿಗೊಳ್ಳುತ್ತಿರುವಂತಿದೆ ಎಂದು ಆತ ಅಂದುಕೊಳ್ಳುತ್ತಿರುವಂತೆಯೇ ಅದ್ಯಾರೊಂದಿಗೂ ಆ ದಿನದ ಚುನಾವಣಾ ಸಭೆಗಳ ವಿವರ ಚರ್ಚಿಸುತ್ತಾ ಮಹಡಿ ಮೆಟ್ಟಿಲುಗಳ ಬಳಿ ಜಯಂತ್ ರೈ ಬರುವುದು ಕಾಣಿಸಿಕೊಂತು. ಅದಕ್ಕೂ ಮೊದಲೇ ಕಚೇರಿ ಒಳ ಆವರಣದ ಮಹಡಿ ಮೆಟ್ಟಿಲುಗಳ ಮೇಲೆ ದಟ್ಟ ನೆರಳಿನ ಹಾಗೆ ಉದ್ಭವವಾಗಿ ಬಿಟ್ಟ ಹಂತಕ ಸುನಿಲ್. ಆತನ ಮೊನಚು ಕಣ್ಣುಗಳಲ್ಲಿ ನಿರ್ಧಾರಗಳು ತಾಂಡವ ಆಡುತ್ತಿದ್ದವು. ಇಷ್ಟು ವರ್ಷಗಳ ಭೂಗತ ಜಗತ್ತನ್ನು ನೋಡಿದೆಯಲ್ಲ ಪುತ್ತೂರು? ಈಗ ಹೊಸದೊಂದು ಕಂಡು ಕೇಳರಿಯದಂತಹದೊಂದು ಕೃತ್ಯ ಮಾಡಿ ತೋರಿಸುತ್ತೇನೆ ಅಂತ ಮನಸ್ಸಿನಲ್ಲಿ ಹೇಳಿಕೊಂಡ. ಸೊಂಟದ ಒಳಗೆ ಅಡಗಿಸಿಟ್ಟಿದ್ದ ಪಿಸ್ತೂಲನ್ನೊಮ್ಮೆ ಮೆಲ್ಲಗೆ ಸವರಿಕೊಂಡ.

ಮಹಡಿ ಮೆಟ್ಟಿಲುಗಳ ಮೇಲೆ ನಿಂತಿದ್ದ ಸುನಿಲನನ್ನು ಅಚ್ಚರಿ ಇಲ್ಲದ ಕಣ್ಣುಗಳಲ್ಲಿ ಜಯಂತ್ ಗಮನಿಸಿದರಾದರೂ ಅಲ್ಲೇ ನಿಂತಿದ್ದ ಕಾಂಗ್ರೆಸ್ ಮುಖಂಡ ಮೂಸಕುಞಮಿಯೊಂದಿಗೆ ಮಾತನಾಡಲು ಶುರುವಿಟ್ಟುಕೊಂಡರು.

ಲೋಡೆಡ್ ಪಿಸ್ತೂಲ್, ಶೂಟರ್‌ಗಳು ನಿಂತಿದ್ದ ಧೈರ್ಯ, ಬರಿ ಕೈಯನ್ನು ಬಂದಿರುವ ಬೇಟೆ, ಬೆರಳೆಣಿಕೆಯಷ್ಟೇ ಜನರಿದ್ದ ಕಾಂಗ್ರೆಸ್ ಚುನಾವಣಾ ಕಚೇರಿ, ಜೊತೆಗೆ ಜಯಂತ್ ರೈನಂತಹ ದೊಡ್ಡ ಡಾನ್ ಅನ್ನು ಮುಗಿಸಲು ಬೇಕಾಗಿದ್ದ ಮಾನಸಿಕ ಸಿದ್ಧತೆ, ಎಲ್ಲಕ್ಕಿಂತ ಹೆಚ್ಚಾಗಿ ಬಾಯಿ ಲೋಗ್‌ಗಳ ಬೆಸ್ಟ್ ಆಫ್ ಲಕ್ - ಹೀಗೆ ಪುತ್ತೂರಿನ ಕಾಂಗ್ರೆಸ್ ಚುನಾವಣಾ ಕಚೇರಿ ಆವತ್ತಿನ ದಿನ ಒಂದು ಕೊಲೆ ಹಾಡಿ ಮುಗಿಸುವುದಕ್ಕೆ ಹೇಳಿ ಮಾಡಿಸಿದಂತಹ ಸಿಚುವೇಶನ್ ಚಡಪಡಿಸುತ್ತಿತ್ತು.

ಸುನಿಲ್‌ಗೆ ಅಷ್ಟು ಸಾಕಿತ್ತು. ಇದಕ್ಕಿಂತ ಅನುಕೂಲ ಇನ್ಯಾವುದಿದೆ? ಹಂತಕ ಕ್ಷಣಾರ್ಧದಲ್ಲಿ ವಾರ್ಮ್ ಅಪ್ ಆಗಿ ಮಾನಸಿಕವಾಗಿ ಆಣೆಯಾಗಿಬಿಟ್ಟ. ಮನಸು ಹೀನ ಹಿಂಸೆಯೊಂದಕ್ಕೆ ಚಡಪಡಿಸುತ್ತಿತ್ತು.

ಏನೇನು ಅವಸರವಿಲ್ಲದೆ ಸೊಂಟದ ಬದಿಯಿಂದ ಪಿಸ್ತೂಲ್ ಹೊರಗೆಳೆದ ಹಂತಕ, ಅದನ್ನು ಕಾಕ್ ಮಾಡಿಕೊಂಡ. ಅಸಲಿ ಕೆಲಸವಿರುವುದೇ ಈಗ. ಒಮ್ಮೆ ಶಾಕ್ ಮಾಡಿದ ಮೇಲೆ ಪಿಸ್ತೂಲು ಮಹಾ ಅಪಾಯಕಾರಿ. ಸುಮ್ಮನೆ ಟ್ರಿಗರ್ ಮೇಲೆ ಬೆರಳಿಟ್ಟರೂ ಸಾಕು. ಗುಂಡು ಸಿಡಿದುಬಿಡುತ್ತದೆ. ಒಂದು ದೊಡ್ಡ ಮಟ್ಟದ ಮಾರಣ ಹೋಮಕ್ಕೆ ಮಾನಸಿಕವಾಗಿ ಸಿದ್ಧಗೊಂಡಂತಿದ್ದ.

ಜಯಂತ್ ರೈ ಬೆನ್ನು ಚಾಚಿ ನಿಂತಿದ್ದ ಮಹಡಿ ಮೆಟ್ಟಿಲುಗಳಿಗೆ ತೀರಾ ಹತ್ತಿರವಾದ. ಮೂಸ ಕುಞಯೊಂದಿಗೆ ಮಾತು ಮುಂದುವರಿಸಿದ್ದ ಜಯಂತ್‌ಗೆ ಹಂತಕ ತನ್ನ ಸೊಂಟದಿಂದ ಪಿಸ್ತೂಲ್ ಈಚೆಗೆ ತೆಗೆದದ್ದು ಗೊತ್ತೇ ಆಗಲಿಲ್ಲ. ಅದು ಒಂದೇ ಒಂದು ಸ್ಪ್ಲಿಟ್ ಸೆಕೆಂಡ್‌ನ್ನು ಹೊತ್ತಿನ ಮಾತು. ಸುನಿಲ್‌ಗೆ ಮೈಯೊಳಗೆ ಯಾವುದೋ ಹುಚ್ಚುಶಕ್ತಿ ನುಗ್ಗಿ ಬಂದಂತಾಯಿತು. ಬಲ ಕೈಗೆ ಎಡ ಕೈಯನ್ನು ಆಧಾರವಾಗಿಸಿಕೊಂಡವನೇ ಪಿಸ್ತೂಲನ್ನು ಅದೆಷ್ಟು ಮುಂದಕ್ಕೆ ಚಾಚಿದನೆಂದರೆ ಅಲ್ಮೋಸ್ಟ್ ಅದು ಜಯಂತ್ ಕಿವಿಯ ಮೇಲ್ಭಾಗ ತಲುಪಿತ್ತು. ದೇಹ ವೇಗವಾಗಿ ಮಾತು ಕೇಳಿತ್ತು. ತೀರಾ ಹತ್ತಿರ ಹತ್ತಿರಕ್ಕೆ ಬಂದವನೇ ಟ್ರಿಗರ್ ಎಳೆದುಬಿಟ್ಟ.

ಬಲ ಕಿವಿಯ ಮೇಲಿನ ಅತ್ಯಂತ ಮೃದುವಾದ ಭಾಗಕ್ಕೆ ಕ್ಷಣಮಾತ್ರದಲ್ಲಿ ಗುಂಡು ಬಿದ್ದಿತ್ತು. ಹಂತಕನ ಗುರಿ ಮತ್ತು ನಿರ್ಣಯಗಳೆರಡು ಕರಾರುವಕ್ಕಾಗಿ ತಲೆಯೊಳಗೆ ನುಗ್ಗಿದ ಗುಂಡು ಇನ್ನೊಂದು ಕಡೆಯಿಂದ ಹೊರಬರದೆ ಮೆದುಳಿನೊಳಗೆ ಸ್ಫೋಟಗೊಂಡಿತ್ತು ಮತ್ತೊಂದು ಬಾರಿ ಫೈಯರ್ ಮಾಡುವ ಅಗತ್ಯವ ಬೀಳಲಿಲ್ಲ. ಒಂದೇ ಹೊಡೆತಕ್ಕೆ ಜಯಂತ್ ನೆಲಕ್ಕುರುಳಿದರು. ಅವರ ಮಲ್ಲಿಗೆ ಬಿಳುಪಿನ ಬಿಳಿ ಅಂಗಿಯ ಮೇಲೆ ನಿಧಾನವಾಗಿ ರಕ್ತ ಸುರಿಯತೊಡಗಿತು. ಭೂಗತ ಜಗತ್ತಿನ ಅಂಗಳದಲ್ಲಿನ ದೊಡ್ಡ ಆಲದ ಮರ ಒಂದು ಬುಡ ಕತ್ತರಿಸಿಕೊಂಡು ಬಿದ್ದಿತ್ತು.

ಆ ಹೊತ್ತಿಗಾಗಲೇ ಪುತ್ತೂರಿನ ಕಾಂಗ್ರೆಸ್ ಕಚೇರಿಯ ತಂಪು ಗಾಳಿಯಲ್ಲಿ ಹಸಿ ರಕ್ತದ ವಾಸನೆ ನಿಧಾನವಾಗಿ ಬೆರೆಯುತ್ತಿತ್ತು. ಕಚೇರಿ ಕೋಣೆಯೊಳಗೆಲ್ಲಾ ರಕ್ತ ಕಂದಕ ಬೆರೆತ ವಾಸನೆ.

ಆಗಷ್ಟೇ ರಕ್ತ ಕುಡಿದು ಬಂದಂತಿದ್ದ ಹಂತಕ ಸುನಿಲ್ ಪುತ್ತೂರಿನ ಕಾಂಗ್ರೆಸ್ ಚುನಾವಣಾ ಕಚೇರಿಯಲ್ಲಿ ಗುಂಡು ಹಾರಿಸುತ್ತಿದ್ದರೆ ಸುತ್ತಲಿದ್ದವರೆಲ್ಲ ಏನೇನು ಮಾಡಲಿಕ್ಕಾಗದೆ

☞ 11

# ಲವ್ ಮಾಡಿದವಳನ್ನೇ ಕೊಂದೇ ಬಿಟ್ಟ ಕಣ್ಣೂರು ಮೂಲದ ಕೇರಳ ಕುಟ್ಟಿ!





ಇಂದಿರಾನಗರದಲ್ಲಿ ಪ್ರೇಯಸಿಯನ್ನೇ ಕೊಲೆ ಮಾಡಿ ಪರಾರಿಯಾಗಿದ್ದ ಪ್ರಿಯಕರ ಆರವ್ ಹಾನಿ (21) ಕೊನೆಗೂ ಖಾಕಿ ಬಲೆಗೆ ಬಿದ್ದಿದ್ದು ಪ್ರೇಯಸಿಯು ಬೇರೆ ಯುವಕರೊಂದಿಗೆ ಸಲುಗೆಯಿಂದ ಇದ್ದ ಕಾರಣಕ್ಕೆ ಕೊಲೆ ಮಾಡಿದ್ದಾಗಿ ಆರೋಪಿ ತಪ್ಪೊಪ್ಪಿಕೊಂಡಿದ್ದಾನೆ.

ಆರವ್, ಇಂದಿರಾನಗರದ ದಿ ರಾಯಲ್ ಲಿವಿಂಗ್ ಸರ್ವಿಸ್ ಅಪಾರ್ಟ್‌ಮೆಂಟ್‌ನಲ್ಲಿ ತನ್ನ ಪ್ರೇಯಸಿ ಮಾಯಾ ಗೋಗೋಯಿ (20)ಳನ್ನು ಕೊಲೆ ಮಾಡಿದ್ದ. ಆರವ್ ಮತ್ತು ಮಾಯಾ, ನವೆಂಬರ್ 23ರಂದು ಮಧ್ಯಾಹ್ನ ಒಟ್ಟಿಗೆ ಅಪಾರ್ಟ್‌ಮೆಂಟ್‌ಗೆ ಬಂದು ಕೊಠಡಿಗೆ ಬಾಡಿಗೆಗೆ ಪಡೆದಿದ್ದರು. ನಂತರ ಅದೇ ಕೊಠಡಿಯಲ್ಲಿ ತಂಗಿದ್ದರು. ಮಾಯಾ, ಸಹೋದ್ಯೋಗಿ ಯುವಕರೊಂದಿಗೆ ಹೆಚ್ಚು ಸಲುಗೆಯಿಂದ ಮಾತನಾಡುತ್ತಿದ್ದಳು. ಈ ವಿಚಾರಕ್ಕೆ ಅಸಮಾಧಾನಗೊಂಡಿದ್ದ ಆರವ್, ಪ್ರೇಯಸಿ ಜತೆ ಆಗಾಗ್ಗೆ ಜಗಳವಾಡುತ್ತಿದ್ದ. ಅದೇ ರೀತಿ ನವೆಂಬರ್ 24ರಂದು ಮಧ್ಯಾಹ್ನ ಜಗಳವಾಡಿ ಮಾಯಾಳಿಗೆ ಮನಸೋಇಚ್ಛೆ ಚಾಕುವಿನಿಂದ ಕೊಲೆ ಮಾಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೊಲೆಯ ನಂತರ ಎರಡು ದಿನ ಶವದ ಜತೆಯೇ ಇದ್ದ ಆರೋಪಿಯು ಶವವನ್ನು ತುಂಡರಿಸಿ ಅಪಾರ್ಟ್‌ಮೆಂಟ್‌ನಿಂದ ಹೊರಗೆ ಸಾಗಿಸುವ ಬಗ್ಗೆ ಯೋಚಿಸುತ್ತಾ ಕಾಲ ಕಳೆದಿದ್ದಾನೆ. ಆದರೆ, ಸಿಕ್ಕಿಬೀಳುವ ಭಯದಲ್ಲಿ ಆ ನಿರ್ಧಾರ ಕೈಬಿಟ್ಟಿದ್ದಾನೆ. ಅಂತಿಮವಾಗಿ ಶವವನ್ನು ಅಲ್ಲಿಯೇ ಬಿಟ್ಟು ನವೆಂಬರ್ 26ರಂದು ಬೆಳಗ್ಗೆ ಅಪಾರ್ಟ್‌ಮೆಂಟ್‌ನಿಂದ ಹೊರಬಂದು ಕ್ಯಾಬ್‌ನಲ್ಲಿ ಪರಾರಿಯಾಗಿದ್ದ ಎಂದು ಪೊಲೀಸರು ಹೇಳಿದ್ದಾರೆ.

ಆರವ್, ಕ್ಯಾಬ್‌ನಲ್ಲಿ ನಗರ ರೈಲು ನಿಲ್ದಾಣಕ್ಕೆ ಹೋಗಿದ್ದ ಅಪಾರ್ಟ್‌ಮೆಂಟ್ ಸುತ್ತಮುತ್ತಲಿನ ಸಿ.ಸಿ. ಕ್ಯಾಮೆರಾಗಳಲ್ಲಿ ಸೆರೆಯಾಗಿದ್ದ ಆ ಕ್ಯಾಬ್‌ನ ನೋಂದಣಿ ಸಂಖ್ಯೆಯ ವಿವರ ಆಧರಿಸಿ ಮೊದಲಿಗೆ ಚಾಲಕನನ್ನು ಪತ್ತೆ ಮಾಡಲಾಯಿತು. ನಂತರ ಆ ಚಾಲಕನ ವಿಚಾರಣೆ ನಡೆಸಿದಾಗ ಆರೋಪಿಯು ರೈಲು ನಿಲ್ದಾಣಕ್ಕೆ ಡ್ರಾಪ್ ತೆಗೆದುಕೊಂಡಿದ್ದ ವಿಚಾರ ಗೊತ್ತಾಯಿತು. ಆರೋಪಿ ರೈಲಿನಲ್ಲಿ ರಾಯಚೂರು, ಮಧ್ಯಪ್ರದೇಶ, ಉತ್ತರಪ್ರದೇಶ ಮಾರ್ಗವಾಗಿ ವಾರಣಾಸಿಗೆ ಹೋಗಿದ್ದ. ನಂತರ ವಾರಣಾಸಿಯಿಂದ ಶುಕ್ರವಾರ ಬೆಂಗಳೂರಿಗೆ ಹಿಂದಿರುಗಿದ್ದ ಆತನನ್ನು ಮೊಬೈಲ್ ಕರೆಗಳ ಸುಳಿವು ಆಧರಿಸಿ ದೇವನಹಳ್ಳಿ ಬಳಿ ಬಂಧಿಸಲಾಯಿತು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.



### ಡೇಟಿಂಗ್ ಆ್ಯಪ್‌ನಲ್ಲಿ ಪರಿಚಯ

ಕೇರಳ ಮೂಲದ ಆರವ್, ಬಿಬಿಎ ಓದಿದ್ದಾನೆ. ಕೆಲ ತಿಂಗಳ ಹಿಂದೆ ಆತ ಬೆಂಗಳೂರಿಗೆ ಬಂದು ಕೋರಮಂಗಲದ ಇನ್‌ಸ್ಟಿಟ್ಯೂಟ್‌ನಲ್ಲಿ ಡಿಪ್ಲೊಮಾ ಪೂರೈಸಿದ್ದ. ಈ ಮಧ್ಯೆ ಆತ 'ಬಂಬಲ್' ಡೇಟಿಂಗ್ ಆ್ಯಪ್‌ನಲ್ಲಿ ಮಾಯಾಳನ್ನು ಪರಿಚಯ ಮಾಡಿಕೊಂಡಿದ್ದ. ನಂತರ ಪರಸ್ಪರರು ಆರು ತಿಂಗಳಿಂದ ಪ್ರೀತಿ ಮಾಡುತ್ತಿದ್ದರು. ಮಾಯಾ, ಈ ಹಿಂದೆ ಕೆಲಸ ಮಾಡುತ್ತಿದ್ದ ಕೋಡಿಹಳ್ಳಿಯ ಖಾಸಗಿ ಕಂಪನಿಯಲ್ಲಿ ಆರವ್‌ನನ್ನು ಇಂಟರ್ನ್‌ಶಿಪ್‌ಗೆ ಸೇರಿಸಿದ್ದಳು.

ಅಸ್ಸಾಂ ಮೂಲದ ಮಾಯಾ ತನ್ನ ಅಕ್ಕನ ಜತೆ ಹೂಡಿಯ ಬಾಡಿಗೆ ಮನೆಯಲ್ಲಿ ವಾಸವಾಗಿದ್ದಳು. ಅವರು ಎಚ್‌ಎಸ್‌ಆರ್ ಲೇಔಟ್‌ನ ಶಿಕ್ಷಣ ಸಂಸ್ಥೆಯಲ್ಲಿ ಕೆಲಸಮ ಮಾಡುತ್ತಿದ್ದರು. ಜೆ.ಬಿ. ನಗರದ ಪೇಯಿಂಗ್ ಗೆಸ್ಟ್‌ನಲ್ಲಿ ನೆಲೆಸಿದ್ದ ಆರವ್, ಆಗಾಗ್ಗೆ ಮಾಯಾಳನ್ನು ಭೇಟಿಯಾಗುತ್ತಿದ್ದ. ಮಾಯಾ ಬೇರೆ ಯುವಕನನ್ನು ಪ್ರೀತಿ ಸುತ್ತಿರಬಹುದೆಂದು ಅನುಮಾನಗೊಂಡಿದ್ದ ಆರೋಪಿ, ಪ್ರೇಯಸಿಯ ಕೊಲೆಗೆ ಸಂಚು ರೂಪಿಸಿದ್ದ. ಪೂರ್ವಯೋಜಿತ ಸಂಚಿನಂತೆ ಮಾಯಾಳನ್ನು ಅಪಾರ್ಟ್‌ಮೆಂಟ್‌ಗೆ ಕರೆದೊಯ್ದಿದ್ದ. ಮೊದಲೇ ಆನ್‌ನಲ್ಲಿ ಚಾಕು ಹಾಗೂ ನೈಲಾನ್ ಹಗ್ಗ ಖರೀದಿಸಿ ಅಪಾರ್ಟ್‌ಮೆಂಟ್‌ಗೆ ತೆಗೆದುಕೊಂಡು ಹೋಗಿದ್ದ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಕೊಲೆ ಮಾಡಿದ ನಂತರ ಆರೋಪಿಯು ಅಪಾರ್ಟ್‌ಮೆಂಟ್‌ನ ಕೊಠಡಿಯಲ್ಲೇ ಆತ್ಮಹತ್ಯೆ ಮಾಡಿಕೊಳ್ಳಲು ಯೋಚಿಸಿದ್ದಾನೆ. ಆದರೆ, ಅಂತಿಮ ಕ್ಷಣದಲ್ಲಿ ಆತ್ಮಹತ್ಯೆಯ ನಿರ್ಧಾರ ಕೈಬಿಟ್ಟು ವಾರಣಾಸಿಗೆ ಹೋಗಿದ್ದ. ಕೇರಳದಲ್ಲಿರುವ ಆತನ ತಾಯಿ, ಮೊದಲ ಪತಿಯಿಂದ ವಿಚ್ಛೇದನ ಪಡೆದು ಎರಡನೇ ಮದುವೆಯಾಗಿದ್ದರು. ನಂತರ ಎರಡನೇ ಪತಿಯಿಂದಲೂ ವಿಚ್ಛೇದನ ಪಡೆದು ಮೂರನೇ ಮದುವೆಯಾಗಿದ್ದರು. ತಾಯಿಯಿಂದ ದೂರವಾಗಿದ್ದ ಆರವ್‌ನನ್ನು ಆತನ ಅಜ್ಜ ಸಾಕಿ ಬೆಳೆಸಿದ್ದರು. ಆರೋಪಿಯನ್ನು ಪೊಲೀಸ್ ಕಸ್ಟಡಿಗೆ ಪಡೆದು ಹೆಚ್ಚಿನ ವಿಚಾರಣೆ ನಡೆಸಲಾಗುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಮಾಯಾ ಗೋಗೋಯಿ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು, ಜತೆಗೆ ಯೂಟ್ಯೂಬ್ ವ್ಲಾಗರ್ ಕೂಡ ಆಗಿದ್ದಳು. ಇತ್ತೀಚೆಗೆ ತನ್ನ ಹೆಸರಿನಲ್ಲಿ ಯೂಟ್ಯೂಬ್ ಚಾನೆಲ್ ಆರಂಭಿಸಿದ್ದು, ಕೆಲ ವಿಡಿಯೋಗಳನ್ನು ಮಾಡಿ ಅಪ್‌ಲೋಡ್ ಮಾಡಿದ್ದಳು. ☯

---

10 ☞

ಆ ಮಾರಣ ಹೋಮವನ್ನು ಸುಮ್ಮನೆ ನೋಡುತ್ತಿದ್ದರು. ಪುತ್ತೂರು, ಬೆಂಗಳೂರು, ಮಂಗಳೂರು ಭೂಗತ ಜಗತ್ತಿನ ಮೊದಲನೇ ಸಾಲಿನ ಡಾನ್, ತನ್ನದೇ ಊರಿನ, ತನ್ನದೇ ಜನರೆದುರು, ಹಾಡುಹಗಲೇ, ಏನೇನು ಮಾಡಲಿಕ್ಕಾಗದೇ ನಿಸ್ಸಹಾಯಕನಾಗಿ ಬಿದ್ದುಬಿಟ್ಟಿದ್ದರು.

ಕಾಂಗ್ರೆಸ್ ಕಚೇರಿ ಒಳಗಿನಿಂದ ಗುಂಡಿನ ಸದ್ದು ಮತ್ತು ಆಕ್ರಂದನ ಕೇಳಿಸುತ್ತಿದ್ದಂತೆ ನಂಬರ್ ಪ್ಲೇಟ್‌ಗೆ ಗಮ್ ಟೇಪ್ ಅಂಟಿಸುತ್ತಿದ್ದ ಲಕ್ಷ್ಮಣ್ ತಕ್ಷಣ ಒಳ ಕೋಣೆಗೆ ಓಡಿ ಬಂದರು. ಹಂತಕ ಸುನಿಲ್ ಅಲ್ಲೇ ನಿಂತಿದ್ದ. ದಿಗ್ಭ್ರಮೆಗೆ ಒಳಗಾದಂತಿದ್ದ ಲಕ್ಷ್ಮಣ್ ತಕ್ಷಣ ಆತನ ಪಿಸ್ತೂಲಿನ ನಳಿಕೆಯನ್ನು ಹಿಡಿದಿಟ್ಟುಕೊಂಡರು. ಅಷ್ಟರಲ್ಲಾಗಲೇ ಉಳಿದವರು ಸುನಿಲ್‌ನನ್ನು ಸುತ್ತುವರಿದು ಎಳೆದಾಡಿಕೊಂಡು ಬಂದು ಮುಖ್ಯರಸ್ತೆಯ ದಿನೇಶ್ ಭವನ ಹೋಟೆಲ್ ಬಳಿ ಕರೆ ತಂದಾಗಿತ್ತು.

ಗುಂಡಿನ ದಾಳಿಯ ಸುದ್ದಿ ತಿಳಿದು ಸ್ಥಳಕ್ಕೆ ಧಾವಿಸಿ ಬಂದಿದ್ದ ಜಯಂತ್ ಆತ್ಮೀಯ, ಆವತ್ತಿನ ಯುವ ಕಾಂಗ್ರೆಸ್ ಮುಖಂಡ ಸತೀಶ್ ನ್ಯಾಕ್ ಮುಖ ಚದುರುವಂತೆ ಹಂತಕ ಸುನೀಲನ ಕೆನ್ನೆಗೆರಡು ಬಾರಿಸಿದರು. ಇನ್ನೇನು ಆತನ ಕಣ್ಣು ಗುಡ್ಡೆಗೆ ಕೈ ಹಾಕಿ ಎಳೆಯಬೇಕೆನ್ನುವಷ್ಟರಲ್ಲಿ ಪೊಲೀಸ್ ಅಧಿಕಾರಿಯೊಬ್ಬರು ಬಂದು ಗುಂಪು ಚದುರಿಸಿಬಿಟ್ಟರು. ಸುನಿಲ್‌ನನ್ನು ವಶಕ್ಕೆ ತೆಗೆದುಕೊಂಡರು.

ಮುತ್ತಪ್ಪ ರೈ ಪಡೆಯ ಟಫ್ ಫೈಟರ್ ಜಯಂತ್ ಹತ್ಯೆಯ ಸುದ್ದಿ ತಿಳಿಯುತ್ತಿದ್ದಂತೆಯೇ ಪುತ್ತೂರು ಬೆಂಕಿ ಬಿದ್ದ ಜೇನುಗೂಡಿನಂತಾಗಿತ್ತು. ಅವರ ಬೆಂಬಲಿಗರು, ಗೆಳೆಯರು ಭೂಮಿ ಅದುರಿಹೋಗುವಂತೆ ಆಕ್ರಂದನ ಮಾಡಿದರಂತೆ.

ಇನ್ನೊಂದೆಡೆ ಚುನಾವಣಾ ಕಚೇರಿ ಜನರಿಂದ ಕಿಕ್ಕಿರಿದು ಹೋಯಿತು. ಪೊಲೀಸರು ನುಗ್ಗಿ ಬಂದರು. ಆಂಬುಲೆನ್ಸ್ ಅರಚುತ್ತಾ ಬಂತು. ಊರಿಗೆ ಊರೇ ಸೇರಿಬಿಟ್ಟಿತ್ತು. ಅವರನ್ನೆಲ್ಲ ಸರಿಸಿಕೊಂಡು ಬಂದ ಸ್ಥಳೀಯ ಪೊಲೀಸ್ ಇನ್ಸ್‌ಪೆಕ್ಟರ್ ಜಯಂತ್ ದೇಹವನ್ನು ಮುಟ್ಟಿ ನೋಡಿದವರೇ ಸಣ್ಣದಾಗಿ ಉದ್ಗರಿಸಿದ್ದರು.

ಮೋಸ್ಟ್ಲಿ ಹಿ ಇಸ್ ಡೆಡ್.

ಕಾಂಗ್ರೆಸ್ ಕಾರ್ಯಕರ್ತರು ಸುನೀಲ್‌ನನ್ನು ಸುತ್ತಿಕೊಂಡ ಸುದ್ದಿ ತಿಳಿಯುತ್ತಿದ್ದಂತೆಯೇ ಆತನನ್ನು ಕರೆದೊಯ್ಯಲು ನೆಲ್ಲಿಕಟ್ಟೆಯ ರಾಮಕೃಷ್ಣ ಆಶ್ರಮದ ಬಳಿ ಸ್ಕೂಟರ್‌ನಲ್ಲಿ ಕಾದು ನಿಂತಿದ್ದ ಕಮಲಾಕ್ಷ ನಿಂತಲ್ಲೇ ಬೆವರತೊಡಗಿದ. ಸ್ಕೂಟರ್‌ನ ಇಗ್ನೀಷನ್ ಕೀ ತಿರುಗಿಸಿ ಎಕ್ಸಲೇಟರ್ ಒತ್ತಿದವನೇ ಶರವೇಗದಲ್ಲಿ ಹೊರಟು ಹೋದ. 15 ನಿಮಿಷಗಳ ನಂತರ ಆತನ ಸ್ಕೂಟರ್ ಬಂದು ನಿಂತದ್ದು ಉಪ್ಪಿನಂಗಡಿ ದಾರಿಯಲ್ಲಿರುವ ಟೆಲಿಫೋನ್ ಬೂತ್ ಬಳಿಗೆ.

'ಬಾಯಿ, ಗೇಮ್ ಸಕ್ಸಸ್' ಅಂತ ಕಮಲಾಕ್ಷ ಕೋಣಾಜೆ ಮನೆಯೊಂದರ ನಿರ್ದಿಷ್ಟ ಸಂಖ್ಯೆಗೆ ಫೋನ್ ಮಾಡಿದಾಗ ಮಧ್ಯಾಹ್ನ 11.15 ಸಮಯ.

'ಕೆಲಸ ಮುಗೀತಾ? ಫ್ರಾನ್ಸಿಸ್ ಕೇಳಿದ್ದ.'

'ಹೌದು' ಅಂದ ಕಮಲಾಕ್ಷ.

'ಶ್ಯೂರ್? ಪ್ರಾಣ ಹೋಗಿದೆಯಾ?' ಮತ್ತೆ ಕೇಳಿದ.

'ಹೌದು ಮೆದುಳಿನ ಒಳಕ್ಕೆ ಗುಂಡು ನುಗ್ಗಿದಂತಿದೆ...' ಉತ್ತರಿಸಿದ್ದ ಕಮಲಾಕ್ಷ.

ಜಯಂತ್ ರೈನ ಅಳಿಸಲಾಗದ ಚಿತ್ರವೊಂದು ಅವರಿಬ್ಬರ ಕಣ್ಣಮುಂದಿನಿಂದ ಕದಲಿಹೋದ ಹಾಗಾಯಿತು. ಇದಾದ ಕೆಲವೇ ನಿಮಿಷಗಳಲ್ಲಿ ರಮೇಶ್ ಪೂಜಾರಿ- ಫ್ರಾನ್ಸಿಸ್‌ನನ್ನು ಹೊತ್ತ ಮಾರುತಿ ಕಾರೊಂದು ಕಾಸರಗೋಡು ಗಡಿ ದಾಟಲಾರಂಭಿಸಿತು.

ಗುಂಡು ತಿಂದು ಜರ್ಝರಿತವಾಗಿದ್ದ ಜಯಂತರ ದೇಹವನ್ನು ಸುಸ್ವಾಗತ ಹೋಟೆಲ್‌ನ ಮಾಲೀಕ ಪ್ರಭಾಕರ್ ಶೆಟ್ಟಿ, ಕಾಂಗ್ರೆಸ್ ಮುಖಂಡರಾದ ಕೆ.ಪಿ. ಅಬ್ದುಲ್ಲಾ ಮೂಸ ಕುಞ್ ಅಂಬುಲೆನ್ಸ್‌ನಲ್ಲಿ ಇರಿಸಿಕೊಂಡರು. ಪುತ್ತೂರು ಸರ್ಕಾರಿ ಆಸ್ಪತ್ರೆಯಲ್ಲಿ ಮತ್ತು ಬಿಸಿ ರೋಡ್‌ನ ವೈದ್ಯಕೀಯ ಕೇಂದ್ರ ಒಂದರಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿದ ಬಳಿಕ ಮಂಗಳೂರಿನ ಸಿಟಿ ಆಸ್ಪತ್ರೆಗೆ ದಾಖಲಿಸಲಾಯಿತು. ಖುದ್ದು ಬಗವಂತನಾದ ಧರ್ಮರಾಯನಿಗೆ ಬುಲೆಟ್ ಬಿದ್ದಿದೆ ಏನೋ ಎಂಬಷ್ಟು ಆಸಕ್ತಿಯಿಂದ ಅಲ್ಲಿನ ವೈದ್ಯರುಗಳು ಆಪರೇಷನ್ ಥಿಯೇಟರಿಗೆ ಹೋಗಿ ಚಿಕಿತ್ಸೆ ಆರಂಭಿಸಿದ್ದರು. ಆಸ್ಪತ್ರೆಯ ಬೆಡ್ ಮೇಲೆ ದೇಹ ಅನಾಥವಾಗಿ ಬಿದ್ದಿತ್ತು. ತಲೆಯ ಹಿಂಭಾಗದಿಂದ ಎಂಟ್ರಿ ಪಡೆದ ಬುಲೆಟ್ ಸಣ್ಣದೊಂದು ತೂತು ಕೊರೆದಿತ್ತು. ಎರಡು ಕೈಗಳು ನಿಸ್ಸಹಾಯಕವಾಗಿ ಬೆಡ್ ಮೇಲೆ ಚೆಲ್ಲಿಕೊಂಡಿದ್ದವು. ಆ ದೈತ್ಯ ದೇಹದ ಮೇಲೆ ಇನ್ನೊಂದೇ ಒಂದು ಚಿಕ್ಕ ಗಾಯವು ಇರಲಿಲ್ಲ. ಡಾನ್ ಮುತ್ತಪ್ಪ ರೈನ ಬಹುಕಾಲದ ಗೆಳೆಯ ಮತ್ತು ನಂಬಿಕಸ್ಥ ತಂಡದ ಮೊಟ್ಟಮೊದಲ ಸದಸ್ಯ ಜಯಂತ್ ರೈ ರೀತಿಯಾಗಿ ಮುಗಿದು ಹೋಗಿದ್ದರು. ಆರು ದಿನಗಳ ನಡೆದ ಚಿಕಿತ್ಸೆಯ ಬಳಿಕ ಜಯಂತ್ ಮೃತರಾದರೆಂದು ಘೋಷಿಸಲಾಯಿತು. ಪುತ್ತೂರು, ಮಂಗಳೂರು ಹಾದಿಯಾಗಿ ಬೆಂಗಳೂರು ಭೂಗತ ಲೋಕದಲ್ಲಿ ಮುಕುಟವಿಲ್ಲದ ಮಹಾರಾಜನಂತೆ ಮೆರೆದಿದ್ದ ಜಯಂತ್ ಏಕಾಏಕಿ ಸತ್ತು ಬಿದ್ದದ್ದು ಹೀಗೆ.

ಮರುದಿನ ಮುಂಜಾನೆ ರಾಜ್ಯದ ಅಷ್ಟೂ ಪತ್ರಿಕೆಗಳು ಕೊಲೆಯ ವಿವರಗಳನ್ನು, ಆರೋಪಿ ಸುನಿಲ್ ಎಂಬತನ ಹಿನ್ನೆಲೆಯನ್ನು ಚಿತ್ರ ಸಹಿತ ಪ್ರಕಟಿಸಿದವು. ದಿನಗಟ್ಟಲೆ ಕೊಲೆಗೆ, ಕೊಲೆಯ ಕಾರಣಗಳ ಬಗ್ಗೆ ಪತ್ರಿಕೆಗಳಲ್ಲಿ ಪುಂಖಾನುಪುಂಖವಾಗಿ ತಲೆಬುಡವಿಲ್ಲದ ವರದಿಗಳು ಪ್ರಕಟಗೊಂಡವು. ಆದರೆ ಜಯಂತಿ ರೈ ಹತ್ಯೆಗೂ ವರ್ಷಗಳ ಹಿಂದೆ ಮಂಗಳೂರಿನಲ್ಲಿ ನಡೆದ ಅಮರ್ ಆಳ್ವರ ಹತ್ಯೆಗೂ ಇರಬಹುದಾದ ಸೂಕ್ಷ್ಮಾತಿಸೂಕ್ಷ್ಮ ಸಂಬಂಧವನ್ನು ಆ ವೇಳೆಗಾಗಲೇ ಒಬ್ಬ ವ್ಯಕ್ತಿ ಮಾತ್ರ ಸ್ಪಷ್ಟವಾಗಿ ಅರ್ಥ ಮಾಡಿಕೊಂಡಿದ್ದರು.

ಅವರ ಹೆಸರು ಮುತ್ತಪ್ಪ ರೈ!

ಜಯಂತ್‌ಗೆ ತುಂಬಾ ಆತ್ಮೀಯರಾಗಿದ್ದ ಬೆರಳೆಣಿಕೆಯ ನಂಬಿಕಸ್ಥ ಸ್ನೇಹಿತರನ್ನು ಬಿಟ್ಟರೆ, ಅವರ ಕುಟುಂಬದವರನ್ನು ಹೊರತುಪಡಿಸಿದರೆ ಮತ್ತೆ ಯಾರಿಗೂ ಈಗ ಜಯಂತ್ ರೈ ನೆನಪೇ ಇಲ್ಲ.

ಬದುಕಿದ್ದಾಗಲೇ ಮನುಷ್ಯ ಮನುಷ್ಯನನ್ನು ಮರೆಯುತ್ತಾನಂತೆ. ಇನ್ನು ಸತ್ತ ಮೇಲೆ ನೆನಪಿಡುತ್ತಾರಾ? ಅಂದಹಾಗೆ, ಕತ್ತಲಲೋಕಕ್ಕೆ ಮರೆವು ಜಾಸ್ತಿ. ☯

# ತನ್ನ ಮೂವರು ಸ್ನೇಹಿತರ ಜತೆ ಸೇರಿ ಕೊಲೆಗೈದಿದ್ದ ತಮ್ಮ ಸೇರಿ ನಾಲ್ವರ ಬಂಧನ!

9 ☞

ಸೀರಿಸ್‌ಗಳ ಎಪಿಸೋಡ್‌ಗಳನ್ನು ಮರೆಸುವಂತಹ ಪತ್ತೇದಾರಿಕೆ ಘಟಪ್ರಭಾ ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ ಮತ್ತು ಪಿಎಸ್‌ಐಗಳಾದ ಎಸ್.ಆರ್. ಕಣವಿ, ಹೆಚ್.ಕೆ. ನರಳೆ ಮತ್ತು ಸಿಬ್ಬಂದಿಗಳದ್ದಾಗಿದೆ. ಸರಿ ಸುಮಾರು 25 ದಿನಗಳವರೆಗಿನ ಸತತ ಪರಿಶ್ರಮದಿಂದ ತುಂಬಾ ಜಾಣ್ಮೆಯ ತನಿಖೆ ಮುಂದುವರೆದು ಕೊನೆಗೆ ದಿ. 03-12-2024ರಂದು ಅನಾಮಧೇಯ ಶವವಾಗಿ ಸಿಕ್ಕ ಹಣಮಂತ ತಳವಾರನ ತಮ್ಮ ಬಸಪ್ಪನನ್ನು ತಮ್ಮ ವಶಕ್ಕೆ ತೆಗೆದುಕೊಂಡು ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ, ಪಿಎಸ್‌ಐಗಳಾದ ಕಣವಿ, ನರಳೆ ವಿಚಾರಣೆ ನಡೆಸಿದಾಗ ಮೊದ-ಮೊದಲು ಪೊಲೀಸರನ್ನು ದಿಕ್ಕು ತಪ್ಪಿಸಲು ವಿಫಲ ಯತ್ನ ಮಾಡಿ ವಿಧಿಯಿಲ್ಲದೇ ಪೊಲೀಸರ ಖೆಡ್ಡಾದಲ್ಲಿ ಬಿದ್ದು 'ಸಾಹೇಬ್ರ, ನಮ್ಮ ಅಣ್ಣ ಹಣಮಂತನನ್ನು ನಾನು ಮತ್ತು ಸಚಿನ್ ಕಂಟೆನ್ನವರ, ಈರಪ್ಪ ಹಡಗಿನಾಳ, ಮೂಡಲಗಿಯ ಬಾಪು ಶೇಖ್ ಕೂಡಿ ಕೊಲೆ ಮಾಡಿ ಕಬ್ಬಿನ ಗದ್ದೆಯಲ್ಲಿ ಎಸೆದಿದ್ದೇವೆ. ಪ್ರಕರಣ ನಮ್ಮ ಮೇಲೆ ಬಾರದಿರಲಿ ಅಂತಾ ಶ್ರೀಗಂಧದ ಕಟ್ಟಿಗೆ ನಾವೇ ಚೆಲ್ಲಿದ್ದೇವೆ' ಎಂದು ವಿವರಿಸಿದಾಗ ಪೊಲೀಸರಿಗೆ ಒಂದರೆ ಕ್ಷಣ ಶಾಕ್ ಆಯಿತು. 'ನಿಮ್ಮ ಅಣ್ಣ ಹಣಮಂತನ ಕೊಲೆ ಯಾತಕ್ಕಾಗಿ ಮಾಡಿದೆ?' ಎಂದು ತನಿಖಾಧಿಕಾರಿಗಳ ಪ್ರಶ್ನೆಗಳಿಗೆ ದುಷ್ಟ ತಮ್ಮ ನೀಡಿದ ಗಿಳಿಪಾಠವನ್ನೇ ಇಲ್ಲಿ ವರದಿಯಾಗಿರಿಸಿದೆ.

**ಅಣ್ಣನ ಹೆಸರಿನಲ್ಲಿ 50 ಲಕ್ಷ ರೂ. ವಿಮೆ...**

ದುಷ್ಟ ಬಸಪ್ಪ ತಿಳಿಸಿದಂತೆ ಅಣ್ಣ ಹಣಮಂತ ತಳವಾರನ ಬಟ್ಟೆ-ಬರೆ ಆತನ ಬೇಡಿಕೆಗಳನ್ನು ಬಸಪ್ಪನೇ ಪೂರೈಸುತ್ತಲಿದ್ದನು. ಹೇಗಾದರೂ ಮಾಡಿ ತಾನು ದುಡ್ಡು ಮಾಡಬೇಕೆಂಬ ದುರಾಸೆ ಈತನಿಗೆ ಬೇತಾಳದಂತೆ ಬೆನ್ನು ಬಿದ್ದಿತ್ತು. ಅದಕ್ಕಾಗಿ ತೀರಾ ಸಂಭಾವಿತ ಆಗಿದ್ದ ಈತನ ಅಣ್ಣ ಹಣಮಂತ ತಳವಾರ ಹೆಸರಿನಿಂದ ಹೆಚ್‌ಡಿಎಫ್‌ಸಿಯ ಲೈಫ್ ಇನ್ಸೂರೆನ್ಸ್ 50 ಲಕ್ಷ ರೂ. ಆತನಿಗೆ ಅರಿವಿಲ್ಲದೆ ಆತನ ಸಹಿಯನ್ನು ತಾನೇ ಮಾಡಿ ಸುಮಾರು 68 ಸಾವಿರ ರೂ.ಗಳ ಪ್ರೀಮಿಯಂ ಕೂಡಾ ಕಟ್ಟಿದ್ದನು. ಆತನಿಗೆ ಹೆಂಡತಿ, ಮಕ್ಕಳಿದ್ದರೂ ಅದನ್ನು ಮುಚ್ಚಿಟ್ಟು ಅವನ ಇನ್ಸೂರೆನ್ಸ್‌ಗೆ ತಾನೇ ನಾಮಿನಿಯಾಗಿದ್ದ ಈ ದುಷ್ಟ ತಮ್ಮ. ಈ ಲೈಫ್ ಇನ್ಸೂರೆನ್ಸ್ ಹಿಂದೆ ಭಯಾನಕ ಸಂಚೊಂದನ್ನು ದುಷ್ಟ ಬಸಪ್ಪ ಸದ್ದಿಲ್ಲದೇ ರೂಪಿಸಿದ್ದನು. ಇದು ಕಳೆದ ಒಂದು ವರ್ಷದ ಹಿಂದಿನಿಂದಲೇ ಮಾಡಿದ್ದನು.

**ಅಣ್ಣ ಸತ್ತರೆ ತನಗೊಂದು ಕೋಟಿ ರೂ.ಗಳು...**

ತನ್ನ ಅಣ್ಣ ಹಣಮಂತನು ಸತ್ತು ಹೋದರೆ ತನಗೆ ಒಂದು ಕೋಟಿ ರೂ.ಗಳಿಗಿಂತ ಹೆಚ್ಚು ಹಣ ಬರುತ್ತದೆ. ಹೇಗಾದರೂ ಮಾಡಿ ತನ್ನ ಅಣ್ಣನನ್ನು ಸಾಯಿಸಿದರೆ ಅದ್ಯಾರಿಗೂ ಗೊತ್ತಾಗದಂತೆ ತನಗೆ ಒಂದು ಕೋಟಿ ರೂ. ಬರುತ್ತದೆ. ಹೇಗೂ ತಾನೇ ನಾಮಿನಿ ಇದ್ದೇನೆಂದು ಒಳಗೊಳಗೆ ಬೀಗಿದನು. ಇತ್ತೀಚಿಗೆ ಇದು ತನ್ನೊಬ್ಬನಿಂದ ಆಗದು ಎಂದರಿತುಕೊಂಡು ತನ್ನ ದುಷ್ಟ ಮಿತ್ರ ಸಚಿನ್ ಕಂಟೆನ್ನವರ ಜತೆಗೆ ತನ್ನ ಐಡಿಯಾ ಶೇರ್ ಮಾಡಿಕೊಂಡನು. ಆಗ ಸಚಿನ್ ಮೊದಲೇ ಐನಾತಿ ಐಡಿಯಾಗಳಿಗೆ ಎತ್ತಿದ ಕೈಯಾಗಿದ್ದನು. ಅದರಂತೆ ತನ್ನ ಸ್ನೇಹಿತರಾಗಿದ್ದ ಈರಪ್ಪ ಹಡಗಿನಾಳ ಮತ್ತು ಮೂಡಲಗಿಯ ಬಾಪು ಶೇಖ್ ಎಂಬುವವರನ್ನು ಕರೆತಂದನು.

**ಕೊಲೆಗೆ ಸಂಚು ರೂಪಿಸಿದರು...**

ದುಷ್ಟ ತಮ್ಮ ಬಸಪ್ಪ, ಕ್ರಿಮಿನಲ್ ಐಡಿಯಾಗಳ ಸಚಿನ್ ಕಂಟೆನ್ನವರ, ಈರಪ್ಪ ಹಡಗಿನಾಳ ಮತ್ತು ಮೂಡಲಗಿಯ ಬಾಪು ಶೇಖ್ ಒಂದೆಡೆ ಅಜ್ಞಾತ ಸ್ಥಳದಲ್ಲಿ ಗುಂಡು ಹಾಕುತ್ತಲೇ ಇತ್ತೀಚಿಗೆ ಸಂಚು ರೂಪಿಸಿದರು. ಆಗ ದುಷ್ಟ ತಮ್ಮ 'ನೋಡು ನಮ್ಮ ಅಣ್ಣ ಹಣಮಂತ ಹೇಗೋ ಸಾಯಬೇಕು. ಇನ್ಸೂರೆನ್ಸ್ ಹಣ ನನಗೆ ಬರಬೇಕು. ಬಂದ ಹಣದಲ್ಲಿ ನಿಮ್ಮ ಮೂರು ಜನರಿಗೆ ತಲಾ ಐದು ಲಕ್ಷ ಕೊಡುವುದಾಗಿ' ಮಾತು ಕೊಟ್ಟನು. ಅಬ್ಬಾ... 5 ಲಕ್ಷ ರೂ.ಗಳು ಎಂದು ಬಾಯಿ ಬಿಟ್ಟ ಐನಾತಿಗಳು ಹಣಮಂತ ತಳವಾರನ ಕೊಲೆಗೆ ಒಪ್ಪಿಕೊಂಡು ಮುಹೂರ್ತಕ್ಕಾಗಿ ಕಾಯ್ದರು. ಈರಪ್ಪ ಹಡಗಿನಾಳ ಜಮೀನಿನಲ್ಲಿ ಬೆಳೆದಿದ್ದ ಅಸಲಿ ಶ್ರೀಗಂಧವನ್ನು ಕತ್ತರಿಸಿ ಮೊದಲೇ ಶಂಕರ ಸಂಗಟಿ ಪಾಲಿನಿಂದ ಮಾಡಿದ ಜಮೀನಿನ ಕಬ್ಬಿನ ಬೆಳೆಯಲ್ಲಿ ಮುಚ್ಚಿಟ್ಟರು. ಇಲ್ಲಿ ಸಚಿನ್ ಕಂಟೆನ್ನವರ ಪೊಲೀಸ್ ಠಾಣೆ, ಕೋರ್ಟು ಮೆಟ್ಟಿಲು ಹತ್ತಿದ ಅನುಭವ ಚೆನ್ನಾಗಿತ್ತು. ಹೀಗಾಗಿ ಆತನ ಹೇಳಿಕೆಯಂತೆ ಉಳಿದವರು ಮುಂದುವರೆದಿದ್ದರು.

**ಕಂಠಪೂರ್ತಿ ಕುಡಿಸಿ ಕೊಂದರು...**

ಅಂದು ದಿನಾಂಕ 02-11-2024ರಂದು ಇಡೀ ದಿನ ಹಣಮಂತ ತಳವಾರನ ತಮ್ಮ ಬಸಪ್ಪ ಸೇರಿದಂತೆ ಉಳಿದ ಮೂವರು ತಿರುಗಿದ್ದಾರೆ. ಆ ದಿನ ಎಲ್ಲರೂ ಕೂಡಿ ಕಂಠ ಪೂರ್ತಿ ಸಾರಾಯಿ ಕುಡಿದಿದ್ದಾರೆ. ಕುಡಿದ ಅಮಲಿನಲ್ಲಿ 'ನಾವೆಲ್ಲರೂ ಕೂಡಿ ಶ್ರೀಗಂಧದ ಕಟ್ಟಿಗೆ ತರಲು ಆಣೆನ್ನವರ ತೋಟದ ಪರಿಸರಕ್ಕೆ ಹೋಗೋಣ' ಎಂದು ನಿಷ್ಪಾಪಿ ಹಣಮಂತನನ್ನು ನಂಬಿಸಿ ಹರಕೆಯ ಕುರಿಯಂತೆ ಅಂದು ರಾತ್ರಿ ಸಮಯದಲ್ಲಿ ಕರೆದೊಯ್ದಿದ್ದಾರೆ. ಕಲ್ಲೋಳಿ-ಮೂಡಲಗಿ ರಸ್ತೆಯತ್ತ ಮೋಟಾರ್ ಸೈಕಲ್ ಮೇಲೆ ಎಲ್ಲರೂ ಹೋಗಿದ್ದಾರೆ. ಹಣಮಂತ ತಳವಾರ ಈ ಸಂದರ್ಭದಲ್ಲಿ ತನ್ನ ತಮ್ಮ ಬಸಪ್ಪ ಧರಿಸುತ್ತಿದ್ದ ಟೀ ಶರ್ಟ್, ಬರ್ಮುಡಾ ಧರಿಸಿದ್ದನು. (ಇದೇ ಆಧಾರದ ಮೇಲಿನಿಂದ ಹಣಮಂತನ ಶವದ ಗುರುತು ಸಿಕ್ಕಿತು) ಅಲ್ಲಿಂದ ಕಬ್ಬಿನ ಗದ್ದೆಯ ನಡುವೆ ಬಂದಾಗ ಕುಡಿದು ಟೈಟ್ ಆಗಿದ್ದ ಹಣಮಂತನನ್ನು ಇಬ್ಬರು ಗಟ್ಟಿಯಾಗಿ ಹಿಡಿದಿದ್ದಾರೆ. ಇನ್ನಿಬ್ಬರು ಕಬ್ಬಿಣದ ರಾಡ್‌ನಿಂದ ಬರ್ಬರವಾಗಿ ಥಳಿಸಿದ್ದಾರೆ. ಥಳಿಸಿದ ಹೊಡೆತಕ್ಕೆ ಕಮಕ್-ಕಿಮಕ್ ಎನ್ನದೇ ಹಣಮಂತ ತಳವಾರ ಸ್ಥಳದಲ್ಲಿ ಗತ ಪ್ರಾಣನಾಗಿದ್ದಾನೆ. ಆತ ಸತ್ತಿದ್ದನ್ನು ಖಚಿತಪಡಿಸಿಕೊಂಡ ದುಷ್ಟ ತಮ್ಮ ಆತನ ಸಹಚರರು ಕತ್ತಲ ಮರೆಯಲ್ಲಿ ಕರಗಿ ಪರಾರಿ ಆಗಿ ಹೋಗಿದ್ದಾರೆ. ಇದಿಷ್ಟು ಅಣ್ಣನನ್ನು ನಿರ್ಧಯವಾಗಿ ಕೊಲೆ ಮಾಡಿದ ತಮ್ಮನು ತನಿಖಾಧಿಕಾರಿಗಳ ಮುಂದೆ ಹೇಳಿದ್ದನ್ನೇ ಇಲ್ಲಿ 'ಪೊಲೀಸ್ ನ್ಯೂಸ್' ವರದಿಯಾಗಿಸಿದೆ.



ಅಣ್ಣ ಹಣಮಂತ ತಳವಾರನನ್ನು ನಿರ್ಧಯವಾಗಿ ಕೊಲೆಗೈದು ಕಬ್ಬಿನ ಗದ್ದೆಯಲ್ಲಿ ಬಿಸಾಡಿರುವ ದುಷ್ಟ ತಮ್ಮ ಆತನ ಸ್ನೇಹಿತರು

**ಮೂವರು ಐನಾತಿ ಹಂತಕರು ವಶಕ್ಕೆ...**

ದುಷ್ಟ ತಮ್ಮ ಬಸಪ್ಪನ ಸಮಗ್ರ ಹೇಳಿಕೆ ಆಧರಿಸಿ ಡಿವೈಎಸ್ಪಿ ಡಿ.ಹೆಚ್. ಮುಲ್ಲಾ ನಿರ್ದೇಶನದಲ್ಲಿ ಉಳಿದ ಮೂವರು ಹಂತಕರನ್ನು ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ ಖಚಿತ ಮಾಹಿತಿ ಆಧರಿಸಿ ಸಚಿನ್ ಕಂಟೆನ್ನವರ, ಈರಪ್ಪ ಹಡಗಿನಾಳ, ಬಾಬು ಶೇಖ್ ಅವರನ್ನು ವಶಕ್ಕೆ ಪಡೆದುಕೊಂಡು ವಿಚಾರಿಸಿದಾಗ ಅವರು ಇದ್ದ ಸಂಗತಿಯನ್ನು ಉಚ್ಚೆ ಹೊಯ್ದಂತೆ ಸರಳವಾಗಿ ಬಾಯಿ ಬಿಟ್ಟು ತಮ್ಮ ತಪ್ಪು ಒಪ್ಪಿಕೊಂಡರು. ನಿಗೂಢವಾಗಿದ್ದ ಕೊಲೆಯೊಂದರ ಹಿಂದೆ ಬೆನ್ನು ಬಿದ್ದು ವಿಶೇಷ ಪರಿಶ್ರಮದಿಂದ ಪತ್ತೆ ಮಾಡಿದ ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ ಅವರ ತಂಡ ಆರೋಪಿಗಳನ್ನು ಬಂಧಿಸಿ ಅವರಿಂದ ಘಟನಾ ಸ್ಥಳದ ಪಂಚನಾಮೆ ಕೂಡಾ ಮಾಡಿತು.

**ಹಂತಕರೆಲ್ಲ ಜೈಲು ಸೇರಿದ್ದಾರೆ...**

ದುಡ್ಡಿನ ದುರಾಸೆಗೆ ಬೆನ್ನು ಬಿದ್ದು ಒಡಹುಟ್ಟಿದ ಅಣ್ಣನೆಂಬ ಕಿಂಚಿತ್ತು ಕರುಣೆಯಿಲ್ಲದೇ ತನ್ನ ಸಹಚರರಿಂದ ನೆರವು ಪಡೆದುಕೊಂಡು ಬರ್ಬರವಾಗಿ ಕೊಲೆ ಮಾಡಿ ಪ್ರಕರಣ ಹಳ್ಳ ಹಿಡಿಸಲು ಯತ್ನಿಸಿದ ಹಂತಕ ಬಸಪ್ಪ ಸಚಿನ್ ಕಂಟೆನ್ನವರ, ಈರಪ್ಪ ಹಡಗಿನಾಳ, ಬಾಪು ಶೇಖ್ ಸೇರಿದಂತೆ ನಾಲ್ವರನ್ನು ಬಂಧಿಸಿ ಘಟಪ್ರಭಾ ಪೊಲೀಸರು ನ್ಯಾಯಾಂಗದ ವಶಕ್ಕೆ ಒಪ್ಪಿಸಿದಾಗ ನ್ಯಾಯಾಧೀಶರು ಹಂತಕರೆಲ್ಲರನ್ನು ಜೈಲಿಗೆ ಕಳಿಸಿದ್ದಾರೆ. ಹೇಗಿದೆ ನೋಡಿ ಕುರುಡು ಕಾಂಚಾಣದ ಕರಾಮತ್ತು. ತನ್ನ ಕಾಲಡಿ ಬಿದ್ದವರನ್ನೆಲ್ಲಾ ತುಳಿದು ಹಾಕಿದೆ.

**ತನಿಖಾಧಿಕಾರಿಗಳಿಗೆ ಶ್ಲಾಘನೆ...**

ನಿಗೂಢವಾಗಿದ್ದ ಹಣಮಂತ ತಳವಾರನ ಕೊಲೆಯ ಹಿಂದೆ ಬೆನ್ನು ಬಿದ್ದ ಗೋಕಾಕ ಡಿವೈಎಸ್ಪಿ ಡಿ.ಹೆಚ್. ಮುಲ್ಲಾ ನಿರ್ದೇಶನದಲ್ಲಿ ಘಟಪ್ರಭಾ ಇನ್ಸ್‌ಪೆಕ್ಟರ್ ಹೆಚ್.ಡಿ. ಮುಲ್ಲಾ ನೇತೃತ್ವದಲ್ಲಿ ಅತ್ಯಂತ ಚಾಕಚಕ್ಯತೆಯ ತನಿಖಾ ಕಾರ್ಯಾಚರಣೆಯನ್ನು ಪಿಎಸ್‌ಐಗಳಾದ ಎಸ್.ಆರ್. ಕಣವಿ, ಹೆಚ್.ಕೆ. ನರಳೆ ಮತ್ತು ಸಿಬ್ಬಂದಿಗಳು ಯಶಸ್ವಿಯಾಗಿ ಹಂತಕರನ್ನು ಬಂಧಿಸಿರುವ ತನಿಖಾ ಸಿಬ್ಬಂದಿಗಳ ಕಾರ್ಯದಕ್ಷತೆಯನ್ನು ಎಸ್ಪಿ ಡಾ. ಭೀಮಾಶಂಕರ ಗುಳೇದ, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್., ರಾಮನಗೌಡ ಬಸರಗಿ ಅಭಿನಂದಿಸಿದ್ದಾರೆ.



ಸಿಬ್ಬಂದಿಗಳಾದ ಆರ್.ಕೆ. ಹೊಳ್ಕರ, ರಾಮಕೃಷ್ಣ ಗಿಡ್ಡಪ್ಪಗೋಳ, ಎಸ್.ಎಸ್. ಮಠಪತಿ, ರಾಜು ಧುಮಾಳ, ಬಿ.ಎಸ್. ನಾಯಿಕ, ಭೀಮಸಿ ತಳವಾರ, ವಿನೋದ ಠಕ್ಕನ್ನವರ (ಟೆಕ್ನಿಕಲ್ ಸೆಲ್)

## ಓದುಗರ ಗಮನಕ್ಕೆ

### ರಾಜಕೀಯ ಸುದ್ದಿಯೂ ಇರುತ್ತದೆ...

'ಪೊಲೀಸ್ ನ್ಯೂಸ್' ವಾರಪತ್ರಿಕೆಯಲ್ಲಿ ಬರೀ ಅಪರಾಧ ವರದಿಗಳು ಮಾತ್ರ ಬರುತ್ತದೆ ಅಂದುಕೊಳ್ಳಬೇಡಿ. ಬದಲಾದ ಕಾಲಮಾನದಲ್ಲಿ ಇನ್ನು ಮುಂದೆ ರಾಜಕೀಯ, ಭ್ರಷ್ಟಾಚಾರ, ಮುಚ್ಚಿ ಹೋಗಿರುವ 'ಕ್ರೈಂ' ಮುಂತಾದ ರಹಸ್ಯ ವರದಿಗಳನ್ನು ಬ್ಲಾಸ್ಟ್ ಮಾಡಲಿದ್ದೇವೆ. ನಿಮ್ಮ ಊರುಗಳಲ್ಲಿ ಇಂತಹ ಬ್ಲಾಸ್ಟ್ ಮಾಡುವಂತಹ ಸುದ್ದಿಗಳಿದ್ದರೆ ನಮಗೆ ಕಳುಹಿಸಿ ಕೊಡಿ. ನಿಮ್ಮ ಹೆಸರು, ವಿಳಾಸವನ್ನು ರಹಸ್ಯವಾಗಿಡುವ ಜವಾಬ್ದಾರಿ ನಮ್ಮದು. ನೀವು ಕಳುಹಿಸುವ ವರದಿಗೆ ದಾಖಲೆಗಳಿದ್ದರೆ ಒಳ್ಳೆಯದು. ಅಕಸ್ಮಾತ್ ದಾಖಲೆಗಳು ಇಲ್ಲದಿದ್ದಲ್ಲಿ, ನೀವು ಕಳುಹಿಸುವ ವರದಿಯಲ್ಲಿ ದಾಖಲೆಗಳು ಸಿಗುವ ಜಾಗವನ್ನು ನಮೂದಿಸಿದರೆ ಸಾಕು, ದಾಖಲೆ ಎತ್ತುವ ಜವಾಬ್ದಾರಿ ನಮ್ಮದು.

**ನಮ್ಮ ವಿಳಾಸ :**

8884452699 policenewsreporter@gmail.com ☎ 080-23588510

ನಂ. 165, 8ನೇ ಮುಖ್ಯರಸ್ತೆ, ಬಿಇಎಂಎಲ್ ಬಡಾವಣೆ, ಬಸವೇಶ್ವರನಗರ, ಬೆಂಗಳೂರು-560 079

# ಮಹಿಳೆಯರ ಬಗ್ಗೆ ಅಸಭ್ಯ ಚಿತ್ರಗಳನ್ನ ಬಿಡಿಸಿ ಮನೆ ಮುಂದೆ ಇಡುತ್ತಿದ್ದ ಸೈಕೋ ಶಿವಣ್ಣ!




**ಪ್ರಪಂಚದಲ್ಲಿ ವಿಧವಿಧವಾದ ಸೈಕೋಗಳು ಹುಟ್ಟಿಕೊಂಡಿದ್ದಾರೆ. ಹೆಂಗಸರ ಒಳ ಉಡುಪುಗಳನ್ನ ಕದಿಯುವುದು, ವಿಚಿತ್ರವಾಗಿ ಕೊಲ್ಲುವುದು, ಅನಗತ್ಯವಾಗಿ ಸಂಶಯ ಪಡುವುದು, ಯಾವುದೋ ಲೋಕದಲ್ಲಿ ವಿಹರಿಸುತ್ತಾ ತನ್ನೊಂದಿಗೆ ತಾನೇ ಮಾತನಾಡುವುದು ಹೀಗೆ ಹಲವಾರು ವಿಧಾನದ ಸೈಕೋಗಳಿದ್ದಾರೆ. ಆದ್ರೆ ಮೈಸೂರು ಜಿಲ್ಲೆ ನಂಜನಗೂಡು ತಾಲೂಕಿನ ಹುಲ್ಲಹಳ್ಳಿ ಗ್ರಾಮದ ವರದರಾಜಸ್ವಾಮಿ ಬಡಾವಣೆಯ ಈ ಸೈಕೋ ತರಹ ನೋಡೋಕ್ಕೆ ಸಿಗಲ್ಲ. ಹಾಗಿದ್ರೆ ಆತ ಅದೆಂಥಾ ಸೈಕೋ ಅಂತೀರಾ...? ಜಸ್ಟ್ ರೀಡ್ ದಿಸ್...**

## ನ್ಯಾಯ ನೀಡುವ ಗ್ರಾಮದ ಮುಖಂಡನಿಂದಲೇ ಕೃತ್ಯ... ರೆಡ್ ಹ್ಯಾಂಡಾಗಿ ಹಿಡಿದ ಗ್ರಾಮಸ್ಥರು...

**ಮೈಸೂರು**

✍ಟಿ.ಎನ್. ಕಷ್ಣಕುಮಾರ್



ನಂಜನಗೂಡು ತಾಲೂಕು ಹುಲ್ಲಹಳ್ಳಿ ಗ್ರಾಮ ರಾಜ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ತವರು ಜಿಲ್ಲೆಯ ಒಂದು ಭಾಗ. ಇತ್ತೀಚೆಗಂತೂ ಕ್ರಿಮಿನಲ್ ಪ್ರಕರಣಗಳು ಈ ವ್ಯಾಪ್ತಿಯಲ್ಲಿ ಸಾಕಷ್ಟು ನಡೆದು ಹೋದವು. ಸಧ್ಯ ಈಗ ಬೆಳಕಿಗೆ ಬಂದಿರೋದು ರಾಜ್ಯವೇ ಬೆಚ್ಚಿಬೀಳುವಂತದ್ದು. ವರದರಾಜಸ್ವಾಮಿ ಬಡಾವಣೆಯ ಜವರನಾಯ್ಕನ ಮಗ ಶಿವಣ್ಣ(54) ಪೊಲೀಸ್ ಇಲಾಖೆಯ ಗಮನವನ್ನ ತನ್ನೆಡೆಗೆ ಸೆಳೆದಿದ್ದಾನೆ. ತನ್ನ ಕಂಟ್ರೋಲ್‌ಗೆ ಬರದ ಹೆಣ್ಣುಮಕ್ಕಳಿಗೆ ವಿನೂತನವಾಗಿ ಟಾರ್ಚರ್ ಕೊಡುವ ಮೂಲಕ ಸೈಕೋಪಾತ್‌ಗಳ ರಾಜನಾಗಿದ್ದಾನೆ. ಈತನ ಕೃತ್ಯದ ಬಗ್ಗೆ ಹೇಳುವ ಮುನ್ನ ನಾಲ್ಕಾರು ವರ್ಷಗಳ ಕಾಲ ಇಲ್ಲಿನ ಮಹಿಳೆಯರು ಅನುಭವಿಸಿದ ಮಾನಸಿಕ ವೇದನೆ ತಿಳಿಸಲೇಬೇಕು.

ಬಡಾವಣೆ ಜನ ಬೆಳಿಗ್ಗೆ ಎದ್ದು ಬಾಗಿಲು ತೆರೆದರೆ ಯಾರ ಮನೆ ಮುಂದೆ ಅಶ್ಲೀಲ ಚಿತ್ರಗಳನ್ನ ಬಿಡಿಸಿದ ಚೀಟಿ ಕಂಡು ಬರುತ್ತೋ ಎಂಬ ಹೆದರಿಕೆ ಅಲ್ಲಿನ ಜನದ್ದು. ಹೌದು... ಸಾಕಷ್ಟು ಮನೆಗಳ ಮುಂದೆ ಮುಂಜಾನೆ ಇಂತಹ ಚಿತ್ರಗಳನ್ನ ಬಿಡಿಸಿದ ಚೀಟಿಗಳು ಕಂಡು ಬಂದಿದೆ. ಸೆಕ್ಸ್ ಭಂಗಿಗಳನ್ನ ಬಿಳಿಹಾಳೆ ಮೇಲೆ ಗೀಚುವುದು, ಅದರಲ್ಲಿ ಹೆಣ್ಣುಮಕ್ಕಳ ಹೆಸರು ಬರೆಯುವುದು, ಜೊತೆಗೆ ಪುರುಷನೊಬ್ಬನ ಹೆಸರನ್ನ ಜೋಡಿಸುವುದು, ಇಲ್ಲದ ಸಂಬಂಧ ಕಲ್ಪಿಸುವುದು, ಬಾಯಲ್ಲಿ ಉಚ್ಚಾರಣೆ ಮಾಡಲು ಸಾಧ್ಯವಾಗದಂತಹ ಅಶ್ಲೀಲ ಪದಗಳನ್ನ ಬರೆದು ಮನೆ ಮುಂದೆ ಇಡುವುದು. ಇಂತಹ ಸಾಕಷ್ಟು ಚೀಟಿಗಳು ಮನೆ ಮನಗಳನ್ನ ಮುರಿದು ಹಾಕಿದೆ. ಮದುವೆ ಸಂಬಂಧಗಳನ್ನ ಮುರಿದಿದೆ. ಕುಟುಂಬಗಳನ್ನ ನಾಶ ಮಾಡಿವೆ. ಯಾರು ಇಂತಹ ಕೃತ್ಯ ನಡೆಸುತ್ತಿದ್ದಾರೆ ಅನ್ನೋದು ಇಲ್ಲಿನ ಜನಗಳಿಗೆ ತಿಳಿದುಕೊಳ್ಳೋದು ಸವಾಲಿನ ವಿಚಾರವಾಗಿತ್ತು. ಆ ಬರವಣಿಗೆ ಯಾರಿಗೆ ಹೋಲಿಸುವುದು ಗೊತ್ತಿಲ್ಲ. ಇವುಗಳನ್ನ ಯಾರಿಗೆ ತೋರಿಸೋದು ಗೊತ್ತಿಲ್ಲ. ಅಂತಹ ಪರಿಸ್ಥಿತಿ ಗ್ರಾಮದ ಜನತೆಯದ್ದು. ಬೆಳಿಗ್ಗೆ ಎದ್ದರೆ ಯಾರ ಮನೆ ಮುಂದೆ ಇಂತಹ ಚೀಟಿ ಕಾಣಿಸುತ್ತೋ ಎಂಬ ಭೀತಿ ದಿನೇ ದಿನೇ ಹೆಚ್ಚುತ್ತಲೇ ಹೋಗಿದೆ.

ಕೆಲವು ದಿನಗಳ ಹಿಂದೆ ಅಂಗನವಾಡಿಯಲ್ಲಿ ಕೆಲಸ ಮಾಡುತ್ತಿದ್ದ ಮಹಿಳೆಗೆ ಇಂತದ್ದೇ ಚೀಟಿ ಬಂದಿದೆ. ನೋಡೋಕ್ಕೂ ಅಸಹ್ಯ... ಕೇಳುವುದಕ್ಕೂ ಅಸಹ್ಯವಾಗಿರುವ ಚಿತ್ರಗಳು... ಬರಹಗಳು. ಜೊತೆಗೆ ಗ್ರಾಮದ ಸುಮಾರು ಎಂಟು ಮಹಿಳೆಯರ ಹೆಸರು ಅದರಲ್ಲಿ ಉಲ್ಲೇಖವಾಗಿದೆ.ಹೋಲ್‌ಸೇಲ್ ಆಗಿ ಬರೆದ ಚೀಟಿ ಗ್ರಾಮಸ್ಥರ ತಲೆ ಕೆಡಿಸದ್ದಂತೂ ನಿಜ. ಈ ಬಾರಿ ನಿಗೂಢವಾಗಿ ಅಶ್ಲೀಲ ಚೀಟಿಗಳನ್ನು ಬರೆದು ಮನೆಗಳ ಮುಂದೆ ಇಟ್ಟು ಹೋಗುತ್ತಿದ್ದ ಸೈಕೋಪಾತ್‌ನ ಹಿಡೀಲೇಬೇಕು ಅಂತ ನಿರ್ಧರಿಸಿದ ಗ್ರಾಮಸ್ಥರು ಹೊಂಚು ಹಾಕಲು ಶುರು ಮಾಡಿದ್ರು. ತಿಂಗಳುಗಳು ಉರುಳಿದ್ರೂ ಕಿಲಾಡಿ ಸೈಕೋ ಸಿಗಲಿಲ್ಲ. ನೈಟ್ ಬೀಟ್ ಮಾಡಿದ್ರೆ ಯಾವುದೇ ಚೀಟಿಗಳು ಕಾಣಿಸುತ್ತಿರಲಿಲ್ಲ. ನೈಟ್ ಬೀಟ್ ನಿಲ್ಲಿಸಿದ್ರೆ ಆವತ್ತು ಗ್ಯಾರೆಂಟಿ ಒಂದು ಚೀಟಿ ಕಂಡು ಬರುತ್ತಿತ್ತು. ಪಟ್ಟು ಬಿಡದ ಗ್ರಾಮಸ್ಥರು ಸೈಕೋನ ರೆಡ್‌ಹ್ಯಾಂಡಾಗಿ ಹಿಡಿಯಲು ಸ್ಕೆಚ್ ಹಾಕಿದ್ರು.




ಡಿಸೆಂಬರ್ 9 ಸೈಕೋಗೆ ಗ್ರಹಚಾರ ಕಾದಿತ್ತು. ರಾತ್ರಿ ವೇಳೆ ಸುಮಾರು 10 ಗಂಟೆ ನಂತರ ಮಹಿಳೆಯೊಬ್ಬರ ಮನೆ ಮುಂದೆ ಸೈಕಲ್ ನಿಂತಿತು. ನಿಧಾನವಾಗಿ ಇಳಿದ ವ್ಯಕ್ತಿ ಚೀಟಿಯನ್ನ ಜೇಬಿನಿಂದ ತೆಗೆದು ಮನೆ ಮುಂದಿನ ಜಗುಲಿ ಮೇಲೆ ಇಟ್ಟು ಸೈಕಲ್ ಏರಿ ಜಾಗ ಖಾಲಿ ಮಾಡಲು ಹವಣಿಸುತ್ತಿದ್ದಾಗ ಗ್ರಾಮಸ್ಥರ ಎಕ್ಸ್‌ರೇ ಕಣ್ಣು ಬಿತ್ತು. ಸಡನ್ ಅಟ್ಯಾಕ್ ಮಾಡಿದ ಗ್ರಾಮಸ್ಥರು ಸೈಕಲ್ ಹತ್ತಿದ್ದ ವ್ಯಕ್ತಿಯನ್ನ ಹಿಡಿದಾಗ ಶಾಕ್ ಆಗಿದ್ರು. ತಮ್ಮ ಗ್ರಾಮದ ಮುಖಂಡನೇ ಆದ ಶಿವಣ್ಣ, ನ್ಯಾಯ ನೀತಿ ಎಂದು ಎಲ್ಲರ ಮುಂದೆ ಜಂಬ ಕೊಚ್ಚಿಕೊಳ್ಳುತ್ತಿದ್ದ ಜವರ ನಾಯ್ಕನ ಮಗ. 50 ವರ್ಷ ದಾಟಿದ್ರೂ ಚಂಡಾಲ ಬುದ್ಧಿ. ಮನೆಗಳನ್ನ ಹಾಳು ಮಾಡುವ ಕಿಡಿಗೇಡಿ ಚಾಳಿ. ಅದ್ಯಾಕೆ ಇವನಿಗೆ ಈ ದುರ್ಬುದ್ಧಿ ಬಂತೋ ಅನ್ನೋರೇ ಜಾಸ್ತಿ. ಶಿವಣ್ಣನ ಜೇಬು ಹುಡುಕಿದಾಗ ಒಂದೆರಡು ಚೀಟಿಗಳು ದೊರೆತಿವೆ. ಅಷ್ಟೇ ಸಾಕಿತ್ತು ಗ್ರಾಮಸ್ಥರಿಗೆ ಹಿಗ್ಗಾಮುಗ್ಗಾ ತದುಕಿದ್ರು. ಅದ್ಯಾವ ಮಟ್ಟಿಗೆ ಬಿಸಿ ಕಜ್ಜಾಯಗಳು ಬಿತ್ತು ಅಂದ್ರೆ ಸುಧಾರಿಸಿಕೊಳ್ಳೋಕ್ಕೆ ಮತ್ತೊಂದು ಜನ್ಮ ಬರಬೇಕು. ಇಡೀ ರಾತ್ರಿ ಸರಿಯಾಗಿ ವರ್ಕ್ ಮಾಡಿದ ಜನ ನೇರವಾಗಿ ಹುಲ್ಲಹಳ್ಳಿ ಪೊಲೀಸ್ ಠಾಣೆ ಎತ್ತಾಕ್ಕೊಂಡು ಹೋಗಿ ಖಾಕಿ ಕೈಗೆ ಒಪ್ಪಿಸಿದ್ರು.ಸುಮಾರು ನಾಲ್ಕು ವರ್ಷಗಳ ಕಾಲ ಬಡಾವಣೆಯ ಹೆಂಗಸರು, ಯುವತಿಯರ ನಿದ್ದೆ ಕೆಡಿಸಿದ್ದ ಸೈಕೋಪಾತ್ ಕೊನೆಗೂ ಸಿಕ್ಕಿಬಿದ್ದಿದ್ದ.




ಬೆಳಕು ಹರಿದಾಗ ಮರ್ಯಾದಸ್ಥ. ರಾತ್ರಿ ಆದ್ರೆ ಮನೆಹಾಳ ಕೆಲಸ. ಯಾವುದೇ ಮನೆಗಳಲ್ಲಿ ಸಮಸ್ಯೆ ಉದ್ಭವಿಸಿದರೆ ನ್ಯಾಯಕ್ಕಾಗಿ ಮುಂದೆ ನಿಲ್ಲುತ್ತಿದ್ದ ಶಿವಣ್ಣ ರಾತ್ರಿ ಆದ್ರೆ ಸೈಕೋಪಾತ್ ಆಗುತ್ತಿದ್ದ. ಮನೆ ಹಾಳು ಮಾಡುವುದೇ ಇವನ ಚಾಳಿಯಂತೆ. ಮಹಿಳೆಯರು ಸ್ನಾನ ಮಾಡುವಾಗ ಇಣುಕಿ ನೋಡುವುದು, ಗಂಡ ಹೆಂಡಿರ ಮಧ್ಯೆ ಬಿರುಕು ಮೂಡುವಂತೆ ಮಾಡುವುದು, ಮದುವೆ ಸಂಬಂಧಗಳನ್ನ ಮುರಿಯುವುದು ಅಂದ್ರೆ ಇವನಿಗೆ ಖುಷಿ ವಿಚಾರವಂತೆ. ಸಕ್ಕತ್ತಾಗೇ ಒದೆ ತಿಂದ ಸೈಕೋ ಶಿವಣ್ಣನ ಮೇಲೆ ಹುಲ್ಲಹಳ್ಳಿ ಠಾಣೆ ಪೊಲೀಸರು ಲೈಂಗಿಕ ದೌರ್ಜನ್ಯ ಪ್ರಕರಣ ದಾಖಲಿಸಿದ್ದಾರೆ. ಹಿಂದುಮುಂದು ನೋಡದೆ ಕಂಬಿ ಎಣಿಸಲು ಕಳಿಸಿದ್ದಾರೆ. ಒಂದಷ್ಟು ಅಶ್ಲೀಲ ಚಿತ್ರಗಳು ಹಾಗೂ ಬರಹಗಳಿರುವ ಚೀಟಿಗಳನ್ನ ಸೀಜ್ ಮಾಡಿರುವ ಪೊಲೀಸರು ಸೈಕೋಪಾತ್‌ನ ಹೆಡೆಮುರಿ ಕಟ್ಟಿದ್ದಾರೆ.ಇದೀಗ ವರದರಾಜ ಸ್ವಾಮಿ ಬಡಾವಣೆ ನಿವಾಸಿಗಳಿಗೆ ನಿಟ್ಟುಸಿರು ಬಿಟ್ಟಂತಾಗಿದೆ.

ಇನ್ಮುಂದೆ ಮನೆಗಳ ಮುಂದೆ ಇಂತಹ ಅಸಹ್ಯ ಚೀಟಿಗಳು ಕಾಣಿಸಿಕೊಳ್ಳುವುದಕ್ಕೆ ಬ್ರೇಕ್ ಬಿದ್ದಿದೆ. ವಿಲಕ್ಷಣ ಮನಸ್ಸುಳ್ಳ ಸೈಕೋಪಾತ್‌ಗೆ ಸೂಕ್ತ ಚಿಕಿತ್ಸೆ ನೀಡಬೇಕಿದೆ.ಈತನನ್ನ ಹೀಗೇ ಬಿಟ್ಟರೆ ಮುಂದೊಂದು ದಿನ ಪೊಲೀಸ್ ಇಲಾಖೆಗೆ ಹಾಗೂ ಸಮಾಜಕ್ಕೆ ತಲೆನೋವಾಗಿ ಪರಿಣಮಿಸಲಿದ್ದಾನೆ. ಜೈಲಿನಲ್ಲಿರುವಂತೆಯೇ ಇಂತಹ ವ್ಯಕ್ತಿಗಳಿಗೆ ತಕ್ಕನಾದ ಮೆಡಿಕಲ್ ಟ್ರೀಟ್‌ಮೆಂಟ್ ನೀಡಿ ರಿಲೀಸ್ ಮಾಡಬೇಕಿದೆ. ಈ ನಿಟ್ಟಿನಲ್ಲಿ ಪೊಲೀಸ್ ಇಲಾಖೆ ಗಂಭೀರವಾಗಿ ಚಿಂತಿಸಬೇಕಿದೆ... ☯



# ಅಯ್ಯೋ... ಎಡವಟ್ ಆಗೋಯ್ತು!

ಅವಳು ತುಂಬಾ ಗಾಬರಿಯಾಗಿದ್ದಾಳೆ. ಇವಳ ಲವ್ ವಿಚಾರ ತಿಳಿದ ಕೂಡಲೇ ಅಪ್ಪ ಭದ್ರಯ್ಯ ವೀರಭದ್ರನಾಗಿ ಅಬ್ಬರಿಸಿ ಮಗಳ ಕತ್ತನ್ನು ಹಿಸುಕಲು ಪ್ರಯತ್ನ ಮಾಡಿದ್ದನು.

ತಾಯಿ, ತಮ್ಮಂದಿರು ಇಲ್ಲದೆ ಹೋಗಿದ್ದರೆ ಮಗಳು ಹೆಣವಾಗಿರುತ್ತಿದ್ದಳು.

ಮಹಾಮುಂಗೋಪಿ ಭದ್ರಯ್ಯ ರಾಕ್ಷಸ.

ಸ್ವಜಾತಿ ಅಭಿಮಾನಿ!

ಮಗಳು ಬೇರೆ ಜಾತಿಯ ನಿರುದ್ಯೋಗಿ ಮತ್ತು ಬಡಕುಟುಂಬದ ಯುವಕನನ್ನು ಲವ್ ಮಾಡಿದ್ದರಿಂದ ಕೆರಳಿದ್ದರು. ತಾಯಿ, ತಮ್ಮಂದಿರು ಮತ್ತು ಉಳಿದ ಸಂಬಂಧಿಕರಿಗೆ ಇಷ್ಟ ಇರಲಿಲ್ಲ.

ಆದರೆ ಒಂದು ವರ್ಷದಿಂದ ಅವಳು ಮತ್ತು ಅವನು ಲವ್ ಮಾಡುತ್ತಿದ್ದರೂ ಸಹ ಯಾರಿಗೂ ಗೊತ್ತಾಗಿರಲಿಲ್ಲ.

ತಂದೆ ಕೋಪದಿಂದ ''ಏ... ಮಂದಾರ... ಹೋಗಿ, ಹೋಗಿ ಕೆಳಜಾತಿಯ ಶ್ರೀಮಂತ ಕುಟುಂಬದ ಶಂಕರನನ್ನು ಲವ್ ಮಾಡಿದ್ದರೆ, ನಿನ್ನ ಮದುವೆ ಅದ್ಧೂರಿಯಾಗಿ ನಡೆಯುತ್ತಿತ್ತು. ಎಲ್ಲಾ ಖರ್ಚುಗಳನ್ನು ಆ ಊರಿನ ಶ್ರೀಮಂತರಾದ ಈಶ್ವರಪ್ಪ ಹಾಕಿಕೊಳ್ಳುತ್ತಿದ್ದರು. ಆ ಬೇವಾರ್ಸಿನ ಮರೆತುಬಿಡು. ನಾನು ಆ ಶ್ರೀಮಂತ ಸಂಬಂಧ ಮಾಡ್ತೀನಿ. ಅವರೇ ಎಲ್ಲಾ ಖರ್ಚುಗಳನ್ನು ಹಾಕಿ ಮದುವೆ ಮಾಡಿಕೊಳ್ತಾರೆ. ನಮಗೆ ಎಷ್ಟು ಬೇಕಾದರೂ ವಧುದಕ್ಷಿಣೆ ಕೊಡ್ತಾರೆ'' ಎಂದನು.

ಶಂಕರ ಎಂಬ ಯುವಕ! ಆ ಹೆಸರು ಕೇಳಿದ ಕೂಡಲೇ ಅವಳ ಮುಖ ಸಿಂಡರಿಸಿದಳು. ಬಡಕಲು ಶರೀರದ, ಕೋತಿ ತರಾ ಇರೋ ಅವನ ಮುಖ ಕಂಡರೆ ಇವಳಿಗೆ ಮುಜುಗರ ಆಗುತ್ತಿತ್ತು. ಅಂತಹವನನ್ನು ಮದುವೆ ಆಗಲು ಸಾಧ್ಯವೆ?

ಇವಳ ಪ್ರಿಯತಮ ಯಾರು? ಆನಂದ ಗೊಲ್ಲರಕೇರಿ! ಗೊಲ್ಲರಕೇರಿಯನ್ನು ವಾಸವಾಗಿರುವ ಅವನು ಬೇರೆ ಜಾತಿಯವನು. ಆದರೆ ಹೀರೋ ರೀತಿ ಇದ್ದಾನೆ. ಸ್ವಭಾರತ ಒಳ್ಳೆಯ ಹುಡುಗ. ಪ್ರತಿಭಾವಂತ, ಬುದ್ಧಿವಂತನಾಗಿದ್ದರೂ ಅದೃಷ್ಟವಂತ ಆಗಿರಲಿಲ್ಲ. ಉದ್ಯೋಗ ಸಿಕ್ಕಿರಲಿಲ್ಲ. ಆರ್ಥಿಕ ಸಮಸ್ಯೆ ಕಾಡುತ್ತಿದೆ.

ಬಟ್... ಈ ಪ್ರೀತಿಗೆ ಇದೆಲ್ಲಾ ಏನೂ ಬೇಕಾಗಿಲ್ಲ ಅಲ್ವ? ಅವಳು ಅಂದರೆ ಭಾರತಿಯನ್ನು ಕಂಡ ಕೂಡಲೇ, ಫೋನ್‌ನಲ್ಲಿ ಅವಳ ಧ್ವನಿ ಕೇಳಿದ ಕೂಡಲೇ ಎಲ್ಲಾ ಮರೆತು ಬಿಡುತ್ತಿದ್ದರು. ಒಬ್ಬರಿಗಾಗಿ ಮತ್ತೊಬ್ಬರು. ಮೇಡ್ ಫಾರ್ ಈಚ್ ಅದರ್!

ತಂದೆ ಭದ್ರಯ್ಯ ತಮ್ಮ ಜಾತಿಯ ಶ್ರೀಮಂತ ಈಶ್ವರಪ್ಪನನ್ನು ಭೇಟಿ ಮಾಡಿ ಮದುವೆಯ ಪ್ರಸ್ತಾಪ ಮಾಡಿದ್ದರು.

ಆಕರ್ಷಕ ರೂಪವತಿ ಭಾರತಿ. ಅವಳ ನೋಡಿದರೆ ಒಪ್ಪದಿರಲು ಸಾಧ್ಯವೇ ಇಲ್ಲ. ಅಂತಹ ವಿಶೇಷ ಆಕರ್ಷಣೆ ಅವಳಲ್ಲಿದೆ.

ಈಶ್ವರಪ್ಪನಿಗೆ ಶ್ರೀಮಂತಿಕೆಯ ಅಹಂಕಾರ ಗತ್ತು ಇತ್ತು. ಕೂಡಲೇ ಒಪ್ಪಿದರೆ ತಮ್ಮ ಪ್ರತಿಷ್ಠೆ, ಗೌರವ ಕಡಿಮೆಯಾಗುತ್ತದೆ ಎಂದು ಅನಿಸಿದ್ದರಿಂದ ''ಆಗಲಿ... ಆಗಲಿ... ನಾನು ಮನೆಯವರ ಜೊತೆ ವಿಚಾರ ಮಾಡ್ತೀನಿ. ನೀವು... ನೀವು ಒಂದು ವಾರ ಬಿಟ್ಟು ಬನ್ನಿ'' ಎಂದರು.

ಭದ್ರಯ್ಯನಿಗೆ ನಿರಾಸೆ ಆಗಿತ್ತು. ಆದರೆ ಮಗಳಿಗೆ ಈ ಸಂಗತಿ ಹೇಳಲಿಲ್ಲ. ಶ್ರೀಮಂತ ಈಶ್ವರಪ್ಪ ನಿನ್ನನ್ನು ತಮ್ಮ ಮಗ ಶಂಕರನಿಗೆ ತಂದುಕೊಳ್ಳಲು ಒಪ್ಪಿದ್ದಾರೆ. ಇನ್ನು ಮುಂದೆ ನೀನು ಮನೆಯಿಂದ ಹೊರಗೆ ಹೋಗಬಾರದು. ಆ ತಿರುಬೋಕಿಗೆ ಫೋನ್ ಮಾಡಬಾರದು ಮತ್ತು ಮೀಟ್ ಮಾಡಬಾರದು.

ಮನೆಯಲ್ಲಿರುವ ಎಲ್ಲರೂ ಇವಳ ಪ್ರೀತಿಗೆ ತೀವ್ರ ರೀತಿಯಲ್ಲಿ ವಿರೋಧಿಗಳಾಗಿದ್ದಾರೆ.

ಅವಳು ಮನೆಯಿಂದ ಹೊರಗೆ ಹೋಗದ ರೀತಿ ಕಾಯುತ್ತಿದ್ದಾರೆ. ಅವಳ ಮೊಬೈಲ್ ಅನ್ನು ಕಿತ್ತುಕೊಂಡಿದ್ದಾರೆ. ಶ್ರೀಮಂತ ಈಶ್ವರಪ್ಪನನ್ನು ಮನವೊಲಿಸಲು ಪ್ರಭಾವಶಾಲಿ ಗಣ್ಯರ ಮೂಲಕ ಪ್ರಯತ್ನಿಸುತ್ತಿದ್ದಾರೆ.

ಇವಳಿಗೆ ದುಃಖವಾಗಿದೆ. ಪ್ರಿಯತಮನ ಹಂಬಲ ತೀವ್ರವಾಗಿದೆ. ಆದರೆ ಸಂಪರ್ಕ ಮಾಡಲು ಅವಕಾಶ ಆಗುತ್ತಿಲ್ಲ. ಎಲ್ಲರಿಗೂ ಪರಮಾಶ್ಚರ್ಯದ ಜೊತೆಗೆ ಸಂತೋಷ ಆಗಿದೆ. ಕಾರಣ ಏನು? ಅಲ್ಲಿಗೆ ಶಂಕರ ಬಂದಿದ್ದಾನೆ.

ಭದ್ರಯ್ಯ ಹಿಗ್ಗಿದರು. ಆನಂದ... ಪರಮಾನಂದವಾಗುತ್ತಿದೆ. ಸಡಗರದಿಂದ ಶಂಕರನನ್ನು ಸ್ವಾಗತಿಸಿ ಉಪಚರಿಸಿದರು. ತಿಂಡಿ-ಕಾಫಿ ಉಪಚಾರ ಆಯಿತು.

ಶಂಕರ ಹೇಳಿದ್ದೇನು?

''ಭಾರತಿಯ ಜೊತೆ ನಾನು ಏಕಾಂತದಲ್ಲಿ ಸ್ವಲ್ಪ ಹೊತ್ತು ಮಾತಾಡಬೇಕು.''

ತಂದೆ ''ಧಾರಾಳವಾಗಿ ಮಾತಾಡಪ್ಪ'' ಎಂದು ಹೇಳಿ ಮಗನ ಕಡೆ ತಿರುಗಿ ''ಇವನನ್ನು ಅವಳ ರೂಮಿಗೆ ಕರೆದುಕೊಂಡು ಹೋಗು'' ಎಂದಾಗ ತಾಯಿ ಅಡ್ಡ ಬಂದು ''ನಾನು ಮೊದಲು ಹೋಗಿ ಮಾತಾಡಿ ಬರ್ತೀನಿ'' ಎಂದರು.

ವಿಷಯ ತಿಳಿಯಿತು.

ಭಾರತಿ ಕೂಗಾಡಿದಳು.

''ಕೋತಿ ರೀತಿ ಶಂಕರನನ್ನು ಮದುವೆ ಆಗಲಾರೆ. ನಾನು ಆನಂದ ಗೊಲ್ಲರಕೇರಿಯನ್ನು ಪ್ರೀತಿಸುತ್ತಿದ್ದೀನಿ. ಬೇರೆ ಯಾರನ್ನು ಮದುವೆ ಆಗಲಾರೆ.''

ತಾಯಿ ಕೋಪದಿಂದ ''ಬಾಹ್ಯರೂಪ ಮುಖ್ಯ ಅಲ್ಲ. ನೀನು ಶಂಕರನನ್ನು ಮದುವೆಯಾಗಿ ಮಹಾರಾಣಿಯಂತೆ ಈ ಊರಲ್ಲಿ ಬದುಕಬೇಕು. ಇದೇ ನಮ್ಮೆಲ್ಲರ ಆಸೆ. ನೀನು ಹಠ ಮಾಡಿದರೆ ನಿನ್ನಪ್ಪ ನಿನ್ನ ಜೀವ ತೆಗೆದುಬಿಡುತ್ತಾರೆ.

ಅವಳು ಚಡಪಡಿಸಿದಳು.

''ರಂಪ-ರಾದ್ಧಾಂತಕ್ಕೆ ಅವಕಾಶ ಕೊಡಬೇಡ. ಅವನು ನಿನ್ನ ಜೊತೆ ಮಾತಾಡಲಿ. ಉಳಿದ ವಿಚಾರವನ್ನು ಆಮೇಲೆ ತೀರ್ಮಾನ ಮಾಡ್ತೀನಿ.''

ಅವಳು ಪ್ರತಿಕ್ರಿಯೆ ನೀಡಲಿಲ್ಲ. ತಾಯಿ ಅವಳನ್ನು ಬಲವಂತವಾಗಿ ಎಬ್ಬಿಸಿ ಮುಖ ತೊಳೆಯಲು ಹೇಳಿ ರೆಡಿಯಾಗಿರಲು ಹೇಳಿ ಆ ರೂಮಿನಿಂದ ಹೊರಗೆ ಬಂದರು.

ಅವಳಿಗೆ ಅಸಹ್ಯವಾಗುತ್ತಿದೆ. ಎದುರಿಗೆ ಶಂಕರ ನಿಂತಿದ್ದಾನೆ. ಶಂಕರ, ಆನಂದ ಗೊಲ್ಲರಕೇರಿ ಮತ್ತು ಇವಳು ಒಂದೇ ಕಾಲೇಜಿನಲ್ಲಿ ಓದಿದ್ದಾರೆ.

ಈಗ ಎದುರಿಗೆ ನಿಂತಿದ್ದಾರೆ. ಡೋರ್ ಲಾಕ್ ಮಾಡಿದರು. ಅವಳಿಗೆ ಗಾಬರಿಯಾಯಿತು.

ಅವನು ಜೇಬಿನಿಂದ ಸೀಲ್ ಮಾಡಿರುವ ಕವರ್ ಅನ್ನು ತೆಗೆದು ಅವರಿಗೆ ಕೊಡುತ್ತಾ ಮೆಲ್ಲಗೆ ''ಶಂಕರ ಈ ಲೆಟರ್ ಅನ್ನು ನಿನಗೆ ಕೊಟ್ಟಿದ್ದಾನೆ'' ಎಂದು ಹೇಳಿ ದೂರ ಸರಿದನು.

ಆನಂದನ ಪತ್ರ! ಅವಳು ಸಂತೋಷ, ಉತ್ಸಾಹದಿಂದ ಆ ಪತ್ರ ಓದುತ್ತಿದ್ದಾಳೆ.

ಹೃದಯೇಶ್ವರಿ ಆರತಿ...!

ನಮ್ಮಿಬ್ಬರ ಮದುವೆ ನಿಜವಾಗಿ ಆಗುತ್ತಾ? ಬಹುಶಃ ಆಗಲಾರದು. ನಿನ್ನ ತಂದೆ ದುಷ್ಟ ಮತ್ತು ವಿಪರೀತ ದುರಾಸೆ ಇದೆ. ಅವರು ಈ ಮದುವೆಗೆ ಖಂಡಿತಾ ಒಪ್ಪುವುದಿಲ್ಲ. ಅಸಲು ಸಂಗತಿ ಏನು? ಈ ಪತ್ರ ತಂದಿರೋದು ಶಂಕರ್! ನನ್ನ ಪರಮಾಪ್ತ ಗೆಳೆಯ. ನಿಮ್ಮಿಬ್ಬರ ಲವ್‌ಗೆ ಪ್ರೋತ್ಸಾಹ ನೀಡಿ ಬೇರೆ ಊರಲ್ಲಿ ನಿಮ್ಮಿಬ್ಬರಿಗೆ ಮದುವೆ ಮಾಡಿಸುತ್ತೇನೆ. ಗೆಳೆತನದ ಈ ಒಪ್ಪಂದ ಆಗಿದೆ. ನಾನು ಮದುವೆ ಮಾಡಿಸುತ್ತೇನೆ ಅಂತ ಗೆಳೆಯ ಶಂಕರ ಹೇಳಿದ್ದಾನೆ.

ಇವತ್ತು ರಾತ್ರಿ ಎಂಟು ಗಂಟೆಯ ನಂತರ ಮನೆಯಿಂದ ಹೊರಟು ಗಣಪತಿ ದೇವಸ್ಥಾನದ ಹತ್ತಿರ ಬಾ. ನಾನು ನಿನ್ನನ್ನು ಬೈಕಲ್ಲಿ ಅವನಿರೋ ಜಾಗಕ್ಕೆ ಕರ್ಕೊಂಡ್ ಹೋಗ್ತೀನಿ ಅಂತ ಪ್ರಾಮೀಸ್ ಮಾಡಿದ್ದಾನೆ.

ಮನೆ ಬಿಟ್ಟು ಧೈರ್ಯವಾಗಿ ಬಾ. ಶಂಕರ ಸಹಾಯ ಮಾಡ್ತಾನೆ. ನಮ್ಮಿಬ್ಬರ ಮದುವೆ ಆಗುತ್ತದೆ. ಅದಕ್ಕೆ ಅವನು ಅಂದರೆ, ಆ ನನ್ನ ಗೆಳೆಯ ಸೂಪರ್ ಪ್ಲಾನ್ ಮಾಡಿದ್ದಾನೆ. ಅವನ ಧೈರ್ಯ ಮತ್ತು ಸಹಕಾರದಿಂದಲೇ ನಾನು ಈ ತೀರ್ಮಾನಕ್ಕೆ ಬಂದಿದ್ದೀನಿ.

ಪತ್ರದ ಕೈ ಬರಹ ಪ್ರಿಯತಮನದ್ದು ಎಂಬುದು ಅವಳಿಗೆ ಖಚಿತವಾಗಿದೆ. ತನ್ನ ಎದುರಿಗೆ ಕುಳಿತಿರುವ ಶಂಕರನ ಕಡೆ ಅನುಮಾನ ಮತ್ತು ಗಾಬರಿಯಿಂದ ನೋಡಿದಳು.

ಶಂಕರ ಹತ್ತಿರ ಸರಿದು ಅವಳ ಕೈ ಅದುಮುತ್ತಾ 'ಜಾತಿ ಬೇರೆಯಾಗಿದ್ದರೂ ಆನಂದ ನನ್ನ ಆತ್ಮೀಯ ಗೆಳೆಯ. ನಿನ್ನ ತಂದೆಗೆ ತುಂಬಾ ಆಸೆ ಇದೆ. ಆದರೆ ನನ್ನ ಅಪ್ಪ ಒಪ್ಪಿಗೆ ನೀಡಿಲ್ಲ. ಇನ್ನು ನನ್ನ ಇಷ್ಟದ ಬಗ್ಗೆ ಕೇಳ್ತೀಯ?''

ಅವಳು ತಲೆಯಾಡಿಸಿದಳು.

''ನನಗೆ ನನ್ನ ಗೆಳೆಯ ಮುಖ್ಯ. ಅವನು ಪ್ರೀತಿ ಮಾಡಿರುವ ಹೆಣ್ಣನ್ನು ಮದುವೆ ಆಗಲಾರೆ.''

ಅವಳಿಗೆ ನಂಬಿಕೆ ಬರುತ್ತಿದೆ.

''ನೀನು ಇವತ್ತು ರಾತ್ರಿ ಏಳು ಗಂಟೆಯ ಹೊತ್ತಿಗೆ ಊರಾಚೆ ಇರುವ ಗಣಪತಿ ದೇವಸ್ಥಾನದ ಹತ್ತಿರ ಬಾ. ನಾನು ಅಲ್ಲಿಗೆ ಬರ್ತೀನಿ. ನಾವಿಬ್ಬರೂ ಸೇರಿ ಬೈಕಲ್ಲಿ ಸುಂತಾಪುರದ ಸರ್ಕಲ್‌ಗೆ ಹೋಗೋಣ. ಅಲ್ಲಿಗೆ ತುಂಬಾ ಬಸ್ಸುಗಳು ಬರುತ್ತದೆ. ನೀವಿಬ್ಬರು ಮಂಗಳೂರಿಗೆ ಹೋಗಿ, ಅಲ್ಲಿ ನಿಮಗೆ ನನ್ನ ಗೆಳೆಯನೊಬ್ಬ ಬಂದು ಕರೆದುಕೊಂಡು ಹೋಗಿ ವ್ಯವಸ್ಥೆ ಮಾಡುತ್ತಾನೆ. ನಾನು... ನಾನು ಅಲ್ಲಿಗೆ ನಾಳೆ ಬರ್ತೀನಿ. ಎಷ್ಟು ಬೇಕಾದರೂ ಹಣ ಖರ್ಚಾಗಲಿ, ನಿಮ್ಮಿಬ್ಬರಿಗೆ ಮದುವೆ ಮಾಡಿಸುತ್ತೇನೆ. ಅಲ್ಲೇ ಇಬ್ಬರಿಗೂ ಕೆಲಸ ಕೊಡಿಸಿ ಮನೆ ಮಾಡಿಕೊಡ್ತೀನಿ'' ಎಂದು ಹೇಳಿ ಜೇಬಿನಿಂದ ಹತ್ತು ಸಾವಿರ ರೂಪಾಯಿ ತೆಗೆದು ಅವಳಿಗೆ ಕೊಡುತ್ತಾ ''ಇದು ನಿನ್ನ ಹತ್ತಿರ ಇರಲಿ ಆನಂದನಿಗೆ ಇಪ್ಪತ್ತೈದು ಸಾವಿರ ರೂಪಾಯಿ ಕೊಟ್ಟಿದ್ದೀನಿ'' ಎಂದನು.

ಅವಳಿಗೆ ನಂಬಲಾಗುತ್ತಿಲ್ಲ. ಎಲ್ಲಾ ಅನಿರೀಕ್ಷಿತ... ಆಶ್ಚರ್ಯಕರ ಎಂದು ಅನಿಸುತ್ತದೆ. ಇದೇನಿದು ಹೀಗೆ... ಈ ರೀತಿ! ಅವನು ಅವಳ ಜೊತೆ ಈ ವಿಚಾರವಾಗಿ ಮಾತಾಡಿದ ನಂತರ ರೂಮಿನಿಂದ ಹೊರಗೆ ಬಂದನು. ಈಗ ಭದ್ರಯ್ಯ ಕೇಳಿದರು.

''ನನ್ನ ಮಗಳು ಏನು ಹೇಳಿದ್ಲು?''

''ನಾವಿಬ್ಬರು ಒಪ್ಪಿಕೊಂಡಿದ್ದೇನೆ.''

ಮನೆಯವರಿಗೆ ಖುಷಿಯಾಗಿದೆ.

ಶಂಕರ ''ಅವಳಿಗೆ ಗೃಹಬಂಧನ ಬೇಡ. ಅವಳನ್ನು ಫ್ರೀಯಾಗಿ ಬಿಡಿ'' ಎಂದನು.

''ಮದುವೆ ವಿಚಾರ ಮಾತಾಡಲು ನಿನ್ನ ತಂದೆ ಯಾವಾಗ ಬರ್ತಾರೆ?''

''ನಾಳೆ ಅದನ್ನ ಹೇಳ್ತಾರೆ.''

''ನಾನೊಂದು ಸಲ ಈಗ ನಿನ್ನ ಜೊತೆ ಬಂದು ಈಶ್ವರಪ್ಪನವರ ಜೊತೆ ಮಾತಾಡ್ಲಾ?''

ಅವನು ರೇಗಿದನು.

''ನೀವು ಇಷ್ಟೊಂದು ಆತುರಪಟ್ಟು ಬೆಲೆ ಕಳೆದುಕೊಳ್ತೀರ. ನಾನು ಮನೆಗೆ ಹೋಗಿ ರಾತ್ರಿ ತಂದೆ ಜೊತೆ ಮಾತಾಡ್ತೀನಿ. ಆಮೇಲೆ ಅವರೇ ಹೇಳಿ ಕಳಿಸುತ್ತಾರೆ. ಆಗ ನೀವು ಬನ್ನಿ.''

●●●

ಶಂಕರ-ಆನಂದ ಗೊಲ್ಲರಕೇರಿ ಮಾವಿನ ತೋಪಿನಲ್ಲಿದ್ದಾರೆ. ಲವ್ ಜರ್ನಿಗೆ ಪ್ಲಾನ್ ಮಾಡುತ್ತಿದ್ದಾರೆ.

ಎಲ್ಲಾ ಓಕೆ ಆಗಿದೆ.

●●●

ಮಗಳು ಬದಲಾಗಿದ್ದಾಳೆ.

ಆ ತಿರುಬೋಕಿ ಆನಂದನನ್ನು ಮರೆತು ಹತ್ತಾರು ಹಳ್ಳಿಗಳಲ್ಲಿ ಶ್ರೀಮಂತರಾಗಿರುವ ಗೌರವಸ್ಥ ಕುಟುಂಬದ ಸೊಸೆ ಆಗಲು ಒಪ್ಪಿದ್ದಾಳೆ. ಹಾಗಾಗಿ ಬಂಧನ ಸಡಿಲವಾಯಿತು. ಅವಳು ಎಲ್ಲರ ಜೊತೆ ಸಹಜವಾಗಿದ್ದಳು. ಸಂಜೆ ವೇಳೆ ತಿಂಡಿ ತಿಂದು ಕಾಫಿ ಕುಡಿದ ನಂತರ ಕತ್ತಲಾದ ಮೇಲೆ ಹೊರಟಳು.

ರಾತ್ರಿ ಏಳೂವರೆ ಆಗಿದೆ. ಭಾರತಿ ಕಾಣಿಸಲಿಲ್ಲ. ಅವರಿಗೆಲ್ಲಾ ಗಾಬರಿಯಗಿದೆ. ಈಗ ರೂಮಿಗೆ ಬಂದು ನೋಡಿದರು.

ಪತ್ರ ಬರೆದಿಟ್ಟಿದ್ದಾಳೆ.

ನನ್ನನ್ನು ಕ್ಷಮಿಸಿ. ನಾನು... ನಾನು ಆನಂದನ ಜೊತೆ ಊರು ಬಿಟ್ಟು ಹೋಗುತ್ತಿದ್ದೇನೆ. ನಾಳೆ ನಮ್ಮಿಬ್ಬರ ಮದುವೆ ನಡೆಯುತ್ತದೆ. ನನ್ನನ್ನು ಕ್ಷಮಿಸಿ ಮತ್ತು ಮರೆತುಬಿಡಿ.

ಇದು ಅನಿರೀಕ್ಷಿತ ಆಘಾತವಾಗಿದೆ!

●●●

ರಾತ್ರಿ ಏಳೂವರೆ! ಬೈಕಲ್ಲಿ ಶಂಕರನ ಜೊತೆ ಅವಳು ಕುಳಿತಿದ್ದಾಳೆ. ಕಡಿದಾದ ತಿರುವುಗಳ ರಸ್ತೆಯಲ್ಲಿ ಗುಂಡಿಗಳಿರೋದ್ರಿಂದ ಹಾಳಾಗಿದೆ. ಅವಳು ಅನಿವಾರ್ಯವಾಗಿ ಶಂಕರನನ್ನು ತಬ್ಬಿ ಹಿಡಿದುಕೊಂಡು ಕೂರಬೇಕಾಯಿತು. ಯಾಕೆ ಅಂದರೆ ಬೈಕು ಕುಲುಕಾಡುತ್ತಿದೆ.

ಸುಂಕಾಪುರಕ್ಕೆ ಬಂದರು. ಅಲ್ಲಿ ಬಸ್ಸುಗಳ ಸಂಚಾರವಿದೆ. ಆನಂದ ಬರಲಿಲ್ಲ!

ಅವಳು ಗಾಬರಿ, ಆತಂಕದಿಂದ ''ಎಲ್ಲಿ... ಎಲ್ಲಿ ಆನಂದ ಎಲ್ಲಿ? ಇನ್ನೂ ಯಾಕೆ ಬಂದಿಲ್ಲ? ಅವನಿಗೇನಾದರೂ ತೊಂದರೆ ಆಗಿರುವುದೇ ಎಂದು ಕೇಳಿದಳು.

'ಆ ರೀತಿ ಏನೂ ಆಗಿಲ್ಲ. ನೀನು ಗಾಬರಿ ಆಗ್ಬೇಡ. ಬಂದೇ ಬರುತ್ತಾನೆ.''

''ಫೋನ್ ಮಾಡಿ ಕೇಳು.''

ಅವನು ಫೋನ್ ಮಾಡುತ್ತಿದ್ದಾನೆ. ಫೋನ್ ಸ್ವಿಚ್ ಆಫ್ ಆಗಿದೆ! ಆಗ ದೂರದಲ್ಲಿ ಬೈಕ್ ಬರುತ್ತಿರೋದು ಲೈಟ್ ಬೆಳಕಿನಿಂದ ತಿಳಿಯಿತು.

ಭಾರತಿ ಮರದ ಹಿಂದೆ ಮರೆಯಾದಳು.

ಬೈಕಲ್ಲಿ ಬಂದ ವ್ಯಕ್ತಿ ''ಏ ಶಂಕರಪ್ಪ... ನೀನು ಇದೇನು ಇಲ್ಲಿ ನಿಂತಿದ್ದೀಯ?''

''ನಮ್ಮ ನೆಂಟರು ಬರುತ್ತಾನೆ. ಅವರಿಗಾಗಿ ಕಾದಿದ್ದೇನೆ.''

''ಏ ಸುಳ್ಳು ಹೇಳ್ಬೇಡ. ನಿನ್ನಂತ ಶ್ರೀಮಂತ ರಾತ್ರಿ ವೇಳೆ ಈ ಕಾಡುದಾರಿಯಲ್ಲಿ ನೆಂಟರಿಗಾಗಿ ಕಾಯೋದಿಲ್ಲ. ಬೇರೆ ಏನೋ ಇದೆ. ಅದೇನು ಅಂತ ಹೇಳು.''

''ಏ... ಏನೂ ಇಲ್ಲ ಮಾರಾಯ. ಅಂದ ಹಾಗೆ ಆ ಗೊಲ್ಲರಕೇರಿ ಆನಂದ ಏನಾದ್ರೂ ನಿಮಗೆ ಸಿಕ್ಕಿದ್ನ?''

''ಆನಂದನ... ಹಾಗಾದರೆ ನಿನಗೆ ವಿಷಯ ಗೊತ್ತಿಲ್ವ ಶಂಕರ?''

''ಗೊತ್ತಿಲ್ಲ... ಏನದು?''

''ಅವನಿಗೆ ಹಾವು ಕಡಿದಿದೆ. ಸತ್ತ ಸುದ್ದಿ ಈಗ ತಾನೇ ಊರಲ್ಲಿ ಹರಡುತ್ತಿದೆ.''

ಶಾಕ್... ಗ್ರೇಟ್ ಶಾಕ್! ಮರದ ಮನೆಯಲ್ಲಿ ನಿಂತಿದ್ದ ಭಾರತಿ ನಿಂತಲ್ಲೇ ತೂರಾಡುತ್ತಾ ಕುಸಿದಳು.

ಆ ವ್ಯಕ್ತಿಗೆ ಇದು ಕಾಣಲಿಲ್ಲ. ಅವನ ಜೊತೆ ಮಾತಾಡಿ ಕಳಿಸಿದ ಮೇಲೆ ಶಂಕರ ಬಂದು, ಅವಳ ಮುಖದ ಮೇಲೆ ನೀರನ್ನು ಚುಮುಕಿಸಿದಾಗ ಪ್ರಜ್ಞೆ ಬಂದಿತು. ಅವಳು ಎದೆ ಬಡಿದುಕೊಂಡು ಅಳುತ್ತಿದ್ದಾಳೆ. ಶಂಕರ ಸಂತೈಸುತ್ತಿದ್ದಾನೆ.

ಭಾರತಿ ''ನಾನು ಮನೆಗೆ ಹೋಗಲಾರೆ. ನಾನು ಪತ್ರ ಬರೆದಿಟ್ಟು ಬಂದಿದ್ದೀನಿ. ನನ್ನ ತಂದೆ ರಾಕ್ಷಸ, ನನ್ನನ್ನು ಕೊಂದುಬಿಡುತ್ತಾರೆ'' ಎಂದಳು.

''ಹಾಗಾದರೆ ಮುಂದೇನು ಮಾಡ್ತೀಯ?''

''ಹೇಗಿದ್ದರೂ ನೀನು ನನ್ನನ್ನು ಮದುವೆ ಆಗ್ತೀನಿ ಅಂತ ನನ್ನ ಮನೆಯವರ ಹತ್ತಿರ ಹೇಳಿದ್ದೀಯ. ನಾನು ಒಪ್ಪಿದ್ದೇನೆ. ನೀನೇ ನನ್ನನ್ನು ಮನೆಗೆ ಕರೆದುಕೊಂಡು ಹೋಗಿ ಮಾತಾಡು.''

ಅವನು ವ್ಯಂಗ್ಯವಾಗಿ ನಗಾಡಿದನು.

''ಒಂದು ವರ್ಷ ಆನಂದನ ಜೊತೆ ಪ್ರೀತಿ, ಪ್ರಣಯದಾಯ ಆಡಿ ಶೃಂಗಾರತೆಯಲ್ಲಿ ಶೀಲ ಕಳೆದುಕೊಂಡಿರುವ ನಿನ್ನನ್ನು ಮದುವೆ ಆಗಲಾರೆ. ನನ್ನನ್ನು ತಿರಸ್ಕಾರ ಮಾಡಿದ್ದ ನೀನು ಈಗ ಒಪ್ಪಿರೋದು ಯಾಕೆ? ಸಾರಿ... ನಾನು ಮದುವೆ ಆಗಲಾರೆ' ಎಂದು ಬೈಕ್ ಸ್ಟಾರ್ಟ್ ಮಾಡಿದನು.

ಅವಳು ನಿರ್ಜನವಾಗಿರುವ ಕಾಡಿನ ರಸ್ತೆಯಲ್ಲಿ ಒಂಟಿಯಾಗಿ ನಿಂತಿದ್ದಾಳೆ.

ಎಲ್ಲಾ ಎಡವಟ್ಟಾಗಿದೆ.

ಭವಿಷ್ಯ ಪ್ರಶ್ನೆಯಾಗಿ ಉಳಿದಿದೆ.

# ಗಂಗಮ್ಮ ಜಾತ್ರೆ ದೃಶ್ಯದ ಮೂಲಕ ಅಭಿಮಾನಿಗಳ ಮನಗೆದ್ದ ಅಲ್ಲು ಅರ್ಜುನ್!

ಅಲ್ಲು ಅರ್ಜುನ್ ಅಭಿಮಾನಿಗಳು ಬಹು ದಿನಗಳಿಂದ ತುದಿಗಾಲಿನಲ್ಲಿ ನಿಂತು ಕಾಯುತ್ತಿದ್ದ ದಿನ ಕೊನೆಗೆ ಬಂದೇ ಬಿಟ್ಟಿದೆ. ಸುಕುಮಾರ್ ನಿರ್ದೇಶನದ ಅಲ್ಲು ಅರ್ಜುನ್, ರಶ್ಮಿಕಾ ಮಂದಣ್ಣ, ಫಹದ್ ಫಾಸಿಲ್ ನಟನೆಯ ಬಹು ನಿರೀಕ್ಷಿತ ಚಿತ್ರ ಪುಷ್ಪ 2' ಚಿತ್ರ ತೆರೆಕಂಡಿದೆ. ಅಲ್ಲು ಅರ್ಜುನ್ ಅಭಿಮಾನಿಗಳು ಈ ಚಿತ್ರವನ್ನು ಎರಡೂ ಕೈ ಚಾಚಿ ಸ್ವಾಗತಿಸಿದ್ದಾರೆ.



ಅಲ್ಲು ಅರ್ಜುನ್ ಪುಷ್ಪರಾಜ್ ಪಾತ್ರದಲ್ಲಿ ಜೀವಿಸಿದ್ದು, ಅವರ ಅಭಿನಯಕ್ಕೆ ಅಪಾರ ಮೆಚ್ಚುಗೆ ವ್ಯಕ್ತವಾಗುತ್ತಿದೆ. ಅದರಲ್ಲಿಯೂ ಗಂಗಮ್ಮ ಜಾತ್ರೆಯ ದೃಶ್ಯದಲ್ಲಿನ ನಟನೆಯನ್ನು ಅಭಿಮಾನಿಗಳು ಹಾಡಿ ಹೊಗಳುತ್ತಿದ್ದಾರೆ. ಗಂಗಮ್ಮ ತಾಯಿ ಅವತಾರದಲ್ಲಿ ಅಲ್ಲು ಅರ್ಜುನ್ ಅಬ್ಬರಿಸಿದ್ದು, ಫ್ಯಾನ್ಸ್ ರೋಮಾಂಚನಗೊಂಡಿದ್ದಾರೆ.




'ಪುಷ್ಪ 2' ಚಿತ್ರದ ಪ್ರಮುಖ ಭಾಗವಾಗಿರುವ ಗಂಗಮ್ಮ ಜಾತ್ರೆಯ ಹಿನ್ನೆಲೆ ಏನು? ಯಾಕಾಗಿ ಆಚರಿಸಲಾಗುತ್ತದೆ? ಮುಂತಾದ ಪ್ರಶ್ನೆಗಳಿಗೆ ಇಲ್ಲಿದೆ ಉತ್ತರ.

ಸೌದಿ ಅರೇಬಿಯಾದಲ್ಲಿ ಈ ಗಂಗಮ್ಮ ಜಾತ್ರೆಗೆ ಕತ್ತರಿ ಹಾಕಲಾಗಿದೆ. 19 ನಿಮಿಷ ಅವಧಿಯ ಈ ದೃಶ್ಯ ಸದ್ಯ ವೀಕ್ಷಕರ ಫೇವರೇಟ್ ಎನಿಸಿಕೊಂಡಿದೆ. ಪ್ರವಾಸೋದ್ಯಮ ಸಚಿವಾಲಯದ ವೆಬ್‌ಸೈಟ್ ಪ್ರಕಾರ ತಿರುಪತಿ ಶ್ರೀ ವೆಂಕಟೇಶ್ವರ ದೇವರ ಕಿರಿಯ ಸಹೋದರಿ ಈ ಗಂಗಮ್ಮ. ಸಾಮಾನ್ಯವಾಗಿ ತಿರುಪತಿಯಲ್ಲಿ ಗಂಗಮ್ಮ ಜಾತ್ರೆಯನ್ನು ನಡೆಸಲಾಗುತ್ತದೆ. ವಾರ್ಷಿಕವಾಗಿ ಆಯೋಜಿಸಲಾಗುವ ಈ ಧಾರ್ಮಿಕ ಕಾರ್ಯಕ್ರಮ ಮೇಯಲ್ಲಿ ನೆರವೇರುತ್ತದೆ.

ಜಾತ್ರೆಯ ಸಮಯದಲ್ಲಿ ತಿರುಮಲ ತಿರುಪತಿ ದೇವಸ್ಥಾನದಿಂದ ಶ್ರೀ ವೆಂಕಟೇಶ್ವರ ಸ್ವಾಮಿಯಿಂದ ಸಹೋದರಿ ಗಂಗಮ್ಮನಿಗೆ ಉಡುಗೊರೆ ರೂಪದಲ್ಲಿ ಪರಿಸನ್ನು ಕಳುಹಿಸಲಾಗುತ್ತದೆ. ಈ ಪರಿಸು ಸೀರೆ, ಅರಸಿನ, ಕುಂಕುಮ, ಬಳೆಯನ್ನು ಒಳಗೊಂಡಿರುತ್ತದೆ. ದಂತಕಥೆಯ ಪ್ರಕಾರ 'ಪಾಳೇಗಾಡು' ಎಂದು ಕರೆಯಲ್ಪಡುವ ಸ್ಥಳೀಯ ಮುಖ್ಯಸ್ಥನ ಸುಂದರ ಮಹಿಳೆಯೊಬ್ಬಳಿಗೆ ನಿರಂತರ ಹಿಂಸೆ ನೀಡುತ್ತಿದ್ದ. ಅವನ ಕ್ರೌರ್ಯದಿಂದ ಬೇಸೆತ್ತ ಮಹಿಳೆ ಜಗನ್ಮಾತಾ ದೇವಿಯನ್ನು ಮನಸಾರೆ ಪ್ರಾರ್ಥಿಸುತ್ತಿದ್ದಳು. ನಂತರ ತಿರುಪತಿ ಬಳಿಯ ಅವಿಲಾಲಾ ಗ್ರಾಮದಲ್ಲಿ ಗಂಗಮ್ಮನಾಗಿ ಜನಿಸಿದಳು.

ಬೆಳೆಯುತ್ತಿದ್ದ ಗಂಗಮ್ಮನ ಮೇಲೆ ಪಾಳೇಗಾಡಿನ ವಕ್ರದೃಷ್ಟಿ ಬಿದ್ದಿತ್ತು. ಒಂದು ದಿನ ಆಕೆಯನ್ನು ಅವಮಾನಿಸಿ ಸಾರ್ವಜನಿಕವಾಗಿ ಕೈ ಹಿಡಿದು ಎಳೆದಾಡಿದ. ಅವನ ದುರ್ವರ್ತನೆಯಿಂದ ಕೋಪಗೊಂಡ ಗಂಗಮ್ಮ ತನ್ನ ವಿಶ್ವರೂಪವನ್ನು ತೋರಿಸಿದಳು. ಇದರಿಂದ ಭಯಗೊಂಡ ಆತ ಓಡಿ



ಹೋಗಿ ಅವಿತುಕೊಂಡಿದ್ದ.


ಗಂಗಮ್ಮ ಮೂರು ದಿನಗಳ ಕಾಲ ಹಲವು ವೇಷಭೂಷಣಗಳನ್ನು ಧರಿಸಿ ಪಾಳೇಗಾಡುವನ್ನು ಹುಡುಕಾಡಿದಳು. ನಾಲ್ಕನೇ ದಿನ ಪಾಳೇಗಾಡು ಸಾರ್ವಜನಿಕವಾಗಿ ಗಂಗಮ್ಮನ ಕೈಯಿಂದ ಹತನಾದ. ದುಷ್ಟನ ಕೈಯಿಂದ ತಮ್ಮನ್ನು ಕಾಪಾಡಿದ್ದಕ್ಕಾಗಿ ಊರವರು ಅಂದಿನಿಂದ ಕೃತಜ್ಞಾ ಪೂರ್ವಕವಾಗಿ ಗಂಗಮ್ಮನನ್ನು ಆರಾಧಿಸತೊಡಗಿದರು. ಆ ಸಂಪ್ರದಾಯ ಇಂದಿಗೂ ಮುಂದುವರಿದುಕೊಂಡು ಬಂದಿದೆ. ಆಚರಣೆಯ ಭಾಗವಾಗಿ ಭಕ್ತರು ದೇವಾಲಯಕ್ಕೆ ನಡೆದುಕೊಂಡು ಹೋಗುವಾಗ ಸಪ್ಪರ್ಲಾವ್ ಎಂದು ಕರೆಯಲ್ಪಡುವ ಗೋಪುರದಂತಹ ರಚನೆಗಳನ್ನು ಒಯ್ಯುತ್ತಾರೆ. ವರ್ಣರಂಜಿತವಾಗಿ ಅಲಂಕರಿಸಲ್ಪಟ್ಟ ಗೋಪುರವನ್ನು ಭುಜದ ಮೇಲೆ ಸಾಗಿಸಲಾಗುತ್ತದೆ.

ಜಾತ್ರೆಯ ಕೊನೆಯ ದಿನ ಪುರುಷರು ಮಹಿಳೆಯ ರೀತಿ ವೇಷ ಧರಿಸಿ ಪ್ರಾರ್ಥನೆ ಸಲ್ಲಿಸಲು ದೇವಸ್ಥಾನಕ್ಕೆ ತೆರಳುತ್ತಾರೆ. 'ಪುಷ್ಪ 2' ಚಿತ್ರದಲ್ಲಿ ಈ ಆಚರಣೆಯನ್ನು ತೋರಿಸಲಾಗಿದೆ. ನಾಯಕ ಅಲ್ಲು ಅರ್ಜುನ್ ಗಂಗಮ್ಮ ದೇವಿಯ ಅವತಾರದಲ್ಲಿ ಕಂಡು ಬಂದಿದ್ದಾರೆ. ನೀಲಿ ಸೀರೆ ಧರಿಸಿ, ಮುಖಕ್ಕೆ ಬಣ್ಣ ಬಳಿದು ಪಾತ್ರಕ್ಕೆ ಜೀವ ತುಂಬಿದ್ದಾರೆ.

ಜಾತ್ರೆಯಲ್ಲಿ ಪುರುಷರು ಸೀರೆ ಧರಿಸುವ ಆಚರಣೆಯನ್ನು ಪೆರಂಟಾಲು ವೇಷಂ ಎಂದು ಕರೆಯಲಾಗುತ್ತದೆ. ಇದನ್ನು ಸಾಂಪ್ರದಾಯಿಕವಾಗಿ ಕೈಕಲಾ ಕುಲದವರು ನಡೆಸಿಕೊಂಡು ಬರುತ್ತಿದ್ದರು. ಇತ್ತೀಚೆಗೆ ಇದರಲ್ಲಿ ಇತರ ಸಮುದಾಯದವರೂ ಭಾಗವಹಿಸುತ್ತಿದ್ದು, ಹಲವು ಪುರುಷರು ಸೀರೆ, ವಿಗ್ ಮತ್ತು ಇತರ ಮೇಕಪ್ ಧರಿಸಿ ಪಾಲ್ಗೊಳ್ಳುತ್ತಾರೆ. ☯



# ಬಿಳಿಚುಕ್ಕಿ ಹಳ್ಳಿಹಕ್ಕಿ ಅಖಾಡಕ್ಕೆ ಕಾಜಲ್ ಕುಂದರ್



ಈ ಹಿಂದೆ ಮಹಿರಾ ಎಂಬ ಸಸ್ಪೆನ್ಸ್, ಥ್ರಿಲ್ಲರ್ ಚಿತ್ರವನ್ನು ನಿರ್ದೇಶನ ಮಾಡಿದ್ದ ಮಹೇಶ್‌ಗೌಡ ಅವರೀಗ ತೆರೆಯ ಮೇಲೆ ನಾಯಕನಾಗುತ್ತಿದ್ದಾರೆ. ಜೊತೆಗೆ ನಿರ್ಮಾಪಕರೂ ಆಗುತ್ತಿದ್ದಾರೆ. ರಾಜ್ ಬಿ. ಶೆಟ್ಟಿ, ಚೈತ್ರಾ ಆಚಾರ್ ನಟನೆಯ, ತಾಯಿ ಮಗಳ ಹೋರಾಟದ ಕಥೆಯನ್ನು ಅಚ್ಚುಕಟ್ಟಾಗಿ ಕಟ್ಟಿಕೊಟ್ಟಿದ್ದ ನಿರ್ದೇಶಕ ಮಹೇಶ್‌ಗೌಡ ಈ ಬಾರಿ ಹೊಸ ಪ್ರಯತ್ನದ ಸಿನಿಮಾವೊಂದಕ್ಕೆ ಕೈಹಾಕಿದ್ದಾರೆ. ಆ ಚಿತ್ರದ ಹೆಸರು ಬಿಳಿ ಚುಕ್ಕಿ ಹಳ್ಳಿ ಹಕ್ಕಿ. ಮಹೇಶ್ ಗೌಡ ಅವರ ನಿರ್ದೇಶನದಲ್ಲಿ ಮೂಡಿ ಬರ್ತಿರುವ ಎರಡನೇ ಚಿತ್ರ ಇದಾಗಿದ್ದು, ಈ ಚಿತ್ರಕ್ಕೆ ತಾವೇ ಕಥೆ ಬರೆದು ಆಕ್ಷನ್‌ಕಟ್ ಹೇಳುವುದರ ಜೊತೆಗೆ ತಮ್ಮದೇ ಆದ ಹೊನ್ನುಡಿ ಪ್ರೊಡಕ್ಷನ್ ಬ್ಯಾನರ್ ಅಡಿಯಲ್ಲಿ ಈ ಚಿತ್ರಕ್ಕೆ ಬಂಡವಾಳವನ್ನೂ ಹಾಕುತ್ತಿದ್ದಾರೆ. ಜೊತೆಗೆ ಚಿತ್ರದ ನಾಯಕ ದಿನೇಶ್ ಪಾತ್ರವನ್ನೂ ಸಹ ನಿರ್ವಹಿಸುತ್ತಿದ್ದಾರೆ.

ಈ ಹಿಂದೆ ಪೋಸ್ಟರ್ ಒಂದರ ಮೂಲಕ ದೊಡ್ಡಮಟ್ಟದಲ್ಲಿಯೇ ಸದ್ದು ಮಾಡಿದ್ದ ಚಿತ್ರ 'ಬಿಳಿಚುಕ್ಕಿ ಹಳ್ಳಿಹಕ್ಕಿ'. ನಿರ್ದೇಶಕ ಮಹೇಶ್‌ಗೌಡ ಅವರು ನಾಯಕನಾಗಿ ನಟಿಸಿರುವ ಈ ಚಿತ್ರಕ್ಕೆ ಅವರೇ ಆಕ್ಷನ್ ಕಟ್ ಹೇಳಿದ್ದಾರೆ. ಜೊತೆಗ ಚಿತ್ರದ ನಿರ್ಮಾಣದ ಜವಾಬ್ದಾರಿಯನ್ನು ಕೂಡ ಹೊತ್ತು ನಿಭಾಯಿಸಿದ್ದಾರೆ. ಸಿನಿಮಾ ವಿಟಿಲೊಗೋ(ತೊನ್ನುರೋಗ) ಬಗ್ಗೆ ಮಾಡಿರುವ ಕಥಾ ಹಂದರವನ್ನು ಒಳಗೊಂಡಿದೆ. ವಿಟಿಲೊಗೋ ಸುತ್ತಾ ಜರುಗುವ, ಪಕ್ಕಾ ಕಮರ್ಶಿಯಲ್ ಧಾಟಿಯ ಈ ಸಿನಿಮಾ ಭಾರತೀಯ ಚಿತ್ರರಂಗದಲ್ಲೇ ಮೊದಲೆಂಬ ಹೆಗ್ಗಳಿಕೆಯನ್ನೂ ಹೊಂದಿದೆ. ಇದೀಗ ಈ ಚಿತ್ರದ ನಾಯಕಿಯಾಗಿರುವ ಮಂಗಳೂರು ಹುಡುಗಿ ಕಾಜಲ್ ಕುಂದರ್ ಅವರ ಪೋಸ್ಟರನ್ನು ಚಿತ್ರತಂಡ ಬಿಡುಗಡೆಗೊಳಿಸಿದೆ. ಇದರೊಂದಿಗೆ ನಾಯಕಿಯ ಪಾತ್ರದ ಚಹರೆ ಜಾಹೀರಾದಂತಾಗಿದೆ.

ನಟಿ ಕಾಜಲ್ ಕುಂದರ್ ಅವರು ಈ ಚಿತ್ರದ ನಾಯಕಿ ಕವಿತಾ ಎಂಬ ಪಾತ್ರಕ್ಕೆ ಜೀವ ತುಂಬಿದ್ದಾರೆ. ಮೂಲತಃ ಮಂಗಳೂರಿನವರಾದ ಕಾಜಲ್ ಕುಂದರ್ ಮುಂಬೈನಲ್ಲಿಯೇ ನೆಲೆಯೂರಿದ್ದರೂ ಕನ್ನಡ ಭಾಷೆಯಲ್ಲಿ ಹಿಡಿತವನ್ನು ಹೊಂದಿದ್ದಾರೆ. ಈಗಾಗಲೇ ಹಲವಾರು ಸಿನಿಮಾಗಳಲ್ಲಿ ನಟಿಸಿರುವ ಕಾಜಲ್ ಕುಂದರ್ ಪಾಲಿಗಿದು ಮೈಲಿಗಲ್ಲಿನಂಥಾ ಸಿನಿಮಾ ಎಂಬುದರಲ್ಲಿ ಸಂದೇಹವೇನಿಲ್ಲ, ರಂಗಭೂಮಿ ಕಲಾವಿದೆಯಾಗಿ ಪಳಗಿಕೊಂಡಿರುವ ಕಾಜಲ್ ಆಡಿಷನ್ ಮೂಲಕವೇ ಕವಿತಾ ಪಾತ್ರಕ್ಕೆ ಆಯ್ಕೆಯಾಗಿದ್ದಾರೆ. ಈ ಪಾತ್ರಕ್ಕೆ ಹೇಳಿ ಮಾಡಿಸಿದಂತಿರೋ ಈಕೆ, ಬಹುಮುಖ ಪ್ರತಿಭೆಯೂ ಹೌದು. ಕವಿತಾ ಎಂಬುದು ಒಂದಿಡೀ ಕಥೆಯಲ್ಲಿ ಮಹತ್ವದ್ದಾದ, ಸೂಕ್ಷ್ಮ ಪಾತ್ರ. ಅದಕ್ಕೆ ಕಾಜಲ್ ಕುಂದರ್ ಲೀಲಾಜಾಲವಾಗಿ ಜೀವ ತುಂಬಿದ್ದಾರಂತೆ. ಇಂಥಾ ನಟಿ ಕನ್ನಡ ಚಿತ್ರರಂಗದಲ್ಲಿ ಸಕ್ರಿಯರಾಗಬೇಕು, ಇನ್ನೂ ಒಂದಷ್ಟು ಸವಾಲಿನ ಪಾತ್ರಗಳಿಗೆ ಜೀವ ತುಂಬಬೇಕೆಂಬ ಆಶಯ ನಿರ್ದೇಶಕರದ್ದು.

ಹೊನ್ನುಡಿ ಪ್ರೊಡಕ್ಷನ್ಸ್ ಬ್ಯಾನರಿನಡಿಯಲ್ಲಿ ನಿರ್ಮಾಣಗೊಂಡಿರುವ ಈ ಸಿನಿಮಾ ಇದೀಗ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ಒಂದೊಳ್ಳೆ ಕಂಟೆಂಟ್ ಹೊಂದಿರೋ ಬಿಳಿಚುಕ್ಕಿ ಹಳ್ಳಿಹಕ್ಕಿ ಚಿತ್ರದ ರಿಲೀಸ್ ಡೇಟನ್ನು ಅತೀ ಶೀಘ್ರವಾಗಿ ಘೋಷಿಸಲು ಚಿತ್ರತಂಡ ಅಣಿಗೊಳ್ಳುತ್ತಿದೆ. ತೊನ್ನುರೋಗದ ಸಮಸ್ಯೆ ದೇಶದ ಲಕ್ಷಾಂತರ ಜನರನ್ನು ಕಾಡುತ್ತಿದೆ. ಇದಕ್ಕೆ ತುತ್ತಾದವರ ಮಾನಸಿಕ ತುಮುಲ, ತೊಳಲಾಟಗಳನ್ನು ಬೇರೆಯವರು ಸಲೀಸಾಗಿ ಅಂದಾಜಿಸೋದು ಕಷ್ಟ. ಅದರ ಸುತ್ತ ಜರುಗುವ ಬೆರಗಿನ, ಸೂಕ್ಷ್ಮ ಕಥನದೊಂದಿಗೆ ಮಹೇಶ್‌ಗೌಡ ಅವರು ಈ ಚಿತ್ರವನ್ನು ನಿರೂಪಿಸಿದ್ದಾರಂತೆ. ಇಂಥಾ ಕಥೆಯನ್ನು ಪಕ್ಕಾ ಮನೋರಂಜನೆಯ, ಕಮರ್ಶಿಯಲ್ ಧಾಟಿಯಲ್ಲಿ ದೃಶ್ಯೀಕರಿಸಲಾಗಿದೆಯಂತೆ. ಒಟ್ಟಾರೆ ಸಿನಿಮಾದ ಇನ್ನೊಂದಷ್ಟು ಅಚ್ಚರಿಗಳು ಹಂತ ಹಂತವಾಗಿ ಪ್ರೇಕ್ಷಕರನ್ನು ತಲುಪಿಕೊಳ್ಳಲಿವೆ. ಅದರ ಜೊತೆ ಜೊತೆಗೇ ಚಿತ್ರದ ಬಿಡುಗಡೆಯ ದಿನಾಂಕವೂ ಸಹ ಸದ್ಯದಲ್ಲಿಯೇ ನಿಕ್ಕಿಯಾಗಲಿದೆ. ☯

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 POSTED AT BANGALORE PSO BG 560026 Every Tuesday Publishing Date : 8.12.2024



# ನಟಿ ದೀಪಿಕಾ ದಾಸ್ ಮತ್ತು ಆಕೆಯ ತಾಯಿಗೆ ಬೆದರಿಕೆ!

ಯಶವಂತ ಎಂಬ ವ್ಯಕ್ತಿ ನಡುರಾತ್ರಿಯಲ್ಲಿ ಕರೆ ಮಾಡಿ ಅವಾಚ್ಯ ಶಬ್ದಗಳಿಂದ ನಿಂದಿಸಿ ಬೆದರಿಕೆ ಹಾಕುತ್ತಿದ್ದಾನೆ ಎಂದು ಕಿರುತೆರೆ ನಟಿ ದೀಪಿಕಾ ದಾಸ್ ಅವರ ತಾಯಿ ಪದ್ಮಲತಾ ತುಮಕೂರು ರಸ್ತೆಯ ಮಾದನಾಯಕನಹಳ್ಳಿ ಪೊಲೀಸರಿಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಆರೋಪಿಗಾಗಿ ಬಲೆ ಬೀಸಿದ್ದಾರೆ. ಪ್ರತ್ಯೇಕ ಪ್ರಕರಣದಲ್ಲಿ ಸ್ಪಾ ಉದ್ಯೋಗಿ, ದೆಹಲಿ ಮೂಲದ ಯುವತಿಯೊಬ್ಬರು ತಮ್ಮ ಮನೆಯಲ್ಲೇ ಶವವಾಗಿ ಪತ್ತೆಯಾಗಿದ್ದಾರೆ. ಹೆಸರಘಟ್ಟ ರಸ್ತೆಯ ಬಾಗಲಗುಂಟೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

ಚಲನಚಿತ್ರ ಮತ್ತು ಕಿರುತೆರೆ ನಟಿಯಾಗಿರುವ ನನ್ನ ಮಗಳು ದೀಪಿಕಾ ದಾಸ್, ಎಂಟು ತಿಂಗಳ ಹಿಂದೆ ದೀಪಕ್ ಕುಮಾರ್ ಎಂಬುವರ ಜತೆ ವಿವಾಹವಾಗಿದೆ. ಮಗಳು ಮತ್ತು ಅಳಿಯ ತಿಂಗಳ ಹಿಂದೆ ಇಂಗ್ಲೆಂಡ್ ಪ್ರವಾಸಕ್ಕೆ ತೆರಳಿದ್ದಾರೆ. ಈಗ ಅಪರಿಚಿತ ವ್ಯಕ್ತಿಯೊಬ್ಬ ನನಗೆ ಫೋನ್ ಮಾಡಿ ನಿಮ್ಮ ಮಗಳಿಗೆ ಮದುವೆ ಮಾಡಿದ್ದು ಏಕೆ? ಅಳಿಯ ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾಗಿ ಜನರಿಗೆ ಮೋಸ ಮಾಡಿದ್ದಾರೆ ಎಂದು ಬೆದರಿಕೆ ಹಾಕಿದ್ದ ಒಂದು ವೇಳೆ ನನ್ನ ಅಳಿಯ ಕ್ರಮ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದರೆ ದೂರು ನೀಡಬಹುದು ಎಂದು ನಾನು ಹೇಳಿದ್ದೆ ಎಂದು ಪದ್ಮಾಲತಾ ದೂರಿನಲ್ಲಿ ತಿಳಿಸಿದ್ದಾರೆ.

ಕೆಲವು ದಿನಗಳ ನಂತರ ದೀಪಿಕಾಗೆ ಕರೆ ಮಾಡಿದ್ದ ಇದೇ ವ್ಯಕ್ತಿ ನಿಮ್ಮ ಪತಿ ಮೋಸ ಮಾಡಿರುವುದು ನಿಮ್ಮ ಗಮನಕ್ಕೆ ಬಂದಿಲ್ಲವೆ ಎಂದು ಪ್ರಶ್ನಿಸಿ ಪುನೀತ್ ರಾಜ್ ಕುಮಾರ್ ಸಮಾಧಿ ಬಳಿ ಬಂದು ಆಣೆ ಮಾಡಬೇಕು ಎಂದು ಆಗ್ರಹಪಡಿಸಿದ್ದ. ಕಾನೂನು ರೀತಿ ದೂರು ನೀಡುವಂತೆಯೂ ನನ್ನ ಮಗಳು ಹೇಳಿದ್ದಳು. ಹಣ ನೀಡದೆ ಇದ್ದರೆ ನಿಮ್ಮ ಹೆಸರು ಬರೆದು ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಬೆದರಿಸಿದ್ದ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ. ☯



# ರಾಜೇಂದ್ರ ಸಿಂಗ್ ಬಾಬು ನಿರ್ದೇಶನದ 'ರಕ್ತ ಕಾಶ್ಮೀರ' ಚಿತ್ರ ರಿಲೀಸ್!

ಹೆಸರಾಂತ ಚಲನಚಿತ್ರ ನಿರ್ಮಾಪಕ ಎಸ್.ವಿ. ರಾಜೇಂದ್ರ ಸಿಂಗ್ ಬಾಬು ತಮ್ಮ ಬಹುನಿರೀಕ್ಷಿತ ಚಿತ್ರ 'ರಕ್ತ ಕಾಶ್ಮೀರ' ಸಿನಿಮಾ ಘೋಷಣೆ ಮಾಡಿ ಅಭಿಮಾನಿಗಳನ್ನು ಅಚ್ಚರಿಗೊಳಿಸಿದ್ದಾರೆ. ಉಪೇಂದ್ರ ಮತ್ತು ರಮ್ಯಾ ನಟಿಸಿರುವ ಈ ಚಿತ್ರವು ಪ್ರಸ್ತುತ ಸೆನ್ಸಾರ್ ಪ್ರಕ್ರಿಯೆಯಲ್ಲಿದೆ ಮತ್ತು ಈ ತಿಂಗಳ ಕೊನೆಯಲ್ಲಿ ತೆರೆಗೆ ಬರುವ ನಿರೀಕ್ಷೆಯಿದೆ.

ಹಿರಿಯ ಚಲನಚಿತ್ರ ನಿರ್ಮಾಪಕರು ಬರೆದು ನಿರ್ದೇಶಿಸಿದ, ರಕ್ತ ಕಾಶ್ಮೀರಾ ಭಯೋತ್ಪಾದನೆ ಮತ್ತು ಪಾಕ್ ಆಕ್ರಮಿತ ಕಾಶ್ಮೀರದ ಪುನಶ್ಚೇತನದ ಕಥೆಯಾಗಿದೆ. ಪಾಕ್ ಆಕ್ರಮಿತ ಕಾಶ್ಮೀರವನ್ನು ವಾಪಸ್ ಪಡೆಯುವ ಪ್ರಧಾನಿ ನರೇಂದ್ರ ಮೋದಿ ಅವರ ಹೇಳಿಕೆಯನ್ನು ಈ ಚಿತ್ರದಲ್ಲಿ ಬಳಸಿಕೊಳ್ಳಲಾಗಿದ್ದು, ಸಿನಿಮಾದ ಪ್ರಮುಖ ಟ್ವಿಸ್ಟ್ ಇದೇ ಆಗಿರಲಿದೆ. ದೇಶದ ಗಡಿಗಳಲ್ಲಿ ಮಾತ್ರವಲ್ಲ, ಬೆಂಗಳೂರಿನಲ್ಲೂ ಉಗ್ರಗಾಮಿಗಳ ಹಾವಳಿ ಇದೆ. ಅವರನ್ನು ಹೇಗೆ ನಿರ್ಮೂಲನೆ ಮಾಡಬೇಕು ಎಂಬ ಕಥಾವಸ್ತುವನ್ನೂ ಈ 'ರಕ್ತ ಕಾಶ್ಮೀರ' ಸಿನಿಮಾ ಹೊಂದಿದೆಯಂತೆ. ಚಿತ್ರಕ್ಕೆ ಗುರುಕಿರಣ್ ಸಂಗೀತ ನೀಡಿದ್ದು, ಎಂ.ಎಸ್. ರಮೇಶ್ ಸಂಭಾಷಣೆ ಬರೆದಿದ್ದಾರೆ. ಎಂಡಿಎಂ ಪ್ರೊಡಕ್ಷನ್ಸ್ ಬ್ಯಾನರ್ ಅಡಿಯಲ್ಲಿ ಚಿತ್ರ ನಿರ್ಮಾಣವಾಗಿದೆ. ತಾರಾಗಣದಲ್ಲಿ ದೊಡ್ಡಣ್ಣ, ಓಂಪ್ರಕಾಶ್ ರಾವ್, ಅನಿಲ, ಮತ್ತು ಕುರಿ ಪ್ರತಾಪ್ ಮುಂತಾದ ಕಲಾವಿದರು ನಟಿಸಿದ್ದಾರೆ.

ಕೆಲ ವರ್ಷಗಳ ಹಿಂದೆ ಎಸ್.ವಿ. ರಾಜೇಂದ್ರ ಸಿಂಗ್ ಬಾಬು, ಉಪೇಂದ್ರ, ರಮ್ಯಾ ಅವರ ಕಾಂಬಿನೇಷನ್ನಲ್ಲಿ 'ಭೀಮೂಸ್ ಬ್ಯಾಂಗ್ ಬ್ಯಾಂಗ್ ಕಿಡ್ಸ್' ಎಂಬ ಸಿನಿಮಾವೊಂದು ತಯಾರಾಗಿತ್ತು. ಅದರ ಹಾಡುಗಳು ಬಿಡುಗಡೆ ಕೂಡ ಆಗಿತ್ತು. ಆದರೆ ಸಿನಿಮಾ ಮಾತ್ರ ಹೊರಗೆ ಬರಲೇ ಇಲ್ಲ. ಕೊನೆಗೆ ಆ ಸಿನಿಮಾದ ಮೇಲಿನ ನಿರೀಕ್ಷೆಯನ್ನೇ ಸಿನಿಪ್ರಿಯರು ಕೈಬಿಟ್ಟಿದ್ದರು. ಸದ್ಯ ಈಗ ಬರುತ್ತಿರುವುದು ಅದೇ ಸಿನಿಮಾವೇ? ಹೌದು ಎನ್ನುತ್ತವೆ ಮೂಲಗಳು. 'ಭೀಮೂಸ್ ಬ್ಯಾಂಗ್ ಬ್ಯಾಂಗ್ ಕಿಡ್ಸ್' ಟೈಟಲ್ ಬದಲು 'ರಕ್ತ ಕಾಶ್ಮೀರ' ಎಂದು ಟೈಟಲ್ ಇಡಲಾಗಿದೆ ಎನ್ನಲಾಗುತ್ತಿದೆ. ಆದರೆ ಈ ಸಂಬಂಧ ರಾಜೇಂದ್ರ ಸಿಂಗ್ ಬಾಬು ಸ್ಪಷ್ಟನೆ ನೀಡಿದ್ದು, ರಕ್ತ ಕಾಶ್ಮೀರವು ನಾನು ಕಳೆದ ಎರಡು ವರ್ಷಗಳಿಂದ ಕೆಲಸ ಮಾಡುತ್ತಿರುವ ಹೊಸ ಯೋಜನೆಯಾಗಿದೆ. ಇದು ಭೀಮೂಸ್ ಬ್ಯಾಂಗ್ ಬ್ಯಾಂಗ್ ಕಿಡ್ಸ್‌ಗೆ ಯಾವುದೇ ಸಂಬಂಧವನ್ನು ಹೊಂದಿಲ್ಲ ಮತ್ತು ಸಂಪೂರ್ಣವಾಗಿ ವಿಭಿನ್ನವಾದ ಥೀಮ್ ಹೊಂದಿದೆ. ಎಲ್ಲವೂ ಸರಿಯಾಗಿ ನಡೆದರೆ ಡಿಸೆಂಬರ್ 20ಕ್ಕೆ ಚಿತ್ರವನ್ನು ಬಿಡುಗಡೆ ಮಾಡಲಿದ್ದೇವೆ ಎಂದು ಅವರು ತಿಳಿಸಿದ್ದಾರೆ. ಕುತೂಹಲಕಾರಿಯಾಗಿ, ಡಿಸೆಂಬರ್ 20 ರಂದು ಉಪೇಂದ್ರ ಅವರ ಬಹು ನಿರೀಕ್ಷಿತ UI ಬಿಡುಗಡೆಯಾಗುತ್ತಿದೆ. ☯

# ಕೊಲೆ ಕೇಸ್‌ನಲ್ಲಿ ನಟಿ ನರ್ಗೀಸ್ ಫಕ್ರಿ ಸಹೋದರಿ ಅಲಿಯಾ ಫಕ್ರಿ ಬಂಧನ!

ಮಾಜಿ ಪ್ರಿಯತಮ ಹಾಗೂ ಆತನ ಸ್ನೇಹಿತರೊಬ್ಬರನ್ನು ಕೊಲೆ ಮಾಡಿದ ಆರೋಪದ ಮೇಲೆ ಬಾಲಿವುಡ್ ನಟಿ ನರ್ಗೀಸ್ ಫಕ್ರಿ ಅವರ ಸಹೋದರಿ ಅಲಿಯಾ ಫಕ್ರಿ ಅವರನ್ನು ಅಮೆರಿಕದಲ್ಲಿ ಬಂಧಿಸಲಾಗಿದೆ. ಮಾಜಿ ಪ್ರಿಯಕರ 35 ವರ್ಷದ ಎಡ್ವರ್ಡ್ ಜೇಕಬ್ಸ್ ಮತ್ತು 33 ವರ್ಷದ ಅನಸ್ತಾಸಿಯಾ ಎಟಿಯೆನ್ನೆ ಎಂಬಾಕೆಯನ್ನು ಹತ್ಯೆಗೈದ ಆರೋಪದಲ್ಲಿ ಬಂಧಿಸಲಾಗಿದೆ. ಎಡ್ವರ್ಡ್ ಜೇಕಬ್ಸ್ ಮತ್ತು ಆತನ ಸ್ನೇಹಿತೆ ಅನಸ್ತಾಸಿಯಾ ನೆಲೆಸಿದ್ದ ಎರಡು ಅಂತಸ್ತಿನ ಗ್ಯಾರೇಜ್‌ಗೆ 43 ವರ್ಷದ ಅಲಿಯಾ ಫಕ್ರಿ ಬೆಂಕಿ ಹಚ್ಚಿದ್ದರು. ಜತೆಗೆ, ನೀವೆಲ್ಲರೂ ಇಂದು ಸಾಯುತ್ತೀರಿ ಎಂದು ಕೂಗಾಡಿದ್ದರು ಎಂದು ವರದಿಯಾಗಿದೆ.

ಬೆಂಕಿ ಸಂಪೂರ್ಣವಾಗಿ ಕಟ್ಟಡವನ್ನು ಆವರಿಸಿದ್ದರಿಂದ ಎಡ್ವರ್ಡ್ ಜೇಕಬ್ಸ್ ಮತ್ತು ಅನಸ್ತಾಸಿಯಾ ಅವರಿಗೆ ತಪ್ಪಿಸಿಕೊಳ್ಳಲು ಸಾಧ್ಯವಾಗಿರಲಿಲ್ಲ. ದಟ್ಟ ಹೊಗೆಯಿಂದಾಗಿ ಉಸಿರುಗಟ್ಟಿ ಇಬ್ಬರೂ ಸ್ಥಳದಲ್ಲೇ ಮೃತಪಟ್ಟಿದ್ದರು. ಜೇಕಬ್ಸ್ ಒಂದು ವರ್ಷದ ಹಿಂದೆ ಅಲಿಯಾ ಫಕ್ರಿಯೊಂದಿಗೆ ಬ್ರೇಕ್ ಅಪ್ ಮಾಡಿಕೊಂಡಿದ್ದ. ಆದರೂ ಅಲಿಯಾ, ನನ್ನ ಮಗನನ್ನು ಹಿಂಬಾಲಿಸುತ್ತಿದ್ದಳು ಎಂದು ಜೇಕಬ್ಸ್ ಅವರ ತಾಯಿ ಆರೋಪಿಸಿದ್ದಾರೆ.




ನರ್ಗೀಸ್ ಫಕ್ರಿ

ಜೇಕಬ್ಸ್ ಕುಟುಂಬಸ್ಥರ ಆರೋಪದ ಬಗ್ಗೆ ನರ್ಗೀಸ್ ಫಕ್ರಿ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಆದಾಗ್ಯೂ, ಅವರ ತಾಯಿ ಪ್ರತಿಕ್ರಿಯಿಸಿದ್ದು, 'ನನ್ನ ಮಗಳು ಅಲಿಯಾ ಯಾರನ್ನಾದರೂ ಕೊಲೆ ಮಾಡುತ್ತಾಳೆ ಎಂಬುದನ್ನು ನಂಬಲು ಆಗುತ್ತಿಲ್ಲ. ಅವಳು ಪ್ರತಿಯೊಬ್ಬರ ಬಗ್ಗೆ ಕಾಳಜಿ ವಹಿಸುವುದರ ಜತೆಗೆ ಸಹಾಯ ಮಾಡಲು ಪ್ರಯತ್ನಿಸಿದ್ದಳು' ಎಂದು ಹೇಳಿದ್ದಾರೆ. ಅಲಿಯಾ ಫಕ್ರಿಗೆ 43 ವರ್ಷ ವಯಸ್ಸಾಗಿದೆ. ನಟಿ ನರ್ಗೀಸ್ ಫಕ್ರಿ ಅವರ ಕಿರಿಯ ಸಹೋದರಿಯಾಗಿದ್ದಾರೆ. ಅಲಿಯಾ ಮತ್ತು ನರ್ಗೀಸ್ ಅವರ ತಂದೆ ಮೊಹಮ್ಮದ್ ಫಕ್ರಿ ಪಾಕಿಸ್ತಾನದವರಾಗಿದ್ದು, ಅಲಿಯ ಹುಟ್ಟಿದಾಗಿನಿಂದ ನ್ಯೂಯಾರ್ಕ್‌ನ ಕ್ವೀನ್‌ನಲ್ಲಿಯೇ ವಾಸವಿದ್ದಾರೆ. ☯

# ರಿಷಬ್ ಶೆಟ್ಟಿ 'ಛತ್ರಪತಿ ಶಿವಾಜಿ' ಪಾತ್ರ!

ತೆಲುಗಿನಲ್ಲಿ 'ಹನುಮಾನ್' ಸಿನಿಮಾ ಘೋಷಣೆ ಬೆನ್ನಲ್ಲೇ ನಟ ರಿಷಬ್ ಶೆಟ್ಟಿ ಅವರ ದಿ ಪ್ರೈಡ್ ಆಫ್ ಭಾರತ್ ಛತ್ರಪತಿ ಶಿವಾಜಿ ಮಹಾರಾಜ್ ಸಿನಿಮಾ ಘೋಷಣೆಯಾಗಿದೆ. ಈ ಚಿತ್ರ ಸಂದೀಪ್ ಸಿಂಗ್ ನಿರ್ದೇಶನದ ಚೊಚ್ಚಲ ಸಿನಿಮಾವಾಗಿದೆ. 2027ರ ಜನವರಿ 21ರಂದು ವಿಶ್ವದಾದ್ಯಂತ ಸಿನಿಮಾ ಬಿಡುಗಡೆಯಾಗಲಿದೆ ಎಂದು ಚಿತ್ರತಂಡ ತಿಳಿಸಿದೆ. ಸಂದೀಪ್ ಸಿಂಗ್ ಅವರು 2024ರ ಫೆಬ್ರುವರಿ 16ರಂದು ಈ ಸಿನಿಮಾವನ್ನು ಘೋಷಿಸಿದ್ದರು. ಹಿಂದಿ, ಮರಾಠಿ, ಕನ್ನಡ, ತಮಿಳು ಸೇರಿ ಆರು ಭಾಷೆಗಳಲ್ಲಿ ಸಿನಿಮಾ ಬಿಡುಗಡೆಯಾಗಲಿದೆ.




ಛತ್ರಪತಿ ಶಿವಾಜಿ ಪಾತ್ರದಲ್ಲಿ ರಿಷಬ್ ಶೆಟ್ಟಿ ನಟಿಸುತ್ತಿದ್ದಾರೆ. ಹಿಂದಿಯಲ್ಲಿ ಅನೇಕ ಸೂಪರ್ ಹಿಟ್ ಸಿನಿಮಾಗಳನ್ನು ನೀಡಿರುವ ನಿರ್ದೇಶಕ ಸಂದೀಪ್ ಸಿಂಗ್ ಈ ಸಿನಿಮಾ ನಿರ್ದೇಶನ ಮಾಡಲಿದ್ದಾರೆ. ಸಿನಿಮಾದ ಮೊದಲ ಪೋಸ್ಟರ್ ಈಗಾಗಲೇ ಬಿಡುಗಡೆ ಆಗಿದ್ದು, ಛತ್ರಪತಿ ಶಿವಾಜಿ ಪಾತ್ರದಲ್ಲಿ ರಿಷಬ್ ಶೆಟ್ಟಿ ಮಿಂಚುತ್ತಿದ್ದಾರೆ. 'ಛತ್ರಪತಿ ಶಿವಾಜಿ ಮಹಾರಾಜ್' ಸಿನಿಮಾವನ್ನು ಅವರು ನಿರ್ದೇಶಕ ಸಂದೀಪ್ ಸಿಂಗ್ ಊಹಿಸಿರುವ ರೀತಿ ಅದ್ಭುತವಾಗಿದೆ. ಛತ್ರಪತಿ ಶಿವಾಜಿ ಮಹಾರಾಜರ ಪಾತ್ರ ಅದೆಷ್ಟು ಅದ್ಭುತವಾದುದು ಎಂದರೆ ಕತೆ ಕೇಳಿದ ಕ್ಷಣ ಕಾಲವೂ ಯೋಚಿಸದೆ ಒಪ್ಪಿಕೊಂಡುಬಿಟ್ಟೆ. ಛತ್ರಪತಿ ಶಿವಾಜಿಯವರ ಪಾತ್ರದಲ್ಲಿ ನಟಿಸುವುದು ಪದಗಳಿಗೆ ಮೀರಿದ ಗೌರವ. ಛತ್ರಪತಿ ಶಿವಾಜಿ ಮಹಾರಾಜರು ರಾಷ್ಟ್ರೀಯ ಹೀರೋ, ಶತಮಾನಗಳ ಕಾಲ ಅವರು ಪ್ರಭಾವ ಬೀರಿದ್ದಾರೆ. ಅಂಥಹಾ ಅದ್ಭುತವಾದ ನಾಯಕನ ಪಾತ್ರಕ್ಕೆ ಜೀವ ತುಂಬುತ್ತಿರುವುದು ನನಗೆ ದೊರಕಿದ ಅಭೂತಪೂರ್ವ ಅವಕಾಶ ಮತ್ತು ಗೌರವ ಎಂದಿದ್ದಾರೆ ರಿಷಬ್ ಶೆಟ್ಟಿ. ☯



Vol. 40 No. 27 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
Email: policenewsreporter@gmail.com